ಇವತ್ತು ನಾವು ಇದರ ಬಗ್ಗ ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೋಗಬೇಕೆಂದು ಇದ್ದೇವೆ. ಇದರ ಬಗ್ಗೆ ಮೇಲ್ಮನೆಯಲ್ಲಿ ವಿವರವಾಗಿ ಹೇಳಿದ್ದೇನೆ. ನಾನು ಇಲ್ಲಿ ಎರಡು ಮೂರು ವಿಷಯಗಳನ್ನು ಹೇಳಬೇಕಾಗಿದೆ. ಹಿಂದೆ ಮಾನ್ಯ ರಾಮಾಜೋಯಿಸ್‌ರವರ ತೀರ್ಮಾನಕ್ಕೆ ಖಾಸಗಿಯವರು ಅಪೀಲು ಹೋಗಿದ್ದರು. ಈಗ ಶ್ರೀ ಚಂದ್ರಕಾಂತರಾಜ ಅರಸ್‌ರವರು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಇವತ್ತು ಕೋರ್ಟಿಗೆ ರಜ ಇರುವುದರಿಂದ ನಾಳೆ ಕೋರ್ಟಿಗೆ ತೆಗೆದುಕೊಂಡು ಹೋಗಿ ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿಯಬೇಕೆನ್ನುವುದೇ ನಮ್ಮ ಉದ್ದೇಶ. ಜಡ್ಜ್‌ಮೆಂಟ್‌ನ ಬಗ್ಗೆ ನಿರ್ವಿವಾದ ಸಂಶಯಗಳು ಇವೆ. ನ್ಯಾಯಾಲಯ ಜಡ್ಜ್‌ಮೆಂಟ್‌ನ ಬಗ್ಗೆ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಏನಾದರೂ ಸಲಹೆಗಳು ಇದ್ದರೆ ಕೊಡಿ ಅದನ್ನು ಸ್ವಾಗತ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ಹಣ ವಸೂಲಿ ಮಾಡಿಕೊಂಡು ಕಾರ್ಯಕ್ರಮ ಮಾಡುತ್ತಿದ್ದಾರೆ ಮಾನ್ಯ ಗೃಹ ಸಚಿವರು ಕಾರ್ಯಕ್ರಮಕ್ಕೆ ಹೋಗುತ್ತಾರೋ ಇಲ್ಲವೋ ಗೊತ್ತಿಲ್ಲ. ೬–೩೦ ಗಂಟೆಗೆ ಕಾರ್ಯಕ್ರಮ ಇತ್ತು.

ಶ್ರೀ ಬಿ. ರಾಚಯ್ಯ.—ನಾನು ಯಾವುದೇ ಕಾರ್ಯಕ್ರಮವನ್ನು ಒಪ್ಪಿಕೊಂಡಿಲ್ಲ, ನಾನು ಹೋಗುವುದೂ ಇಲ್ಲ.

ವಿತ್ತೀಯ ಕಾರ್ಯ ಕಲಾಪಗಳು :

೧೯೮೫–೮೬ರ ಬೇಡಿಕೆ ಮೇಲಿನ ಚರ್ಚೆ (ಮುಂದುವರಿದುದು)

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ಎಸ್. ಪುಟ್ಟಸ್ವಾಮಿಯವರೇ ಮಾತನಾಡಿ.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ದೊಡ್ಡ ಮಧ್ಯಮ ಕೈಗಾರಿಕಾ ಸಚಿವರು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಮತ್ತು ರೇಷ್ಮೆ ಖಾತೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ೧೯೮೩ನೇ ಇಸವಿಯಲ್ಲಿ ಮಾನ್ಯ ಜೆ. ಎಚ್. ಪಟೇಲರು ಮತ್ತು ಅವರ ಸರ್ಕಾರ ಅಧಿಕಾರ ವಹಿಸಿಕೊಂಡ ಮೇಲೆ ನಮ್ಮ ಕರ್ನಾಟಕ ರಾಜ್ಯದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಒಂದು ಹೊಸ ರೂಪವನ್ನು ಒಂದು ಹೊಸ ನೀತಿಯನ್ನು ಕೊಡುವ ಉದ್ದೇಶದಿಂದ ನಮ್ಮದೇ ಆದಂತಹ ಕರ್ನಾಟಕ ರಾಜ್ಯ ಸರ್ಕಾರದ ಕೈಗಾರಿಕಾ ನೀತಿಯನ್ನು ರೂಪಿಸುತ್ತೇವೆಂದು ಘೋಷಣೆ ಮಾಡಿ ಕಳೆದ ಎರಡೂವರೆ ವರ್ಷಗಳಿಂದ ನಾವು ಕೆಲಸ ಮಾಡಿದ್ದೇವೆಂದು ಅವರು ಕೊಟ್ಟಿರತಕ್ಕ ವರದಿಯಲ್ಲಿ ಹೇಳಿದ್ದಾರೆ. ನಾನು ಮಾತನಾಡುವುದಕ್ಕೆ ಮೊದಲು ಮಾತನಾಡಿದಂತಹ ಸದಸ್ಯರುಗಳು ನಮ್ಮ ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಬಂದಮೇಲೆ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಕೈಗಾರಿಕಾಭಿವೃದ್ಧಿಯಲ್ಲಿ ಯಾವುದೇ ಹೆಸರು ಗಳಿಸಿದಂತಹ ರಾಜ್ಯದವರು ನಾವಲ್ಲ, ಸ್ವಾತಂತ್ರ್ಯ ಬರುವುದಕ್ಕೆ ಪೂರ್ವದಲ್ಲಿಯೇ ಕೈಗಾರಿಕೆಯಲ್ಲಿ ಹೆಸರು ಪಡೆದಿದ್ದಂತಹ ಖ್ಯಾತಿಯನ್ನು ಹೊಂದಿದಂತಹ ರಾಜ್ಯವೆಂದು ಹೇಳಿದ್ದಾರೆ. ನಾನು ಕೂಡ ಅದೇ ಮಾತನ್ನು ಪುನರುಚ್ಚಾರ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನನಗನಿಸುತ್ತದೆ ೧೯೮೩ನೇ ಸಾಲಿನಲ್ಲಿ ಒಂದು ಹೊಸ ಕೈಗಾರಿಕಾ ನೀತಿಯನ್ನು ನಮ್ಮ ರಾಜ್ಯಕ್ಕೆ ರೂಪಿಸಿ ಅದನ್ನು ಘೋಷಣೆ ಮಾಡಿ ಜಾರಿಗೆ ತಂದ ಹಂತದಲ್ಲಿ ಕರ್ನಾಟಕ ರಾಜ್ಯದಲ್ಲಿರತಕ್ಕ ದೊಡ್ಡ ಪ್ರಮಾಣದ ಮಧ್ಯಮ ಪ್ರಮಾಣದ ಕೈಗಾರಿಕೆಗಳಾಗಲೀ, ಸಣ್ಣ ಪ್ರಮಾಣದ ಕೈಗಾರಿಕೆಗಳಾಗಲೀ ಅಥವಾ ಹಳ್ಳಿಯಲ್ಲಿರತಕ್ಕ ಕೈಗಾರಿಕೆಗಳಾಗಲಿ, ರೇಷ್ಮೆ ಕೈಗಾರಿಕೆಗೆ ಸಂಬಂಧಪಟ್ಟಂತಹ ವಿಚಾರವಾಗಲಿ ಅದರ ಬಗ್ಗೆ ಸ್ವಲ್ಪ ಸ್ಥೂಲವಾಗಿ ವಿಚಾರ ಮಾಡಬೇಕಾಗಿತ್ತು. ಈಗ ಪರಿಸ್ಥಿತಿ ಏನಾಗಿದೆ ಅಂದರೆ ಹಾಲಿ ಇರತಕ್ಕಂತಹ ಸರ್ಕಾರಿ ವಲಯದ ಕೈಗಾರಿಕೆಗಳಾಗಲೀ, ಖಾಸಗಿ ವಲಯಗಳಲ್ಲಿರತಕ್ಕ ಕೈಗಾರಿಕೆಗಳಾಗಲೀ ಈ ಎರಡೂ ವಲಯಗಳಲ್ಲಿರತಕ್ಕ ಪರಿಸ್ಥಿತಿ ಏನಿದೆ ಅದನ್ನು ವಿಚಾರ ಮಾಡಿ ಅದಕ್ಕೊಂದು ಶಕ್ತಿಯನ್ನು ತುಂಬತಕ್ಕಂತಹ ಕೆಲಸ ಮಾಡಬೇಕಾಗಿತ್ತು. ಅದರಲ್ಲಿ ಇರತಕ್ಕ ಲೋಪದೋಷಗಳನ್ನು ಸರಿಪಡಿಸಿ ಅವರ ಅಭಿವೃದ್ಧಿಗೆ

ಕೆಲವು ಕಾರ್ಯಕ್ರಮಗಳನ್ನು ಹಾಕತಕ್ಕ ಕೆಲಸವನ್ನು ಮಾಡಿದ್ದರೆ ಅದು ಸರಿಯಾಗುತ್ತಿತ್ತು ಎಂದು ನನಗೆನಿಸುತ್ತದೆ. ಏನೋ ಒಂದು ಮಾಡಿದ್ದೀರಿ ಸಂತೋಷ. ತಾವು ಹೊಸದಾಗಿ ಸರ್ಕಾರದ ಆಡಳಿತವನ್ನು ಹಿಡಿದಮೇಲೆ ಬಹಳ ಉತ್ಸಾಹದಲ್ಲಿ ಹೊಸ ಕೈಗಾರಿಕಾ ನೀತಿಯನ್ನು ಹಾಕಿಕೊಂಡಿದ್ದೀರಿ ಬಹಳ ಸಂತೋಷ. ಆದರೆ ತಾವು ಏನು ಘೋಷಣೆ ಮಾಡಿದ್ದೀರಿ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗೆ ಒಂದು ಹೊಸ ರೂಪವನ್ನು ಕೊಡುತ್ತೇವೆ, ವಿಶಿಷ್ಟತೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಬಡತನವನ್ನು ಹೋಗಲಾಡಿಸುವುದಕ್ಕೆ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಂಡು, ಅವರ ಜೀವನ ಆಧಾರಕ್ಕೆ ಅವಕಾಶವನ್ನು ಕಲ್ಪಿಸಿಕೊಡತಕ್ಕ ವ್ಯವಸ್ಥೆಯನ್ನು ಅಳವಡಿಸಿ ಕೈಗಾರಿಕಾ ನೀತಿಯನ್ನು ರೂಪಿಸಿ ಅದನ್ನು ಕಾರ್ಯ ರೂಪಕ್ಕೆ ತರುವಂತಹ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತಿತ್ತು. ನಿಮ್ಮ ಘೋಷಣೆ ಪ್ರಕಾರ ಒಂದು ತಿಂಗಳಿಗೆ ಒಂದು ಸಾವಿರ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ನೀವು ಕೊಟ್ಟಂತಹ ಮಾತನ್ನು ಉಳಿಸಿಕೊಂಡಿಲ್ಲವೆಂದು ಹೇಳಿದರೆ ನೀವು ತಪ್ಪು ತಿಳಿಯಲಾರಿರಿ ಎಂದು ಭಾವಿಸುತ್ತೇನೆ.

ಒಂದೊಂದಾಗಿ ಸರ್ಕಾರಿ ವಲಯದಲ್ಲಿರತಕ್ಕ ಕೈಗಾರಿಕೆಗಳು ಪೂರ್ತಿ ನಷ್ಟ ಮಾಡುತ್ತಿವೆ. ಒಂದೊಂದಾಗಿ ಇವನ್ನು ನಾವು ಏಕೆ ಖಾಸಗಿ ವಲಯಕ್ಕೆ ಕೊಡಬಾರದು ಅಥವಾ ಕೇಂದ್ರ ಸರ್ಕಾರ ವಹಿಸಿಕೊಳ್ಳಲಿ ಎನ್ನುವ ವಿಚಾರ ನಮ್ಮ ಸರ್ಕಾರದ ಅದರಲ್ಲೂ ನಮ್ಮ ಕೈಗಾರಿಕಾ ಖಾತೆಯ ಹೊಣೆಯನ್ನು ಹೊತ್ತಿರತಕ್ಕ ಮಂತ್ರಿಗಳ ತಲೆಗೆ ಏಕೆ ಬಂತೋ ಎಂದು ಅನೇಕ ಜನ ಸದಸ್ಯರು ಪ್ರಶ್ನೆ ಮಾಡಿದ್ದಾರೆ. ಹಾಲಿ ಇರತಕ್ಕ ಪರಿಸ್ಥಿತಿ ಹೀಗೆ ಇರುವಾಗ ಅವುಗಳ ಬಗ್ಗೆ ನಾವು ಚಿಂತನೆ ಮಾಡಿ ಅವನ್ನು ಸುಭದ್ರಗೊಳಿಸತಕ್ಕ ಒಂದು ವ್ಯವಸ್ಥೆ ಬಗ್ಗೆ ನಾವು ಚಿಂತನೆ ಮಾಡದೇ ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ನಾವು ಎಲ್ಲಾ ಕೈಗಾರಿಕೆಗಳನ್ನು ಒಂದೊಂದಾಗಿ ಬೇರೆಯವರಿಗೆ ಮಾರತಕ್ಕ ಒಂದು ವ್ಯವಸ್ಥೆಯನ್ನು ವಿಚಾರ ಮಾಡಿದ್ದಾರೋ ಏನೋ ಎಂದು ಮತ್ತೊಮ್ಮೆ ಕೇಳಬೇಕಾಗುತ್ತದೆ. ಸ್ವಾಮಿ ನಿಜ, ಈ ಹೊಸ ಕೈಗಾರಿಕಾ ನೀತಿಯಿಂದಾಗಿ ಬಹಳ ಹಿಂದುಳಿದಿರತಕ್ಕ ಭಾಗದಲ್ಲಿ ಸಣ್ಣ ಪ್ರಮಾಣದ ಗ್ರಾಮಾಂತರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹ ಕೊಟ್ಟಿದ್ದಾರೆ. ಕರಕುಶಲ ಕೈಗಾರಿಕೆ, ಕೈಮಗ್ಗಗಳಿಗೆ ಅನೇಕ ರೀತಿಯ ಪ್ರೋತ್ಸಾಹವನ್ನು ಕೊಡತಕ್ಕ ಕಾರ್ಯಕ್ರಮವನ್ನು ಗ್ರಾಮಾಂತರ ಪ್ರದೇಶದಲ್ಲಿ ಹಾಕಿಕೊಂಡು ಅವಕ್ಕೆ ಶಕ್ತಿ ತುಂಬತಕ್ಕ ಕೆಲಸ ಮಾಡಿದ್ದಾರೆ. ನಿರುದ್ಯೋಗಿ ವಿದ್ಯಾವಂತರನ್ನು ಕೈಗಾರಿಕೆಗಳಲ್ಲಿ ತೊಡಗಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಇದನ್ನು ಇಲ್ಲವೆಂದು ಹೇಳುವುದಿಲ್ಲ, ಇವತ್ತು ಸರ್ಕಾರ ಯಾವುದೇ ಒಂದು ಕಾರ್ಯಕ್ರಮವನ್ನು ಜಾರಿಗೆ ಕೊಡುವಾಗ ಅದನ್ನು ವಾಸ್ತವಿಕವಾಗಿ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ ವಿಚಾರ ಮಾಡತಕ್ಕ, ಇದರ ಬಗ್ಗೆ ಒಳ್ಳೆಯ ಕೆಲಸ ನಡೆದಿದ್ದರೆ ಅದಕ್ಕೆ ಶಹಬಾಸ್‌ಗಿರಿ ಕೊಡತಕ್ಕದ್ದು ಒಳ್ಳೆಯ ಸಂಪ್ರದಾಯವಾಗಿದೆ. ಅಥವಾ ಏನಾದರೂ ನ್ಯೂನತೆ ಇದ್ದರೆ ಅದನ್ನು ಜಾರಿಗೆ ಕೊಡತಕ್ಕ ಹಂತದಲ್ಲಿ ತೊಡಕು ಇದ್ದರೆ, ಅದರಲ್ಲಿ ನಷ್ಟ ಆಗುತ್ತದೆ ಎಂಬುದು ಕಂಡು ಬಂದರೆ ಅಂತಹ ನ್ಯೂನ್ಯತೆಗಳನ್ನು ತೋರಿಸತಕ್ಕದ್ದು ವಿರೋಧ ಪಕ್ಷಗಳ ಕೆಲಸವಾಗಿರುತ್ತದೆ. ಆದರೆ ಸರ್ಕಾರ ಮಾಡತಕ್ಕದ್ದನ್ನೆಲ್ಲಾ ವಿರೋಧಪಕ್ಷ ವಿರೋಧ ಮಾಡುತ್ತದೆ ಎಂದು ಸರ್ಕಾರ ತಿಳಿದುಕೊಂಡರೆ ಅದು ತಪ್ಪು ಎಂದು ನಾನು ಹೇಳುತ್ತೇನೆ. ಸರ್ಕಾರ ಎಲ್ಲಿ ಎಡುವುತ್ತಿದೆ, ಎಲ್ಲಿ ಜಾರಿಗೆ ಕೊಡತಕ್ಕದ್ದರಲ್ಲಿ ತೊಡಕು ತೊಂದರೆ ಅನುಭವಿಸುತ್ತಿದೆ, ಎಲ್ಲಿ ಸರ್ಕಾರದ ಹಣ ಪೋಲು ಆಗುತ್ತಿದೆ ಅಥವಾ ಹಾಕತಕ್ಕ ಬಂಡವಾಳ ಕರಗಿ ಹೋಗುತ್ತಿದೆ ಎನ್ನುವ ಬಗ್ಗೆ ಕಂಡಾಗ ಅದನ್ನು ತಮ್ಮ ಗಮನಕ್ಕೆ ತರುವುದು ಸಾಧುವಾದುದು ಮತ್ತು ಅದನ್ನು ನಮ್ಮ ಕರ್ತವ್ಯ ಎಂದು ನಾನು ಹೇಳುತ್ತೇನೆ. ಈ ಒಂದು ದೃಷ್ಟಿಯಿಂದ ಏನು ಒಂದು ಹೊಸ ಕೈಗಾರಿಕಾ ನೀತಿಯನ್ನು ಸರ್ಕಾರದವರು ರೂಪಿಸಿಕೊಂಡು ಕಳೆದ ಎರಡೂವರೆ ವರ್ಷಗಳಿಂದ ಜಾರಿಗೆ ಕೊಟ್ಟಿದ್ದಾರೆ ಅದರಲ್ಲಿ ನನಗನ್ನಿಸುತ್ತದೆ ಶೇಕಡಾ ೫೦ರಷ್ಟು ಭಾಗದ ಫಲವನ್ನು ಪಡೆದಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಇದರಲ್ಲಿ ನಾವು ವಿಫಲತೆಯನ್ನು ಹೊಂದಿದ್ದೇವೆಯೋ ಏನೋ ಎಂಬ ಸಂದೇಹವನ್ನು ವ್ಯಕ್ತಪಡಿಸುತ್ತೇನೆ, ಮತ್ತು ಅನೇಕ ಜನ ಮಾನ್ಯ ಸ್ನೇಹಿತರು ಮಾತನಾಡಿದ್ದಾರೆ. ಈ ಕೈಗಾರಿಕಾ ಬೇಡಿಕೆಯ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ, ನಮ್ಮ ಭಾಗದಲ್ಲಿ ಪ್ರಾಮುಖ್ಯವಾಗಿ ಇರತಕ್ಕ ರೇಷ್ಮೆ ಕೈಗಾರಿಕೆ ಬಗ್ಗೆ ಸ್ವಲ್ಪ ಹೆಚ್ಚು ಮಾತನಾಡುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಇಡೀ ರಾಷ್ಟ್ರದಲ್ಲಿ ಕೆಲವು ರಾಜ್ಯಗಳಲ್ಲಿ ರೇಷ್ಮೆ ಕೈಗಾರಿಕೆ ಇದ್ದರೂ ಕೂಡಾ ಹೆಚ್ಚಾಗಿ ಅಂದಿನ ಮೈಸೂರು ಈಗಿನ ಕರ್ನಾಟಕವೇ ರೇಷ್ಮೆಗೆ ಹೆಚ್ಚಿನ ಕೊಡುಗೆಯನ್ನು ಕೊಟ್ಟಿದೆ.

'ಮೈಸೂರು ರೇಷ್ಮೆ' ಎಂದು ಹೆಸರುವಾಸಿಯಾಗಿ ಒಂದು ಒಳ್ಳೆಯ ಹೆಸರನ್ನು ಇದು ಗಳಿಸಿದೆ ಎಂದರೆ
ತಪ್ಪಾಗಲಾರದು. ಕಳೆದ ೫೦-೬೦ ವರ್ಷಗಳ ಹಿಂದೆ ರೇಷ್ಮೆ ಕೈಗಾರಿಕೆ ಅಥವಾ ಉದ್ಯಮ
ಪ್ರಾರಂಭವಾಯಿತೋ ಆಗ ಏನು ಒಂದು ತಳಿಯನ್ನು ಪ್ರಾರಂಭ ಮಾಡಿ, ರೇಷ್ಮೆ ಮೊಟ್ಟೆ ಮಾಡಿ
ಅದರಿಂದ ಗೂಡನ್ನು ತಯಾರು ಮಾಡಿ ಅದರಿಂದ ರೇಷ್ಮೆಯನ್ನು ತಯಾರು ಮಾಡತಕ್ಕ ಕೆಲಸವನ್ನು
ನಡೆಸಿಕೊಂಡು ಬಂದಿದ್ದಾರೋ ಅದನ್ನು ಉತ್ತಮಪಡಿಸಬೇಕು ಎಂದು ಹೇಳುತ್ತೇನೆ. ಸುಮಾರು
೫೦-೬೦ ವರ್ಷಗಳಲ್ಲಿ ಪ್ರಾರಂಭವಾದ ಮೂಲ ತಳಿಯನ್ನೇ ವಿಶ್ವ ಮಾರುಕಟ್ಟೆಯಲ್ಲಿ ನಾವು ಇತರ
ರಾಷ್ಟ್ರಗಳ ಜೊತೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ನಮ್ಮ ರೇಷ್ಮೆ ಉದ್ಯಮದ ಮಟ್ಟವನ್ನು ಹೆಚ್ಚು
ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆಯೋ ಅದಕ್ಕೆ ಅನುಗುಣವಾಗಿ ನಮ್ಮಲ್ಲಿ ಇವತ್ತು ಕೇಂದ್ರ
ರೇಷ್ಮೆ ಮಂಡಲಿಯ ಆಶ್ರಯದಲ್ಲಿ ಒಂದು ರೀಸರ್ಚ್ ಸೆಂಟರ್ ಕೂಡಾ ಇದೆ. ಇವತ್ತು ನನಗನ್ನಿಸುತ್ತದೆ.
ಇವತ್ತು ಇದಕ್ಕೆ ಕೇಂದ್ರ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದೆ. ನಮ್ಮ ಈ ರೇಷ್ಮೆ
ಉದ್ಯಮದಲ್ಲಿ ಹೊಸ ಹೊಸ ತಳಿಗಳನ್ನು ಕಂಡು ಹಿಡಿಯತಕ್ಕ ಕೆಲಸದಲ್ಲಿ ಎಷ್ಟು ವರ್ಷಗಳಿಂದ ಸುಮಾರು
ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡಾ ನಮಗೆ ತಿಳಿದ ಹಾಗೆ ತಳಿಗಳನ್ನು ಸಂಧಾರಿಸ
ತಕ್ಕ ಕೆಲಸದಲ್ಲಿ ಅಷ್ಟು ಹೆಚ್ಚಿನ ಕೆಲಸ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದೆಂದು ನಾನು ಹೇಳು
ತ್ತೇನೆ. ಈಗ ಹೈಬ್ರೀಡ್ ತಳಿ, ಬೈವೋಲ್ಟೀನ್‌ನ್ನು ಪ್ರಾರಂಭ ಮಾಡಿ ನಮ್ಮ ರೇಷ್ಮೆಯ ಗುಣಮಟ್ಟ
ವನ್ನು ಹೆಚ್ಚು ಮಾಡಬೇಕು. ಹಾಗೂ ಉತ್ಪತ್ತಿಯನ್ನೂ ಸಹಾ ಹೆಚ್ಚು ಮಾಡಬೇಕು. ಇನ್ನು
ನಾವು ನಮ್ಮ ರಾಜ್ಯದ ಒಂದು ಯೋಜನೆಯ ಜೊತೆಯಲ್ಲಿ ಈ ರೇಷ್ಮೆ ಕೈಗಾರಿಕೆ ಮತ್ತು ಉದ್ಯಮ
ವನ್ನು ಅಭಿವೃದ್ಧಿ ಮಾಡಬೇಕೆಂದು ಕಳೆದ ೫ ವರ್ಷಗಳಲ್ಲಿ ವಿಶ್ವ ಬ್ಯಾಂಕಿನ ನೆರವು ಪಡೆದು ಸುಮಾರು
೮೦ ಕೋಟಿ ರೂಪಾಯಿಗಳ ಒಂದು ಯೋಜನೆ ತಯಾರು ಮಾಡಿ. ಆ ಮೂಲಕ ಖರ್ಚು ಮಾಡಿ ಈಗ
೫ನೇ ವರ್ಷದ ಕೊನೆಗೆ ಬಂದಿದ್ದೇವೆ. ಅದರಲ್ಲಿ ನಾವು ರೇಷ್ಮೆಯ ಗುಣವನ್ನು ಹೆಚ್ಚು ಮಾಡುವುದು
ಅಲ್ಲ ಅದರ ಪ್ರಮಾಣವನ್ನೂ ಹೆಚ್ಚು ಮಾಡಬೇಕಾಗುತ್ತದೆ. ವಿಶ್ವ ಮಾರುಕಟ್ಟೆಯಲ್ಲಿ ನಮ್ಮ ರೇಷ್ಮೆ
ಕೂಡಾ ಇತರ ರಾಷ್ಟ್ರಗಳ ರೇಷ್ಮೆಯ ಜೊತೆ ಸ್ಪರ್ಧೆಗೆ ಬರಬೇಕೆಂದು ಹೇಳಿ ಆ ಉದ್ದೇಶವನ್ನು ಇಟ್ಟು
ಕೊಂಡು ನಾವು ಕೆಲಸ ಮಾಡತಕ್ಕದ್ದು ಸಹಜ. ಆದರೆ ನಮ್ಮ ದುರ್ದೈವ, ಮೂಲಭೂತವಾಗಿ ನಾವು
ರೇಷ್ಮೆ ಉದ್ಯಮದಲ್ಲಿ ಹಿಪ್ಪನೇರಳೆ ಸೊಪ್ಪನ್ನು ಅಭಿವೃದ್ಧಿ ಮಾಡತಕ್ಕ, ಅದರಲ್ಲಿ ಒಂದು ಪೌಷ್ಠಿಕಾಂಶ
ವನ್ನು ತುಂಬತಕ್ಕ ಮತ್ತು ಒಂದು ಶಕ್ತಿಯನ್ನು ತುಂಬತಕ್ಕ ಕೆಲಸಕ್ಕೆ ಈ ೮೦ ಕೋಟಿ ರೂಪಾಯಿ
ಹಣದಲ್ಲಿ ಹೆಚ್ಚು ಭಾಗವನ್ನು ತೊಡಗಿಸುವುದಕ್ಕೆ ಆಗಿಲ್ಲವೆಂದು ನಾನು ಹೇಳುತ್ತೇನೆ.
ಇದರ ಜೊತೆ ಈ ಹಿಪ್ಪನೇರಳೆ ಸೊಪ್ಪನ್ನು ಪೌಷ್ಠಿಕಯುಕ್ತವಾಗಿ ಮಾಡಿ ಅದರ ಶಕ್ತಿಯನ್ನು ಹೆಚ್ಚು
ಮಾಡುವುದಕ್ಕೆ ಹಾಗೂ ನೀರಾವರಿಯಲ್ಲಿ ಹಿಪ್ಪನೇರಳೆಯನ್ನು ಬೆಳೆಯಲಿಕ್ಕೆ ಯೋಜನೆಯನ್ನು
ಮಾಡುವುದಕ್ಕೆ ಆಗಲಿಲ್ಲವೋ ಅದೇ ರೀತಿ ಉತ್ತಮ ರೀತಿಯ ತಳಿ. ಇಂಪ್ರೂವ್ಡ್ ರೇಸ್ ಎಂದು ಏನು
ಒಂದು ರೇಷ್ಮೆ ತಳಿ ಇದೆ ಅದನ್ನು ನಮ್ಮ ಕರ್ನಾಟಕದಲ್ಲೇ ಉಳಿಸಿಕೊಳ್ಳತಕ್ಕ ಪ್ರಯತ್ನವನ್ನು ನಾವು
ಮಾಡಬೇಕಾಗಿದೆ. ಇವತ್ತು ಬೈವೋಲ್ಟೀನ್ ರೇಷ್ಮೆ ಬೆಳೆಯತಕ್ಕದ್ದು ಅನೇಕ ಭಾಗಗಳಲ್ಲಿ ಹೊಂದುತ್ತಿಲ್ಲ
ಎನ್ನುವ ವಿಷಯ ಮುಖ್ಯ ಅಧಿಕಾರಿಗಳಿಗಾಗಲೀ ಅಥವಾ ಈ ಖಾತೆಯನ್ನು ಹೊಂದಿರತಕ್ಕ ಮಂತ್ರಿಗಳಿ
ಗಾಗಲೀ ಅರಿವು ಆಗಿರಬಹುದು. ನಿಜ, ಇವತ್ತು ನಮ್ಮಲ್ಲಿ ಮಳೆ ಆಶ್ರಯದಲ್ಲಿ ಬೆಳೆಯತಕ್ಕ ಸುಮಾರು
೭೦-೮೦ ಸಾವಿರ ಎಕರೆ ಇರತಕ್ಕ ಹಿಪ್ಪನೇರಳೆಯನ್ನು ಒಮ್ಮೆಲೇ ತೆಗೆಯಬೇಕೆಂದು ಪ್ರಯತ್ನ ಮಾಡಿದರೆ
ಸಾಧ್ಯವಾಗುವುದಿಲ್ಲವೆಂದು ನಾನಾದರೂ ಹೇಳಲು ಇಷ್ಟಪಡುತ್ತೇನೆ. ಬೈವೋಲ್ಟೀನ್ ತಳಿ ಪ್ರಾರಂಭ
ಮಾಡಿ ಅದನ್ನು ಬೆಳೆಸಿ ನಮ್ಮ ರೇಷ್ಮೆ ಗುಣಮಟ್ಟವನ್ನು ಹೆಚ್ಚು ಮಾಡಿ, ಅದರ ಉತ್ಪಾದನೆ ಹೆಚ್ಚು
ಮಾಡಬೇಕಾದರೆ ಸ್ವಲ್ಪ ಈ ರೇಷ್ಮೆ ಸೊಪ್ಪನ್ನು ಬೆಳೆಯತಕ್ಕದ್ದನ್ನು ಸುಧಾರಿಸುವ ಒಂದು ಯೋಜನೆ
ಯನ್ನು ತಯಾರು ಮಾಡಿ ಅದನ್ನು ಹಂತಹಂತವಾಗಿ ಬೆಳೆಯಬೇಕಾಗುತ್ತದೆ. ನಮ್ಮಲ್ಲಿ ಮಳೆ
ಆಶ್ರಯದಲ್ಲಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಸಲಿಕ್ಕೆ ಹಂತ ಹಂತವಾದ ಒಂದು ಯೋಜನೆಯನ್ನು
ತಯಾರು ಮಾಡಿ ಮತ್ತೊಮ್ಮೆ ಬೇಕಾದರೆ ವಿಶ್ವ ಬ್ಯಾಂಕಿನಿಂದ ೧೦೦ ಕೋಟಿ ರೂಪಾಯಿಗಳ ನೆರವು
ಪಡೆದು ಈ ಸೊಪ್ಪನ್ನು ಬೆಳೆಯತಕ್ಕದ್ದಕ್ಕೆ ಆದ್ಯತೆ ಕೊಟ್ಟು ಆಮೇಲೆ ಸುಧಾರಿಸಿದ ತಳಿ, ಮೊಟ್ಟೆ
ತಯಾರು ಮಾಡಿ, ಹವಾಗುಣಕ್ಕೆ ಹೊಂದಿಕೊಳ್ಳತಕ್ಕ ತಳಿಯನ್ನು ನಾವು ಕಂಡುಹಿಡಿದು ಅವರಿಗೆ ಅದನ್ನು
ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಿ ನಮ್ಮ ರೇಷ್ಮೆ ಉದ್ಯಮ ಕೈಗಾರಿಕೆಯನ್ನು ಅಭಿವೃದ್ಧಿಪಡಿಸು
ವುದಕ್ಕೆ ಸಾಧ್ಯವೇನೋ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತು ನಮ್ಮಲ್ಲಿ ಈಗಾಗಲೇ ಈ ರೇಷ್ಮೆ ನೂಲನ್ನು ಬಿಚ್ಚತಕ್ಕ ಸಿಲ್ಕ್ ಫಿಲೇಚರ್‌ಗಳು ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿವೆ. ಮೊದಲು ಖಾಸಗಿಯವರೇ ಇದನ್ನು ಮಾಡುತ್ತಿದ್ದರು. ಅನೇಕ ವರ್ಷಗಳಿಂದ ಸರ್ಕಾರ ಇದನ್ನು ವಹಿಸಿಕೊಂಡು ಮಾಡುತ್ತಿದೆ. ಈ ಎಲ್ಲಾ ರೇಷ್ಮೆ ಫಿಲೇಚರ್‌ಗಳಿಂದ ನಮಗೆ ಆಗಿಲತಕ್ಕ ನಷ್ಟ ೩ ಕೋಟಿ ರೂ. ಗಳಿಗೂ ಹೆಚ್ಚು ಆಗಿದೆ ಎಂದು ಅಂಕಿ ಸಂಖ್ಯೆಗಳಿಂದ ನಮಗೆ ತಿಳಿದುಬರುತ್ತಿದೆ.

೭. ಪಿ. ಎಂ.

ನಿಜ, ಅದನ್ನು ಒಪ್ಪಿಕೊಂಡೆ ಆದರೆ ಯಾವುದೋ ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಯುದ್ಧಕ್ಕೆ ಬೇಕಾದ ಪ್ಯಾರಾಚೂಟ್‌ಗೆ ರೇಷ್ಮೆಯನ್ನು ಒದಗಿಸತಕ್ಕ ಸಂದರ್ಭದಲ್ಲಿ ಖಾಸಗಿಯವರು ಅವತ್ತು ಸಿಕ್ಕಿದಂತಹ ಮೆಷಿನ್ ಅನ್ನು ಅಳವಡಿಸಿಕೊಂಡು ತಯಾರು ಮಾಡಿದಂತಹ ಸಿಲ್ಕ್ ಫಿಲೇಚರ್‌ಗಳನ್ನು ಸರ್ಕಾರದವರು ವಹಿಸಿಕೊಂಡು ೨೦–೩೦ ವರ್ಷಗಳಿಂದ ಅದನ್ನೇ ಅವರಿಗೆ ಉಪಯೋಗ ಮಾಡಿಕೊಂಡು ನೂಲನ್ನು ಬಿಚ್ಚತಕ್ಕ ಕೆಲಸ ಮಾಡುತ್ತಿದ್ದಾರೆ. ನಾವು ಹಂತಹಂತವಾಗಿ ೭ನೇ ಯೋಜನೆಯಲ್ಲಾಗಲಿ, ೫ನೇ ಯೋಜನೆಯಲ್ಲಾಗಲಿ ಅಥವಾ ೬ನೇ ಯೋಜನೆಯಲ್ಲಾಗಲಿ ಅದನ್ನೆಲ್ಲ ಬದಲಾವಣೆ ಮಾಡಿಕೊಂಡು ಉತ್ತಮವಾದ ರೀತಿಯಲ್ಲಿ, ನಷ್ಟವನ್ನು ತಗ್ಗಿಸುವ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳತಕ್ಕ ಕೆಲಸವನ್ನು ಮಾಡಲಿಲ್ಲ. ವಿಶ್ವ ಬ್ಯಾಂಕಿನವರು ೮೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರತಕ್ಕ ಯೋಜನೆಯನ್ನು ಕೂಡ ಬದಲಾವಣೆ ಮಾಡಿಲ್ಲ. ನಮ್ಮಲ್ಲಿ ಒಂದೆರಡು ನೂಲು ಬಿಚ್ಚತಕ್ಕ ಸಿಲ್ಕ್ ಫಿಲೇಚರ್ ಮತ್ತು ಕೈಮಗ್ಗದ ಬಟ್ಟೆ ಮಾಡತಕ್ಕದರ ಬಗ್ಗೆ ಮೈಸೂರಿನ ಕಾರ್ಖಾನೆಯಲ್ಲಿ ಮಾತ್ರ ಹೊಸದಾಗಿ ನವೀಕರಣ ಮಾಡತಕ್ಕ ಕೆಲಸವನ್ನು ಕೈಗೊಂಡಿದ್ದಾರೆ. ಉಳಿದ ಫಿಲೇಚರ್‌ಗಳನ್ನು ನವೀಕರಣ ಮಾಡತಕ್ಕ ಕೆಲಸವನ್ನು ಕೈಗೊಂಡಿಲ್ಲ. ಅದನ್ನು ಹಂತಹಂತವಾಗಿ ವರ್ಷಕ್ಕೆ ಒಂದು ಫಿಲೇಚರ್‌ನ್ನಾದರೂ ನವೀಕರಿಸುವ ವ್ಯವಸ್ಥೆ ಮಾಡಿಕೊಂಡಿದ್ದರೆ ನಷ್ಟವನ್ನು ತಗ್ಗಿಸಬಹುದಾಗಿತ್ತು. ಹಾಗೆ ಮಾಡಿದ್ದರೆ ಇವತ್ತು ಫಿಲೇಚರ್‌ಗಳನ್ನು ಮುಚ್ಚೋಣ ಎಂಬ ಪರಿಸ್ಥಿತಿ ಬರುತ್ತಿರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೇಷ್ಮೆ ಖಾತೆಯ ರಾಜ್ಯಸಚಿವರಿಗೆ ಮೈಸೂರು ಜಿಲ್ಲೆಯಲ್ಲಿ ಮಳೆ ಆಶ್ರಯದಲ್ಲಿ ಬೆಳೆಯುತಕ್ಕ ಹಿಪ್ಪುನೇರಳೆ ಕಸುಬುದಾರರ ಪರವಾಗಿ ಹೇಳುವುದು ಏನೆಂದರೆ, ಅಲ್ಲಿ ಪ್ರತಿ ವರ್ಷ ಬರಗಾಲ ಬರುತ್ತದೆ. ಇದರಿಂದ ಅಲ್ಲಿನ ಕಸುಬುದಾರರೆಲ್ಲ ಬಹಳ ಕಷ್ಟಪರಿಸ್ಥಿಯಲ್ಲಿದ್ದಾರೆ. ಅಲ್ಲಿ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಇದ್ದಾರೆ. ಕೇವಲ ೨-೩ ಎಕರೆಯಲ್ಲಿ ಹಿಪ್ಪುನೇರಳೆ ಬೆಳೆಯುವವರು ಇದ್ದಾರೆ. ೫ ಎಕರೆ ಮೇಲೆ ಬೆಳೆಯುವವರಿಗೆ ಕೇವಲ ೫–೧೦ ಪರ್ಸೆಂಟ್ ಸಿಗಬಹುದು. ಆದ್ದರಿಂದ, ದಯವಿಟ್ಟು ಮಂತ್ರಿಗಳು ಬರಗಾಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಳೆ ಆಶ್ರಯದಲ್ಲಿ ಬೆಳೆಯುತಕ್ಕ ಹಿಪ್ಪುನೇರಳೆಯನ್ನು ಹಂತಹಂತವಾಗಿ ನೀರಾವರಿಗೆ ಅಳವಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ವ್ಯವಸ್ಥೆ ಮಾಡುವವರೆಗೆ ಮೂಲಭೂತವಾಗಿ ಸಿಂಚಿ ಮೊಟ್ಟೆ ಮಾಡತಕ್ಕದ್ದನ್ನು ದಯವಿಟ್ಟು ರದ್ದು ಮಾಡಬೇಡಿ ಎಂದು ಹೇಳುತ್ತೇನೆ. ಇದರಿಂದ ಲಕ್ಷಾಂತರ ಜನರಿಗೆ ತೊಂದರೆ ಆಗತಕ್ಕ ಕೆಲಸ ಮಾಡುವುದು ಬೇಡ. ಒಂದುಕಡೆ ರೇಷ್ಮೆ ಸೊಪ್ಪನ್ನು ಬೆಳೆಯುವುದನ್ನು ಅಭಿವೃದ್ಧಿ ಮಾಡತಕ್ಕ ಕೆಲಸಕ್ಕೆ ಕಾರ್ಯಕ್ರಮ ಹಾಕಿ ೧೯೮೫ನೇ ಸಾಲಿನಲ್ಲಿ ೨೫ ಬೈವೋಲ್ಟೀನ್ ಇಂಟ್ರಡ್ಯೂಸ್ ಮಾಡಿ ೪–೫ ವರ್ಷಗಳಲ್ಲಿ ಸೊಪ್ಪು ಬೆಳೆಯತಕ್ಕದ್ದನ್ನು ಉತ್ತಮ ರೀತಿಯಲ್ಲಿ ಮಾಡಿ. ಬೈವೋಲ್ಟೀನ್ ಹಂತಹಂತವಾಗಿ ಮಾಡುವುದರಿಂದ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರ ಪರಿಸ್ಥಿತಿ ಸುಧಾರಿಸಿದಂತಾಗುತ್ತದೆ. ಮುಂದಿನ ತಿಂಗಳ ಒಂದರಿಂದ ಸಿಂಚಿ ಮೊಟ್ಟೆ ಮಾಡಬಾರದೆಂದು ಮಾಡಿದ್ದೀರಿ. ಅದನ್ನು ಸಡಿಲ ಮಾಡಿ ನಾನು ಹೇಳಿದ ರೀತಿ ಕಾರ್ಯಕ್ರಮವನ್ನು ರೂಪಿಸಬೇಕೆಂದು ಪ್ರಾರ್ಥಿಸಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SMT. MUKTAR UNNISSA (Krishnaraja).—Respected Speaker, Sir, Before commencing my speech on the demands for grants relating to Industries, I take the privilege of thanking you for giving me an opportunity now to speak for five minutes.

Sir, every year, the percentage of educated girls in villages and taluks is increasing every year, Now majority of girls are taking up training courses in crafts, technical and other refresher courses. After the training, these trained girls don't get appointment in villages and taluks and therefore they are migrating to Cities in search oppointments, from their respective villages and taluks. I therefore, appeal the Government to start more and more institutions which will provide jobs to educated unemployed girls in villages and taluks.

I would like to ask the Hon'ble Minister about the exemption or special incentives given to the industries run by women. What is the percentage of women in craftsmen training schemes and apprenticeship training schemes I would like to know about it from the Hon'ble Minister, In view of encouraging women to set up industries, whether the Government is thinking of establishing an Industrial Corporation for women ? I feel it is better to start such a Corporation as early as possible to help the trained educated unemployed young women and girls to set up industries but not cheap industries like Pappad or chatnior pickle making but industries which are started by men. I feel that sufficient financial assistance or help should be given to women entrepreneurs to set up industries just like the assistance given to various industries set up by men.

I request the Hon'ble Minister for Small Scale Industries to see that small scale and cottage industries are established in villages and taluks to provide jobs to the udemployed educated girls and also unemployed trained girl and woman.

I would like to speak a few words about the Sandal wood Oil Factory at Mysore which is not only famous in Karnataka or India but throughout the world and it has got a fame in the international market. Now I learn that the sandal wood Oil faetory at Mysore is going to be closed for want of raw materials like sandal wood. I am told that the officers of Government of Karnataka have go to Tamil Nadu to get Sandal wood in auctions resulting in degradation and dis-respect to our State. This Sandal wood Oil Factory at Mysore is started by Sir M. Visveswariah, the Ex-Dewan of Mysore and the Sandal wood Oil manufactured by this factory has got international market and therefore, it should not be closed at any cost. I suggest the Government to have negotiations with the Tamil Nadu Government for procuring Sandal wood on allotment basis and the Government should not go in for purchasing Sandal Wood in auctions. I also learn that the Sandal

Wood is being smuggled into Tamil Nadu and Andhra Pradesh from our State and it should be stopped immediately. The Hon'ble Minister for Home, Sri Rachaiah is here and I request him to post Police personnal in those areas and see that smuggling of Sandal Wood from our forests to other neighbouring States is stopped forthwith.

SRI B. RACHAIAH.—The Sandal Wood is being auctioned in Madras and they don't give on allotment basis and unless we participate in the auction, we will not be able to buy Sandal-Wood from Madras State and it is a small Quantity. Therefore, we have to take part in the auction and get the sandal wood from Madras and in the meanwhile, whatever Sandal-wood is taken by auction by other competitores, in the name of transporting that Sandal Wood, some of the Sandal Wood is being smuggled from our State. Therefore, in order to avoid that, we are participating in the auction.

SMT. MUKTAR UNNISSA.—Anyhow sir, I learnt that sandal Wood is being smuggled, Please see that Police Bandobast is tightened. Since the Sandal wood is being smuggled, the Forest Deportment is not able to supply sandalwood to the Oil Factory as well as to Mysore Soaps and Detergents Ltd. I request the Hon. Minister to take necessary action.

Then Sir, I would like to say a few words about the Mysore Silk Factroy at Mysore. It is the next important factory in Mysore having international market. It is incurring losses. The Silk Factoey and Filatures have to be modernised so as to compete in International market. The silk rate is rising abnormally. The Government is not taking more interest for the development of silk or for improvements of the factory. I would also request the Government to utilise Dry Land Development Corporation for Sericulture and see that some parts of dry lands are utilised for planting Mulberry plants to increase production of silk.

Sir, in the employment services and stipendary training pro grammes, more educated unemployed ladies be provided with jobs Majority of Trained ladies in different fields of crafts are just wasting their talents for want of Craft Centres Cottage and Home Industries in Rural as well as in Urban areas. I request the Government to encourage the technically trained ladies by giving them loans or financial assistance to establish small scale industrial units I would also request the Government to start Employment Exchanges and Guiding Agencies for the benefit of employment

seekers and also for guidance of those who desire to start Cottage and small Scale Industries in Taluks and Hoblies. I also request the Government to reserve some percentage for women in respect of allotment of industrial sheds. Sir, many industries have been and are being started in our state by the industrialists from other States, I learnt that they are not taking sufficient local candidates in their factories. I would like to ask the Hon. Minister for Industries whether there is any agency to check-up periodically whether these industries are running as per our Government's policy and wether they are employing sufficient local candidates. They are enjoying all the facilities from Karnataka but they are not following rules and regulations of Karnataka I would like the Hon. Minister for Industries to see that more number of SCs, STs, BCs and Minorities are employed in these factories. I would like to know from the Hon. Minister the number of SCs/STs employed in the Karnataka Soaps and Detergents Factory In conclusion Sir, I would only request the Government to give maximum possible exemptions and concessions to the entrepreneurs from our State.

Lastly, I thank you very much Sir for giving me an opportunity to speak.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಸನ್ಮಾನ್ಯ ಅಧ್ಯಕ್ಷರೇ ೫–೬–೭–೮ ಈ ಅನುದಾನ ಬೇಡಿಕೆಗಳ ಬಗ್ಗೆ ಮಾನ್ಯ ಹಿರಿಯ ಸದಸ್ಯರುಗಳು ಸಾಕಷ್ಟು ತಮ್ಮ ಅಭಿಪ್ರಾಯಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಏನೇನು ನ್ಯೂನತೆಗಳು ಇರುತ್ತವೆ ಅವುಗಳ ಬಗ್ಗೆ ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಸನ್ಮಾನ್ಯ ಸಂಬಂಧಪಟ್ಟ ಸಚಿವರು ಈಗ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಇದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ತಾವು ಇದ್ದೀರಿ. ಈ ಖಾತೆಗೆ ಸಂಬಂಧಪಟ್ಟ ಸಚಿವರಿದ್ದರೆ ಅವರನ್ನು ನೋಡಿದರೆ ಕೆಲವು ಮಾತುಗಳನ್ನು ಆಡಲು ಉತ್ಸಾಹ ಬರುತ್ತಿತ್ತು. ಈ ವರದಿಯಲ್ಲಿ ಕೊಟ್ಟಿರುವಂತೆ ಒಂದು ಸಂತೋಷದ ಸಂಗತಿ ಏನೆಂದರೆ ಈ ಸರ್ಕಾರ ಬಂದಮೇಲೆ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವ ಕಡೆ ಸಾಕಷ್ಟು ಗಮನವನ್ನು ಕೊಟ್ಟಿದೆ. ೧೯೮೨ರಲ್ಲಿ ೬,೧೯೬ ಸಣ್ಣ ಕೈಗಾರಿಕೆಗಳು ಇದ್ದರೆ, ೧೯೮೩ರಲ್ಲಿ ೧೧,೬೦೬ ಸಣ್ಣ ಕೈಗಾರಿಕೆಗಳು ಈ ರಾಜ್ಯದಲ್ಲಿ ಆಗಿವೆ. ಅಂದರೆ ಕಳೆದ ವರ್ಷ ಒಂದಕ್ಕೆ ಎರಡರಷ್ಟು ಸಣ್ಣ ಕೈಗಾರಿಕೆಗಳು ಪ್ರಾರಂಭವಾಗಿವೆ ಎಂದಾಯಿತು. ಆದರೆ ಒಂದು ಮನಸ್ಸಿಗೆ ನೋವಾಗತಕ್ಕಂಥ ಸಂಗತಿ ಎಂದರೆ ಒಂದಕ್ಕೆ ಎರಡರಷ್ಟು ಸಣ್ಣ ಕೈಗಾರಿಕೆಗಳು ಜಾಸ್ತಿಯಾದರೂ ಉದ್ಯೋಗ ಹೊಂದಿದವರ ಸಂಖ್ಯೆ ೬,೧೯೬ ಕೈಗಾರಿಕೆಗಳಲ್ಲಿ ೪೬ ಲಕ್ಷ ಜನರು. ಈಗಿರತಕ್ಕಂಥ ಜನ ೫೮ ಲಕ್ಷ. ಈ ಅಂಕಿಸಂಖ್ಯೆಗಳನ್ನು ನೋಡಿದಾಗ ಸಣ್ಣ ಕೈಗಾರಿಕೆಗಳಲ್ಲಿ ಹೆಚ್ಚಿನ ಉದ್ಯೋಗವನ್ನು ಹೊಂದಿದವರ ವಿವರಗಳನ್ನು ನೋಡಿದರೆ ಈ ಕ್ಷೇತ್ರದಲ್ಲಿ ಅಷ್ಟು ಪ್ರಗತಿಯನ್ನು ಸಾಧಿಸಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಈ ದೃಷ್ಟಿಯಿಂದಲೂ ಸಹ ಸರ್ಕಾರದವರು ಗಮನವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅತಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೈಮಗ್ಗಗಳ ಒಂದು ಬೆಳವಣಿಗೆಯ ದೃಷ್ಟಿಯನ್ನು ನೋಡಿದರೆ ಸಾಕಷ್ಟು ಗಮನವನ್ನು, ಸಹಕಾರವನ್ನು ಈ ಕೈಗಾರಿಕೆಗೆ ನೀಡಿದ್ದೀರಿ ಎಂದು ಅರ್ಥವಾಗುತ್ತದೆ. ಈ ದೃಷ್ಟಿಯಿಂದಲೂ ಸಹ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದು ಸಂಗತಿಯನ್ನು ಸನ್ಮಾನ್ಯ ಮಂತ್ರಿಗಳಲ್ಲಿ ತಿಳಿಸಬಯಸುವುದೇನೆಂದರೆ, ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿದಂಥ ಮಾನ್ಯ ಜೆ. ಎಚ್. ಪಟೇಲ್ ರವರು ಇಂಥ ಒಂದು ಒಳ್ಳೆಯ ಇಲಾಖೆಯನ್ನು ವಹಿಸಿಕೊಂಡ ಮೇಲೆ ಸಾಕಷ್ಟು ಬದಲಾವಣೆ

ಮಾಡುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಇವರು ವಿರೋಧಪಕ್ಷದಲ್ಲಿ ಇದ್ದಂಥ ಕಾಲದಲ್ಲಿ ಸರ್ಕಾರದಲ್ಲಿ ಇದ್ದಂಥ ನ್ಯೂನ್ಯತೆಗಳನ್ನು ಎತ್ತಿ ಅದರ ಬಗ್ಗೆ ಸಾಕಷ್ಟು ಮಾತನಾಡಿದವರು ಅಧಿಕಾರ ಸಿಕ್ಕಿದಾಗ ಆ ಎಲ್ಲ ನ್ಯೂನ್ಯತೆಗಳನ್ನು ಸ್ವಚ್ಛ ಮಾಡಲಿಕ್ಕೆ ಅಷ್ಟು ಗಮನವನ್ನು ಕೊಡುತ್ತಿಲ್ಲವೆಂದು ನನಗನಿಸುತ್ತದೆ. ಈಗ ತಾನೇ ಮಾತನಾಡಿದಂಥ ಮಾನ್ಯ ಶ್ರೀನಿವಾಸ್‌ರವರು ಲಿಡ್ಕರ್ ಲೆದರ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ದಾಸ್ತಾನು ಮಳಿಗೆಗೆ ಬೆಂಕಿ ಅನಾಹುತ ಆಯಿತು. ಇದು ಉದ್ದೇಶ ಪೂರ್ವಕವಾಗಿ ಬೆಂಕಿ ಹಚ್ಚುವ ಪ್ರಯತ್ನ ನಡೆದಿದೆ ಎಂಬುವುದು ವೆರಿಫಿಕೇಷನ್ ಆದಂಥ ಸಂದರ್ಭದಲ್ಲಿ ಸಾಕಷ್ಟು ಮಾಹಿತಿ ತಿಳಿದು ಬಂದಿದೆ ಎಂದು ಹೇಳಿದರು. ನಿಜವಾಗಿಯೂ ಈ ಅನ್ಯಾಯವನ್ನು ಹೊರಗೆಡುವಬೇಕು, ಮತ್ತು ಈ ಅನ್ಯಾಯಕ್ಕೆ ಕಾರಣರಾದವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತೇನೆ. ಈ ಘಟನೆಯನ್ನು ಸಿ. ಓ. ಡಿ. ತನಿಖೆಗೆ ಒಳಪಡಿಸಿ. ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಒಳಗಾಗಿರುವ ಈ ಒಂದು ಘಟನೆಯನ್ನು ತನಿಖೆಗೆ ಒಳಪಡಿಸದೆ ಹೋದರೆ ಜನರಿಗೆ ಅನುಮಾನಕ್ಕೆ ಆಸ್ಪದವಾಗುತ್ತದೆ. ಇದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಣ್ಣ ಕೈಗಾರಿಕೆಗಳೇ ಇರಲಿ, ದೊಡ್ಡ ಕೈಗಾರಿಕೆಗಳೇ ಇರಲಿ, ಸರ್ಕಾರ ನಡೆಸತಕ್ಕಂಥ ಪಬ್ಲಿಕ್ ಇಂಡಸ್ಟ್ರೀಸ್ ಬಗ್ಗೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಅಧಿಕಾರಿಗಳೇ ಆಗಲಿ, ಸರ್ಕಾರಿ ವಕ್ತಾರರೇ ಆಗಲಿ ಬಹಳ ಸುಲಭವಾಗಿ ಒಂದು ಮಾತನ್ನು ಹೇಳಿಬಿಡುತ್ತಾರೆ, ಕೈಗಾರಿಕೆಗಳಲ್ಲಿ ನಷ್ಟ ಉಂಟಾಗಲು ಕಾರಣವೇನೆಂದರೆ ವಿದ್ಯುಚ್ಛಕ್ತಿಯ ಕೊರತೆಯೇ ಮುಖ್ಯಕಾರಣವೆಂದು ಹೇಳಿಬಿಡುತ್ತಾರೆ. ವಿದ್ಯುಚ್ಛಕ್ತಿಯ ಬಂದ್ ಇರುವುದರಿಂದ ಕಾರ್ಖಾನೆಗಳು ಲುಕ್ಸಾನನ್ನು ಅನುಭವಿಸುತ್ತಿವೆ ಎಂದು ಹೇಳುತ್ತಾರೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾವತಿ ಪೇಪರ್ ಮಿಲ್ಸ್ ಸಂಗತಿ ಆಗಾಗ್ಗೆ ಕೇಳುತ್ತಲೇ ಇದ್ದೇವೆ.

ಆದರೆ ಯಾರು ಇವತ್ತು ಹೆಚ್ಚು ಸಿಬ್ಬಂದಿ ಇದ್ದಾರೆಂದು ಹೇಳುವ ಜನರಿಗೆ ಹೆಚ್ಚು ಸಿಬ್ಬಂದಿಯನ್ನು ತೆಗೆದುಕೊಳ್ಳುವ ಸಂದರ್ಭ ಏತಕ್ಕೆ ಬಂತು ? ಆ ಸಂದರ್ಭದಲ್ಲಿ ಏತಕ್ಕೆ ವಿವೇಚನೆ ಮಾಡಲಿಲ್ಲವೆಂದು ಯೋಚಿಸಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದ್ದರೂ ಪ್ರೈವೇಟ್ ಇಂಡಸ್ಟ್ರಿಗಳು ಲಾಭದಲ್ಲಿ ನಡೆಯುವಾಗ ಕೋಟ್ಯಾಂತರ ರೂಪಾಯಿ ಲುಕ್ಸಾನು ಏತಕ್ಕೆ ಆಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಮ್ಯಾನೇಜಿಂಗ್ ಡೈರೆಕ್ಟರನ್ನು ಡೆಪ್ಯೂಟೇಷನ್ ಮೇಲೆ ಕಳುಹಿಸುವ ಪದ್ಧತಿ ಇದೆ. ದಯವಿಟ್ಟು ಇದನ್ನು ನಿಲ್ಲಿಸಿ. ಏತಕ್ಕೆಂದರೆ ಇದಕ್ಕೆ ಎರಡು ಕಾರಣಗಳಿವೆ. ಅಲ್ಲಿನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡುವ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕೆಂದು ಪ್ರಯತ್ನ ಮಾಡುವುದು ಒಂದು ಕಾರಣವಾದರೆ ಮತ್ತೊಂದು ಕಾರಣ ರಾಜಕೀಯ ಕಾರಣಕ್ಕಾಗಿ ವರ್ಗ ಮಾಡುವುದು. ಅವರೂ ಕೂಡ ಹೇಗೂ ನಾವು ಬೇರೆ ಕಡೆ ಹೋಗುತ್ತೇವೆಂದು ಯಾವುದೇ ಜವಾಬ್ದಾರಿ ತೆಗೆದುಕೊಳ್ಳದೆ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ. ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿದ್ದಂತಹ ಸಂದರ್ಭದಲ್ಲಿ ಹೊರದೇಶಕ್ಕೆ ಯಾವ ಅಧಿಕಾರಿಗಳು ಹೋಗಿದ್ದರು ಅವರ ಉದ್ದೇಶ ಅಲ್ಲಿ ಅಧ್ಯಯನ ಮಾಡಿಕೊಂಡು ಬಂದು ಕಾರ್ಖಾನೆಯನ್ನು ಲಾಭದಾಯಕವಾಗಿ ಬೆಳೆಸುವುದಾಗಿದೆ. ಆದರೆ ಆ ಅಂಕಿ ಅಂಶಗಳನ್ನು ನೋಡಿದರೆ ಹೊರದೇಶಕ್ಕೆ ಹೋಗಿ ಅನುಭವ ಪಡೆದುಕೊಂಡು ಬಂದ ಒಂದೆರಡು ತಿಂಗಳುಗಳಲ್ಲಿ ಬೇರೆ ಕಡೆಗೆ ವರ್ಗ ಮಾಡಿರುವುದನ್ನು ಕಾಣುತ್ತೇವೆ. ಹೀಗಾಗಿ ಅಲ್ಲಿ ಯಾವುದೇ ಪ್ಲಾನ್ ಇಲ್ಲ, ವ್ಯವಸ್ಥೆ ಇಲ್ಲ. ಇದು ಒಂದು ಕಡೆ ಆದರೆ, ಮತ್ತೊಂದು ಕಡೆ ಬಹಳಷ್ಟು ದೊಡ್ಡದೊಡ್ಡ ಕಾರ್ಖಾನೆಗಳಲ್ಲಿ ಅಲ್ಲಿರುವಂಥ ಉನ್ನತಾಧಿಕಾರಿಗಳು ತಮ್ಮ ಹೆಂಡತಿ ಹೆಸರಿನಲ್ಲಿ ಮಕ್ಕಳ ಹೆಸರಿನಲ್ಲಿ ದೊಡ್ಡದೊಡ್ಡ ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ. ಅಲ್ಲಿಗೆ ಬೇಕಾದ ರಾಮೆಟೀರಿಯಲ್ಸ್ ಅನ್ನು ತಾವಿರುವ ಕಾರ್ಖಾನೆಯಿಂದಲೇ ಸರಬರಾಜು ಮಾಡುವುದು. ಇದರಿಂದ ನಮಗೆ ಬಹಳಷ್ಟು ಹಾನಿಯಾಗುತ್ತಿದೆ. ಈ ರೀತಿ ವಿಚಿತ್ರ ಪರಿಸ್ಥಿತಿಯಲ್ಲಿ ನಾವು ಕಾರ್ಖಾನೆಗಳನ್ನು ನಡೆಸುವ ಪರಿಸ್ಥಿತಿ ಬಂದಿದೆ. ಅದನ್ನು ಸರಿ ಮಾಡುವ ಪ್ರಾಮಾಣಿಕ ಪ್ರಯತ್ನ ಎಲ್ಲಿಯೂ ಆಗದೆ ಇರುವುದು ಮನಸ್ಸಿಗೆ ಬಹಳ ನೋವನ್ನುಂಟು ಮಾಡತಕ್ಕ ಸಂಗತಿಯಾಗಿದೆ. ಲಿಡ್‌ಕರ್ ಬಗ್ಗೆ ಸಿಒಡಿ. ತನಿಖೆ ಆಗಬೇಕು. ಅದು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇನ್ನು ಸಣ್ಣಪುಟ್ಟ ಅಧಿಕಾರಿಗಳು ಯಾವ ರೀತಿ ಹಣ ದುರುಪಯೋಗ ಮಾಡುತ್ತಿದ್ದಾರೆಂಬುದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಎನ್.ಜಿ.ಇ.ಎಫ್.ನ

ಸೇಲ್ಸ್ ಆಫೀಸ್ ಮಹಾತ್ಮ ಗಾಂಧಿ ರಸ್ತೆಯಲ್ಲಿದೆ. ಅಲ್ಲಿ ಎಂ. ಎಸ್. ಚನ್ನಬಸವರಾಜು ಮತ್ತು ಮಂಜುನಾಥ ಎಂದು ಇಬ್ಬರು ಕಮರ್ಷಿಯಲ್ ಸೂಪರ್‌ವೈಸರ್ಸ್ ಇದ್ದಾರೆ. ಅವರು ಆ ಒಂದು ಕಾರ್ಖಾನೆಗೆ ಬೇಕಾದಂತಹ ಜೆರಾಕ್ಸ್ ಪ್ರತಿಗಳನ್ನು ಮಾಡಿಸುತ್ತಾರೆ. ಅದರಲ್ಲ ಯಾವ ರೀತಿ ದುರುಪಯೋಗ ಮಾಡುತ್ತಾರೆಂದರೆ ಅಲ್ಲಿ ಒಬ್ಬ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದಾರೆ. ಜೆರಾಕ್ಸ್ ಕಾಪಿ ಆರ್ಡರ್ ಕೊಡುವ ಸಂದರ್ಭದಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ರಿಜಿಸ್ಟರ್ ಮೆಯಿಂಟೇನ್ ಮಾಡುತ್ತಾರೆ. ಅಲ್ಲಿ ಹೋಗಿ ಇನಿಷಿಯಲ್ ಮಾಡಿಸಿಕೊಂಡು ಬಂದು ಆರ್ಡರ್ ಕೊಡಬೇಕು, ೪ ಕಾಪಿ ಬೇಕೆಂದರೆ ೪ ಕಾಪಿ ಲೆಕ್ಕಕ್ಕೆ ೨ ಸೊನ್ನೆ ಸೇರಿಸಿರುತ್ತಾರೆ, ಒಂದು ಕಾಪಿಗೆ ೩ ರೂ. ನಂತೆ ೧೨೦೦ ರೂಪಾಯಿ ಬಿಲ್ ಮಾಡುತ್ತಾರೆ. ಹೀಗೆ ೨-೩-೪ ಸೊನ್ನೆಗಳನ್ನು ಹಾಕಿ ಲಕ್ಷಾಂತರ ರೂಪಾಯಿ ದುರುಪಯೋಗ ಮಾಡಿದ್ದಾರೆ. ಇದರ ಬಗ್ಗೆ ತನಿಖೆ ಆಗುತ್ತಿದೆ. ಅವರ ಮೇಲೆ ಕ್ರಮ ಕೈಗೊಳ್ಳುವಾಗ ಪುಸ್ತಕದಲ್ಲಿ ತಿದ್ದಿರುವುದನ್ನು ಮುಚ್ಚಿ ಹಾಕಲು ಪ್ರಯತ್ನ ಮಾಡುತ್ತಿದ್ದಾರೆ. ೭-೮-೮೫ ರಲ್ಲಿ ವಿನಾಯಕ ಎಂಟರ್ ಪ್ರೈಸಸ್ ಎಂಬ ಜೆರಾಕ್ಸ್ ಮಿಷಿನ್ ಓನರ್ ಈ ರೀತಿ ಪತ್ರ ಬರೆದಿದ್ದಾರೆ:

> "Sub; Payment of Rs. 5219.00 vide your Bill No. 419 dt. 6-7-1985 for the month of June 1985.
>
> Sir,
>
> With reference to the above, we write to state that we have recently noticed that the amount claimed in the bill for June 1985 does not appear to be in accordance with supply of copies. There appears to be tampering and fabrication of the several entries found in the 'Xerox Copies' Register in as much as this office did not require such a large number of copies as shown in the bill."

ಇದು ಒಂದು ಸಣ್ಣ ಉದಾಹರಣೆ. ಈ ಸಂದರ್ಭದಲ್ಲಿ ಎರಡು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಕಾರ್ಖಾನೆಗೆ ಇದೊಂದೇ ಘಟನೆಯಿಂದ ಒಂದೂವರೆ ಲಕ್ಷ ರೂಪಾಯಿ ನಷ್ಟವಾಗಿದೆ ಒಂದೂವರೆ ಲಕ್ಷ ರೂಪಾಯಿಗಳನ್ನು ಜೆರಾಕ್ಸ್ ಕಾಪಿಗೆ ಕೊಡುವ ಬದಲು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟು ಒಂದು ಒಳ್ಳೆಯ ಜೆರಾಕ್ಸ್ ಮೆಷಿನ್ ಅನ್ನೇ ಕೊಂಡುಕೊಳ್ಳಬಹುದಾಗಿತ್ತು. ೩-೪ ಕಾಪಿಗಳನ್ನು ಮಾಡುವ ಸಂದರ್ಭದಲ್ಲಿಸೊನ್ನೆಗಳನ್ನು ಹಾಕಿಕೊಂಡು ಜೆರಾಕ್ಸ್‌ಮೆಷಿನ್ ಇಟ್ಟುಕೊಂಡಿರುವವರೊಡನೆ ಸಾಮೀಲಾಗಿ ದುಡ್ಡು ಹೊಡೆಯುತ್ತಾರೆಂದರೆ ಎಷ್ಟರ ಮಟ್ಟಿಗೆ ಭ್ರಷ್ಟಾಚಾರ ತಾಂಡವ ವಾಡುತ್ತಿದೆ ಎಂಬುದಕ್ಕೆ ಉದಾಹರಣೆ ಕೊಟ್ಟೆ. ಇದೇ ಪ್ರಕಾರ ಲಕ್ಷಗಟ್ಟಲೆ, ಕೋಟಿಗಟ್ಟಲೆ ಮಾಡುವವರು ಇದ್ದಾರೆ. ದುಡ್ಡು ಮಾಡುವವರುದೊಡ್ಡವರು ಅವರು ಬಹಳ ಬುದ್ಧಿವಂತಿಕೆಯಿಂದ ಮಾಡುತ್ತಾರೆಂದು ಎಲ್ಲರಿಗೂ ಗೊತ್ತಿದೆ. ಸದನದಲ್ಲಿ ಈ ಬಗ್ಗೆ ಚರ್ಚೆಯಾಗಿ ತನಿಖೆಯಾಗಲಿ ಅಂದರೆ ಸಾಬೀತು ಮಾಡುವುದಕ್ಕೆ ತಯಾರಿದ್ದೀರಾ ಅನ್ನುತ್ತಾರೆ. ನಮಗೆ ನಾವೇ ಪ್ರಶ್ನೆ ಹಾಕಿಕೊಂಡು ಈ ರೀತಿ ಎಲ್ಲ ನಡೆಯುತ್ತಿದೆಯೋ ಇಲ್ಲವೇ ಎಂದು ವಿಚಾರ ಮಾಡಿದಾಗ ಗೊತ್ತಾಗುತ್ತದೆ. ಈ ರೀತಿ ಭ್ರಷ್ಟಾಚಾರ ತಾಂಡವ ವಾಡುತ್ತಿರುವುದರಿಂದ, ಅಧಿಕಾರಿಗಳು ಸಾಮೀಲಾಗಿ ದುರ್ವ್ಯವಹಾರ ನಡೆಯುವುದರಿಂದ ಎಲ್ಲ ಕಾರ್ಖಾನೆಗಳನ್ನು ಮುಚ್ಚುವ ಸ್ಥಿತಿಗೆ ಬಂದಿದ್ದೇವೆ. ಈ ರೀತಿ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕಾಗಿದೆ. ಭದ್ರಾವತಿ ಕಾರ್ಖಾನೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಇದು ಮನಸ್ಸಿಗೆ ಬಹಳ ಆಘಾತವಾದ ಸಂಗತಿ. ಲೋಕೋಪಯೋಗಿ ಇಲಾಖೆಯ ಬಗ್ಗೆ ಚರ್ಚೆಯಾಗುವಾಗ ಕೂಡ ಹೇಳಿದ್ದೆ. ಭದ್ರಾವತಿ ಕಾರ್ಖಾನೆಯಲ್ಲಿ ತಂದಂತಹ ಸಿಮೆಂಟ್ ಅನ್ನು ವರುಣ ನಾಲಾ ವಿಭಾಗದಲ್ಲಿ ಉಪಯೋಗಿಸುವ ಸಂದರ್ಭದಲ್ಲಿ ಸಿಮೆಂಟ್ ಸರಿಯಿಲ್ಲವೆಂದು ಕ್ವಾಲಿಟಿ ಕಂಟ್ರೋಲ್ ಸಬ್‌ಡಿವಿಜನ್, ನಂಜನಗೂಡಿನವರು ಟೆಸ್ಟ್ ಮಾಡಿ ವರದಿ ಕಳುಹಿಸಿದ್ದಾರೆಂದು ಹೇಳಿದೆ. ಅದನ್ನು ಕೈಗಾರಿಕಾ ಮಂತ್ರಿಗಳು ವಿಚಾರಣೆ ಮಾಡುತ್ತೇವೆಂದು. ದಯವಿಟ್ಟು ಇದರ ಬಗ್ಗೆ ಗಮನ ಕೊಡಿ ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ. ಸಿಮೆಂಟ್ ತಯಾರಿಸುವಾಗ ಸ್ಟ್ಯಾಂಡರ್ಡ್ ಆಗಿ ತಯಾರು ಮಾಡದಿದ್ದರೆ ಕೊಂಡುಕೊಳ್ಳುವವರ ಗತಿ ಏನು ?

ಇದು ನೀವು ಕಾರ್ಖಾನೆಗಳನ್ನು ನಡೆಸುವ ಸ್ಥಿತಿ. ಅಲ್ಲಿ ಅಧಿಕಾರಿಗಳು ಇಲ್ಲವೇ ? ಮೇಲ್ವಿಚಾರಕರು ಇಲ್ಲವೆ ? ಈ ಪರಿಸ್ಥಿತಿ ಏತಕ್ಕೆ ಬಂತು ? ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಲುಕ್ಸಾನಾದರೂ ಕೇಂದ್ರ ಸರ್ಕಾರದವರು ಮುಂದೆ ಬರುತ್ತಿಲ್ಲ. ೧೫–೨೦ ದಿನಗಳ ಹಿಂದೆ ಇಲ್ಲಿ ಚರ್ಚೆ ನಡೆಯುವ ಕಾಲದಲ್ಲಿ ಸಿಮೆಂಟ್ ಬರುವುದನ್ನು ಹಾಗೆ ಲಾಕ್ ಮಾಡಿದ್ದಾರೆ. ಭದ್ರಾವತಿ ಕಾರ್ಖಾನೆಯಲ್ಲಿ ಸಿಮೆಂಟ್ ತುಂಬುವುದಕ್ಕೆ ಚೀಲ ಇಲ್ಲವೆಂದು ಹೇಳಿದ್ದಾರೆ. ವರುಣಾ ನಾಲಾ ಮತ್ತಿತರ ಭಾಗಗಳಿಗೆ ಸಿಮೆಂಟ್ ತರುವ ಸಲುವಾಗಿ ಹೋಗಿ ಹಾಗೇ ೨–೩ ದಿನ ನಿಂತು ವಾಪಸ್ಸು ಬಂದಿರುವ ಲಾರಿಗಳ ನಂಬರನ್ನು ಬೇಕಾದರೆ ಹೇಳುತ್ತೇನೆ. ಇದರಿಂದ ಸರ್ಕಾರಿ ಲಾರಿಗಳಿಗೆ ನಷ್ಟವಾಗಿದೆ. ಭದ್ರಾವತಿ ಐರನ್ ಅಂಡ್ ಸ್ಟೀಲ್ ಕಾರ್ಖಾನೆಯಂಥ ದೊಡ್ಡ ದೊಡ್ಡ ಕಾರ್ಖಾನೆಗಳು ಯಾವ ಮಟ್ಟಕ್ಕೆ ಇವತ್ತು ಇಳಿದಿವೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಅವರಿಗೆ ಚೀಲ ಖರೀದಿಸುವುದಕ್ಕೆ ದುಡ್ಡಿಲ್ಲವೇ ? ಇದೇ ರೀತಿ ರಾಜ್ಯದ ಎಲ್ಲ ಕೆಲಸ ಕಾರ್ಯಗಳು ಕುಂಟಿತವಾಗಿರುವುದು ; ಕೋಟ್ಯಾಂತರ ರೂಪಾಯಿ ಲುಕ್ಸಾನಾಗಿರುವುದು. ದಯುಮಾಡಿ ಇದರ ಬಗ್ಗೆ ಸರಿಯಾದ ಗಮನ ಕೊಡಬೇಕು. ಇವತ್ತಿನ ದಿವಸ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಅನ್ನು ಯಾರೋ ಒಬ್ಬ ಟಾಟಾ, ಬಿರ್ಲಾದಂತಹವರಿಗೆ ಕೊಡುವ ವ್ಯವಸ್ಥೆ ಮಾಡುತ್ತಿದ್ದೀರಿ. ದಯವಿಟ್ಟು ಇದನ್ನು ಕೈಬಿಡಿ ಎಂದು ತುಂಬ ದುಃಖದಿಂದ ಹೇಳುತ್ತಿದ್ದೇನೆ. ರಾಜ್ಯಸರ್ಕಾರ ಅಥವಾ ಕೇಂದ್ರ ಸರ್ಕಾರ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವುದನ್ನು ಟಾಟಾ, ಬಿರ್ಲಾದವರು ಮಾಡುವುದಕ್ಕೆ ಸಾಧ್ಯವಿದೆ ಎಂದರೆ ಅವರ ಮುಂದೆ ನಮ್ಮ ಹೀನ ಸ್ಥಿತಿಯನ್ನು ತೋಡಿಕೊಂಡಂತಾಗುತ್ತದೆ. ಇದು ರಾಜ್ಯಸರ್ಕಾರಕ್ಕಾಗಲಿ, ಕೇಂದ್ರಸರ್ಕಾರಕ್ಕಾಗಲಿ ಗೌರವ ತರತಕ್ಕ ಸಂಗತಿ ಅಲ್ಲ. ನಮಗೆ ಆಗದಿದ್ದರೆ ಕೇಂದ್ರ ಸರ್ಕಾರಕ್ಕೆ ಒಪ್ಪಿಸುವ ಪ್ರಯತ್ನ ಮಾಡಬೇಕೇ ಹೊರತು ಮೂರನೆಯವರಿಗೆ ಕೊಡುವ ಪ್ರಯತ್ನ ಮಾಡಬೇಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಅಲ್ಲಿ ಒಂದು ವರ್ಷದೊಳಗೆ ೧೨೩ ಮಂದಿ ಅಧಿಕಾರಿಗಳಿಗೆ ಬಡ್ತಿ ಕೊಟ್ಟಿದ್ದಾರೆ. ಇನ್ನೂ ೫೫ ಜನರ ಪಟ್ಟಿ ಇದೆ. ಅಲ್ಲಿ ಕೆಲಸ ಮಾಡುವ ನೌಕರರಿಗೆ ಕೇಂದ್ರ ಸರ್ಕಾರ ಹೆಚ್ಚು ಮಾಡಿದ ಡಿ.ಎ.ಯು ಅರಿಯರ್ಸ್ ಅನ್ನು ಕೊಡುವುದಕ್ಕೆ ಅಲ್ಲಿನ ಅಧಿಕಾರಿಗಳಿಗೆ ಆಗಿಲ್ಲ. ಆದರೆ ಬಡ್ತಿ ಕೊಡುವುದಕ್ಕೆ ಮಾತ್ರ ಸಾಧ್ಯವಾಯಿತು. ಇವತ್ತು ಎಂ ಐ.ಎಲ್. ಏತಕ್ಕೆ ಈ ಸ್ಥಿತಿಗೆ ಬಂದಿದೆ ಎಂದು ಗೊತ್ತಿಲ್ಲ. ಅದನ್ನು ಸುಧಾರಣೆ ಮಾಡುವ ಪ್ರಯತ್ನ ಮಾಡುತ್ತೀರಾ ? ಅಲ್ಲಿ ತಯಾರಿಸುವ ಸಾಮಗ್ರಿಗಳು ಹಾತನ ಕಾಲದವು. ಅವು ಇವತ್ತಿನ ಪರಿಸ್ಥಿತಿಗೆ ಉಪಯೋಗಿಸಲು ಸಾಧ್ಯವಿಲ್ಲ. ಅದು ಇದೇ ರೀತಿ ಮುಂದುವರಿದರೆ ಕೆ.ಇ.ಬಿ.ಯವರು ಏನು ಕೇಳುತ್ತಿದ್ದರೂ, ಏನು ಆರ್ಡರ್ ಬರುತ್ತಿತ್ತು ಅದೂ ಕೂಡ ನಿಂತು ಹೋಗುತ್ತದೆ. ಅಲ್ಲಿ ಸ್ವಿಚ್ ಗೇರ್, ಆಯಿಲ್ ಸರ್ಕ್ಯೂಟ್ ಮುಂತಾದ ಸಾಮಗ್ರಿಗಳನ್ನು ಮಾಡುತ್ತಾರೆ. ಅಲ್ಲಿ ತಯಾರಿಸುವ ಸಾಮಾನುಗಳನ್ನು ಯಾರೂ ಕೂಡ ಕೊಂಡುಕೊಳ್ಳಲು ಮುಂದೆ ಬರುತ್ತಿಲ್ಲ. ಹೀಗಾಗಿ ೩–೪ ಕೋಟಿ ರೂಪಾಯಿ ಸಾಮಾನುಗಳು ಹಾಗೆ ಉಳಿದಿವೆ. ಈ ಪರಿಸ್ಥಿತಿಯಲ್ಲಿ ಕಾರ್ಖಾನೆಯನ್ನು ನಡೆಸುವ ಸಾಮರ್ಥ್ಯ ಇಲ್ಲ. ಅದಕ್ಕೋಸ್ಕರ ಅದನ್ನು ಬಿ.ಹೆಚ್.ಇ.ಎಲ್.ನವರಿಗೆ ಕೊಡಬೇಕೆಂಬ ಮಾತುಕತೆ ಕಾರ್ಮಿಕ ಮಂತ್ರಿಗಳೊಡನೆ ನಡೆದಿದೆ. ಕಾರ್ಮಿಕ ಮುಖಂಡರು ಕೂಡ ಈ ಬಗ್ಗೆ ಮಾತನಾಡಿದ್ದಾರೆ.

೭–೩೦ ಪಿ.ಎಂ.

ಬೇಗ ಅದರ ಬಾಗಿಲನ್ನು ಮುಚ್ಚುವುದಕ್ಕೆ ಮೊದಲೇ ಬೇರೆಯವರಿಗೆ ವಹಿಸಿಕೊಟ್ಟು ಇದನ್ನು ಉಳಿಸಿಕೊಳ್ಳುವಂಥ ಪ್ರಯತ್ನ ಮಾಡಬೇಕು. ಇದನ್ನು ಸರ್ಕಾರ ತೆಗೆದುಕೊಂಡ ಸಂದರ್ಭದಲ್ಲಿ ೪೭೦ ಲಕ್ಷ ರೂಪಾಯಿಗಳಷ್ಟು ನಷ್ಟವಿತ್ತು. ಈಗ ಇದು ೯೭೦ ಲಕ್ಷಕ್ಕೆ ಬಂದು ಮುಟ್ಟಿದೆ. ಈಗ ಒಂದು ವರ್ಷಕ್ಕೆ ೪೫ ಲಕ್ಷ ರೂಪಾಯಿಗಳವರೆಗೆ ಬಡ್ಡಿಯನ್ನು ಬ್ಯಾಂಕ್‌ನವರಿಗೆ ಕಟ್ಟಬೇಕಾಗಿದೆ ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಕಾರ್ಖಾನೆಯನ್ನು ರಾಜ್ಯಸರ್ಕಾರದ ಕೈಯಲ್ಲಿ ಮುಂದುವರೆಸಿಕೊಂಡು ಹೋಗಲು ಸಾಧ್ಯವಿದೆಯೇ ? ಆದ್ದರಿಂದ ಇದನ್ನು ಕೂಡಲೇ ಬಿ.ಎಚ್.ಇ.ಎಲ್. ಅವರಿಗೆ ವಹಿಸಿ ಕೊಡುವುದರ ಮೂಲಕ ಇದನ್ನು ಉಳಿಸಿಕೊಳ್ಳುವಂತಹ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈಗಿನ ಸರ್ಕಾರದವರು ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಹೆಚ್ಚಿನ ಉತ್ತೇಜನ ಕೊಡುತ್ತಿದ್ದಾರೆ. ಅದಕ್ಕಾಗಿ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ದಿನಾಂಕ ೧೧–೮–೧೯೭೫ ರಂದು ಈ ಸಣ್ಣ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೋಸ್ಕರವಾಗಿ ಇವುಗಳ ಮಾಲೀಕರು

ರಾಜ್ಯದೊಳಗಡೆ ಕಚ್ಚಾಮಾಲನ್ನು ಖರೀದಿ ಮಾಡಿದ ಬಗ್ಗೆ ಏನು ಸೇಲ್ಸ್‌ಟ್ಯಾಕ್ಸ್ ಕೊಟ್ಟಿದ್ದರು, ಅದನ್ನು ವಾಪಸ್ ಮಾಡುವ ಬಗ್ಗೆ ಒಂದು ಆಜ್ಞೆಯನ್ನು ಆರ್ಥಿಕ ಇಲಾಖೆಯವರು ಹೊರಡಿಸಿದರು. ಇದರಿಂದ ಬಹಳಷ್ಟು ಜನರಿಗೆ ಅನುಕೂಲವಾಯಿತು. ಆದರೆ ಇನ್ನು ಕೆಲವರಿಗೆ ಈ ಹಣವನ್ನು ಇನ್ನೂ ವಾಪಸ್ ಮಾಡಿಲ್ಲ ಇಲ್ಲವೇ ಹೊಂದಾಣಿಕೆಯನ್ನು ಸಹ ಮಾಡಿಲ್ಲ. ಈಗ ಸರ್ಕಾರದವರು ಬೇರೆ ಒಂದು ಆಜ್ಞೆಯನ್ನು ಈ ಬಗ್ಗೆ ಹೊರಡಿಸಿದ್ದರೂ ಸಹ ಅದನ್ನು ಹಿಂದಿನಿಂದ ಜಾರಿಗೆ ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಬಹಳ ಹಿಂದೆಯೇ ಪ್ರಾರಂಭವಾದಂಥ ಸಣ್ಣ ಸಣ್ಣ ಕೈಗಾರಿಕೆಗಳ ಮಾಲೀಕರಿಗೆ, ಅವರು ಕೊಟ್ಟಿದ್ದ ಸೇಲ್ಸ್‌ಟ್ಯಾಕ್ಸನ್ನು ವಾಪಸ್ ಮಾಡುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಜೆ.ಎಚ್. ಪಟೇಲ್ ಅವರಿಗೆ ಈ ಕೈಗಾರಿಕೆಗಳ ಬಗ್ಗೆ ಸಾಕಷ್ಟು ಅನುಭವವಿದೆ. ಅವರು ವಿರೋಧಪಕ್ಷದಲ್ಲಿದ್ದಾಗ ಈ ಕೈಗಾರಿಕೆಗಳಲ್ಲಿರುವಂತಹ ನ್ಯೂನತೆಗಳನ್ನೆಲ್ಲ ಬಹಳ ಚೆನ್ನಾಗಿ ತಿಳಿದುಕೊಂಡಿದ್ದರು. ಈಗ ಅದನ್ನೆಲ್ಲಾ ಸರಿಪಡಿಸಲು ಮತ್ತು ಅಭಿವೃದ್ಧಿಪಡಿಸಲು ಒಳ್ಳೆಯ ಅವಕಾಶ ಸಿಕ್ಕಿದೆ. ಆದ್ದರಿಂದ ಈ ವಲಯದಲ್ಲಿರುವಂತಹ ಭ್ರಷ್ಟಾಚಾರವನ್ನು ಮೊದಲು ಹೋಗಲಾಡಿಸಬೇಕು ಮತ್ತು ಎಲ್ಲ ಕಾರ್ಖಾನೆಗಳು ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳುವುದರ ಮೂಲಕ ಈ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಅಧ್ಯಕ್ಷರೇ ನಾವು ಇಲ್ಲಿ ಈ ಕೈಗಾರಿಕಾ ಇಲಾಖೆಯ ಬಗ್ಗೆ ಮಾತನಾಡುವಾಗ ನಮಗೆ ಒಂದು ರೀತಿಯ ಭಯ ಬಂದಿದೆ. ಏಕೆಂದರೆ, ಸಮಾಜವಾದಿಗಳಂಥ ಮಾನ್ಯ ಜೆ.ಹೆಚ್ ಪಟೇಲ್ ಅವರು ಈ ಮಾರ್ಗದಿಂದ ಹಿಂದಕ್ಕೆ ಹೋಗುತ್ತಿದ್ದಾರೆ. ಸಾರ್ವಜನಿಕ ವಲಯದಲ್ಲಿರುವಂತಹ ಕೈಗಾರಿಕೆಗಳ ಬಗ್ಗೆ ಇವರಿಗೆ ಮೊದಲು ಇದ್ದಷ್ಟು ಉತ್ಸಾಹ ಈಗ ಇಲ್ಲ ಎಂಬುದು ಪತ್ರಿಕೆಗಳಲ್ಲಿ ಬರುತ್ತಿರುವ ಸುದ್ದಿಗಳಿಂದ ನಮಗೆ ತಿಳಿದುಬರುತ್ತದೆ. ವಿ.ಐ.ಎಸ್.ಎಲ್. ನ್ನು ಟಾಟಾ ಅವರಿಗೆ ಕೊಡುತ್ತಾರೆ, ರಾಷ್ಟ್ರೀಕರಣವಾದಂಥ ಮಾರ್ಗದಲ್ಲಿ ಮತ್ತೆ ಬಸ್‌ಗಳನ್ನು ಓಡಿಸಲು ಖಾಸಗಿಯವರಿಗೆ ಅನುಮತಿ ಕೊಡುತ್ತಾರೆ ಎಂಬುವಂತಹ ಸುದ್ದಿಗಳು ಪತ್ರಿಕೆಗಳಲ್ಲಿ ಬಂದಿದೆ ಇಂತಹ ಒಂದು ಪರಿಸ್ಥಿತಿಯ ಹಿನ್ನೆಲೆಯಲ್ಲಿ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈಗ ಭಾರತದಲ್ಲಿ ೪೯೦ ಬೃಹತ್ ಕೈಗಾರಿಕೆಗಳು ಮುಚ್ಚಿವೆ. ೮೮ ಸಾವಿರ ಸಣ್ಣ ಕೈಗಾರಿಕೆಗಳು ಭಾರತದಲ್ಲಿ ಮುಚ್ಚಿವೆ. ಇದೇ ರೀತಿಯಲ್ಲಿ ಕೈಗಾರಿಕೆಗಳು ಮುಚ್ಚುತ್ತಾ ಹೋದರೆ ಮುಂದೆ ಏನಾಗುತ್ತದೆಂಬುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ ಈ ವಲಯದಲ್ಲಿ ನಿರಾಶಾದಾಯಕವಾದಂಥ ವಾತಾವರಣವಿರುವುದನ್ನು ನಾವು ನೋಡುತ್ತಿದ್ದೇವೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿರುವಂತಹ ಸಾರ್ವಜನಿಕ ವಲಯದಲ್ಲಿರುವ ಕೈಗಾರಿಕೆಗಳು ೯೦ ಕೋಟಿ ರೂಪಾಯಿಗಳ ನಷ್ಟದಲ್ಲಿವೆ ಎಂಬ ಕಾರಣ ಕೊಟ್ಟು ಬೇರೆಯವರಿಗೆ ಮಾರಾಟ ಮಾಡುವಂತಹ ಮಾತುಗಳನ್ನು ಹೇಳಬಾರದು ಮತ್ತು ಈ ಬಗ್ಗೆ ನಿರಾಶಾದಾಯಕವಾದಂಥ ಭಾವನೆಯನ್ನು ವ್ಯಕ್ತಪಡಿಸುವುದನ್ನು ಕೈಬಿಡಬೇಕೆಂದು ಹೇಳುತ್ತೇನೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಒಳ್ಳೆಯ ಸಮಾಜವಾದಿಗಳು. ಲೋಹಿಯಾ ಅವರ ತತ್ವಗಳನ್ನು ಒಪ್ಪಿಕೊಂಡಿರುವಂತಹವರು. ಆದ್ದರಿಂದ ಇಂಥಾದ್ದಕ್ಕೆಲ್ಲಾ ಮಾನ್ಯ ಮಂತ್ರಿಗಳು ಅವಕಾಶ ಮಾಡಿಕೊಡಬಾರದೆಂದು ಹೇಳುತ್ತೇನೆ.

ಇನ್ನು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ರಿಪೋರ್ಟನ್ನು ತೆಗೆದುಕೊಂಡರೆ, ಪೇಜ್ ೮೨ರಲ್ಲಿ ಈ ರೀತಿ ಹೇಳಿದ್ದಾರೆ.– "An appropriate Officer suitable to the needs of the Company (qualifications, experience have to be specified in advance) should be posted and once he is posted, he should not be changed unless he completes a period of three or four years" ಆದ್ದರಿಂದ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಎಲ್ಲ ಕಡೆಗೂ ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವುದನ್ನು ನಿಲ್ಲಿಸಬೇಕು ಮತ್ತು ತಾಂತ್ರಿಕ ವಿಚಾರಗಳನ್ನು ತಿಳಿದುಕೊಂಡಿರುವವರನ್ನೇ ಇಂತಹ ಕಡೆಗಳಿಗೆ ನೇಮಕ ಮಾಡಬೇಕು. ಒಂದು ಸಲ ನೇಮಕ ಮಾಡಿದ ಮೇಲೆ ಪದೇ ಪದೇ ವರ್ಗ ಮಾಡುವುದನ್ನು ಸಹ ನಿಲ್ಲಿಸಬೇಕು. ಎಲ್ಲ ಕಡೆಗೂ ಐ.ಎ.ಎಸ್. ಅಧಿಕಾರಿಗಳನ್ನೇ ಆಡಳಿತಾಧಿಕಾರಿಗಳನ್ನಾಗಿ ಇಲ್ಲವೇ ಡೈರೆಕ್ಟರ್ ಆಗಿ ಇಲ್ಲವೇ ಅಧ್ಯಕ್ಷರನ್ನಾಗಿ ನೇಮಕ ಮಾಡುವುದು ಸರಿಯಲ್ಲ. ಇಂತಹ ಹುದ್ದೆಗಳಿಗೆ ತಾಂತ್ರಿಕ ಜ್ಞಾನ ಇರುವವರನ್ನೇ ನೇಮಕ ಮಾಡಬೇಕು. ವಿ.ಐ.ಎಸ್.ಎಲ್ ನಷ್ಟದಲ್ಲಿ

ನಡೆಯಲು ಕಾರಣವೇನೆಂಬುದನ್ನು ಇದೇ ವರದಿಯ ೬೫ನೇ ಪುಟದಲ್ಲಿ ಹೇಳಿದ್ದಾರೆ. ಇದೊಂದು ದುರದೃಷ್ಟಕರವಾದಂಥ ಸಂಗತಿ. ಸರ್ಕಾರದ ಕಾರ್ಖಾನೆಗಳಲ್ಲಿ ತಯಾರಾಗುವ ಸ್ಟೀಲ್ ಮತ್ತು ಸಿಮೆಂಟನ್ನು ಸರ್ಕಾರದವರೇ ಮಾಡಿಸುತ್ತಿರುವ ಕೆಲಸಗಳಿಗೆ ಕೊಂಡುಕೊಳ್ಳುತ್ತಿಲ್ಲವೆಂದು ಇದರಲ್ಲಿ ಹೇಳಿದ್ದಾರೆ. ಇದನ್ನು ನೋಡಿದರೆ ನಾವು ನಗಬೇಕೋ ಅಥವಾ ಅಳಬೇಕೋ ಎಂಬುದು ತಿಳಿಯುತ್ತಿಲ್ಲ. ಪ್ರಭಾವಶಾಲಿಯಾದಂಥ ಮಾನ್ಯ ಮಂತ್ರಿಗಳು ವಿ.ಐ.ಎಸ್.ಎಲ್.ನಲ್ಲಿ ತಯಾರಾದಂಥ ಸ್ಟೀಲ್ ಮತ್ತು ಸೀಮೆಂಟನ್ನು ಸರ್ಕಾರದವರೇ ಕೊಂಡುಕೊಳ್ಳುವಂತಹ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಒಂದು ಸರ್ಕಾರದ ಆಜ್ಞೆಯನ್ನು ಹೊರಡಿಸಬೇಕು. ಈ ವಿಚಾರದಲ್ಲಿ ಒಂದು ರೀತಿಯ ಹೊಂದಾಣಿಕೆಯ ಮನೋಭಾವವಿರಬೇಕು. ನಮ್ಮಲ್ಲಿ ಒಳ್ಳೆಯ ಕೈಗಾರಿಕೆಗಳಿವೆ. ಆದರೆ ಇಲ್ಲಿ ಕೆಲಸ ಮಾಡುವಂತಹ ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಸಹ ತಿಳಿದುಕೊಂಡಿದ್ದಾರೆ. ಮಾನ್ಯ ಮಂತ್ರಿಗಳು ಮೊದಲಿನಂತೆ ಪವರ್‌ಫುಲ್ ಆಗಿಲ್ಲ ಎಂದು ಕೆಲವು ನನ್ನ ಸ್ನೇಹಿತರು ಮಾತನಾಡುವಾಗ ಟೀಕೆ ಮಾಡಿದರು. ಮೈಸೂರು ಲ್ಯಾಂಪ್ಸ್ ವರ್ಕ್‌ನಲ್ಲಿ ೧೨೦೦ ಜನ ಕೆಲಸಗಾರರಿದ್ದಾರೆ. ಇದು ಎರಡು ಕೋಟಿ ರೂಪಾಯಿಗಳಷ್ಟು ಲಾಭ ಮಾಡಿದೆ. ಆದರೆ ಇದರಲ್ಲಿ ೫ ಲಕ್ಷ ರೂಪಾಯಿಗಳನ್ನು ಬೋನಸ್ ರೂಪದಲ್ಲಿ ಕಾರ್ಮಿಕರಿಗೆ ಕೊಟ್ಟಿಲ್ಲ. ಈ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳು ಸ್ವಲ್ಪ ಕಳಕಳಿ ವಹಿಸಬೇಕು. ಇದನ್ನು ಕೊಡದಿರುವುದಕ್ಕೆ ಅಲ್ಲಿನ ಒಬ್ಬ ಅಧಿಕಾರಿ ಕಾರಣವೆಂದು ತಿಳಿದುಬಂದಿದೆ.

ಶ್ರೀ ಡಿ. ಮಂಜುನಾಥ್.— ನಾನು ಇದಕ್ಕೆ ಅಡ್ಡಿ ಬಂದಿಲ್ಲ. ೧೪ ಪರ್ಸೆಂಟ್ ಹೆಚ್ಚು ಕೊಡಲು ಒಪ್ಪಿಕೊಂಡಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.— ೫ ಲಕ್ಷ ರೂಪಾಯಿಗಳನ್ನು ಕೊಡಲು ಅಲ್ಲಿನ ಒಬ್ಬ ಅಧಿಕಾರಿ ಟೆಕ್ನಿಕಲ್ ಆಬ್ಜಕ್ಷನ್ ಹಾಕಿದ್ದಾರೆ. ನನ್ನಂತಹ ಒಬ್ಬ ಅಧಿಕಾರಿ ಬೇರೆ ಇಲ್ಲ ಎಂದು ತೋರಿಸಿಕೊಳ್ಳಲು ಆ ಅಧಿಕಾರಿ ಈ ರೀತಿ ಮಾಡಿರಬಹುದೆಂದು ಕಾಣುತ್ತದೆ, ಇಂಥದಕ್ಕೆಲ್ಲಾ ಮಾನ್ಯ ಮಂತ್ರಿಗಳು ಅವಕಾಶ ಮಾಡಿಕೊಡಬಾರದು. ಏಕೆಂದರೆ ಇದು ೧೨೦೦ ಜನ ಕಾರ್ಮಿಕರ ಪ್ರಶ್ನೆಯಾಗಿದೆ. ಇದು ಲಾಭದಲ್ಲಿ ನಡೆಯುತ್ತಿರುವ ಕಾರ್ಖಾನೆಯಾಗಿದೆ. ಇಲ್ಲಿ ಬಲ್ಬ್‌ಗಳನ್ನು ಚೆನ್ನಾಗಿ ತಯಾರು ಮಾಡುತ್ತಾರೆ. ಇದಕ್ಕೆ ಒಳ್ಳೆಯ ಮಾರುಕಟ್ಟೆ ಸಹ ಇದೆ. ಬೋನಸ್ ಕೊಡಲಿಲ್ಲವೆಂದು ೪೫ ದಿವಸಗಳಿಂದ ಮುಷ್ಕರ ಮಾಡುತ್ತಿದ್ದಾರೆ. ಇದರಿಂದ ಕಾರ್ಖಾನೆಗೆ ೨೫ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಇಲ್ಲಿರುವ ಅಧಿಕಾರಿಗಳಿಗೆ ಯಾವ ರೀತಿ ಆಡಳಿತ ನಡೆಸಬೇಕೆಂಬುದು ಗೊತ್ತಿಲ್ಲವೆಂದು ಕಾಣುತ್ತದೆ, ಎನ್.ಜಿ.ಇ.ಎಫ್.ನಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಏನೇನು ಅನುಕೂಲಗಳನ್ನು ಒದಗಿಸಿಕೊಟ್ಟಿದ್ದಾರೆಂಬುದನ್ನು ತಿಳಿದುಕೊಳ್ಳಲು ಇವರಿಗೆ ಇಷ್ಟೊಂದು ಸಮಯ ಬೇಕೆ? ಕಿಯಾನಿಕ್ಸ್‌ನಲ್ಲಿಯೂ ಸಹ ಇಂತಹ ಒಬ್ಬ ಪ್ರತಿಷ್ಠಿತ ಅಧಿಕಾರಿ ಇದ್ದಾರೆಂದು ನಾನು ಕೇಳಿದ್ದೇನೆ. ಇಂತಹ ಅಧಿಕಾರಿಗಳ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಒಳ್ಳೆಯ ಕೈಗಾರಿಕೆಗಳೂ ಸಹ ಕೆಡುತ್ತವೆ. ಕೆಟ್ಟಿರುವ ಇಂಡಸ್ಟ್ರಿಗಳು ಇನ್ನೂ ಹೆಚ್ಚು ಕೆಡುತ್ತವೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ.

ಇನ್ನು ಲಿಡ್‌ಕರ್ ಬಗ್ಗೆ ಮಾನ್ಯ ಕಾನಡೆಯವರು ವಿವರವಾಗಿ ಹೇಳಿದ್ದಾರೆ. ಇಲ್ಲಿನ ಮೇನೇಜಿಂಗ್ ಡೈರೆಕ್ಟರ್ ಆದಂಥ ಚಿಕ್ಕಣ್ಣ ಎಂಬುವರು ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ದುರ್ವ್ಯಯ ಮಾಡಿದ್ದಾರೆ. ಈ ಬಗ್ಗೆ ಕೇಸ್ ಕೂಡ ದಾಖಲೆಯಾಗಿದೆ. ಮುಂದೆ ಕೋರ್ಟಿನಲ್ಲಿ ಇದು ಯಾವ ರೀತಿ ತೀರ್ಮಾನವಾಗುತ್ತದೋ ಗೊತ್ತಿಲ್ಲ. ಆದ್ದರಿಂದ ಇಂತಹ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಚಿಕ್ಕಣ್ಣ ಎಂಬುವರು ನಾಳೆ ಬಕ್ಕಣ್ಣ ಆಗಬಹುದು.

ಶ್ರೀ ಜೆ.ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ಯಾವ ಅಧಿಕಾರಿಗಳಿಗೆ ಇಲ್ಲಿಗೆ ಬಂದು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೋ, ಅಂತಹವರ ಹೆಸರನ್ನು ಹೇಳಿ, ಅವರು ಭ್ರಷ್ಟರು ಎಂದು ಹೇಳುವುದು ಸರಿಯೇ?

ಶ್ರೀ ಆರ್. ವೆಂಕಟರಾಮಯ್ಯ.— ಇಂತಹ ದೂರುಗಳಿರುವ ಅಧಿಕಾರಿಗಳನ್ನು ತಾವು ಕೂಡಲೇ ಸಸ್ಪೆಂಡ್ ಮಾಡಬೇಕು. ತನಿಖೆಯ ನಂತರ ಅವರದ್ದು ಏನೂ ತಪ್ಪಿಲ್ಲವೆಂದು ಕಂಡುಬಂದರೆ ಪುನಃ ಕೆಲಸಕ್ಕೆ ತೆಗೆದುಕೊಳ್ಳಿ. ನಾನು ಹಣ ತಿಂದಿದ್ದಾರೆಂದು ಹೇಳುತ್ತಿಲ್ಲ, ಈ ಬಗ್ಗೆ ಬಂದಿರುವ ದೂರಿನ ಬಗ್ಗೆ ತನಿಖೆ ಮಾಡಿಸಿ ಎಂದು ಹೇಳಿದ್ದೇನೆ. ಇಂತಹ ಕೆಲವು ಅಧಿಕಾರಿಗಳ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಂಡರೆ ಬೇರೆ ಅಧಿಕಾರಿಗಳು ಎಚ್ಚರಗೊಳ್ಳುತ್ತಾರೆ. ಇಂತಹ ಕೆಲಸಕ್ಕೆ ತಾವು ಕೈಹಾಕಿದರೆ ತಮಗೂ

ಇದೇ ಗತಿ ಎಂದು ಭಯಪಡುತ್ತಾರೆ. ಆದ್ದರಿಂದ ದೂರುಗಳು ಬಂದ ಕಡೆಗಳಲ್ಲಿ ಕೂಡಲೇ ಕ್ರಮ ತೆಗೆದು ಕೊಳ್ಳಬೇಕು. ಇಂತಹ ಕ್ರಿಮಿನಲ್ ಕೇಸ್‌ಗಳು ೬ ಲಕ್ಷದಷ್ಟಿವೆ ಎಂದು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದಾರೆ.

ಇನ್ನೊಂದು ದುರಾದೃಷ್ಟದ ವಿಷಯವೆಂದರೆ ನಮ್ಮ ಗೌರೀಬಿದನೂರು ಸಕ್ಕರೆ ಫ್ಯಾಕ್ಟರಿಯಲ್ಲಿ ಸರ್ಕಾರದಷ್ಟು ೬ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದೆ. ಈ ಫ್ಯಾಕ್ಟರಿಯನ್ನು ಬೇರೆಯವರಿಗೆ ೮೭ ಲಕ್ಷ ರೂಪಾಯಿಗಳಿಗೆ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ಫ್ಯಾಕ್ಟರಿಗೆ ಹಾಕಿರುವ ಬಂಡವಾಳಕ್ಕೆ ೨೦ ಲಕ್ಷ ರೂಪಾಯಿಗಳನ್ನು ಬಡ್ಡಿ ರೂಪದಲ್ಲಿ ಕಟ್ಟುತ್ತಿದ್ದೇವೆ. ಅದಕ್ಕೆ ಬಾಡಿಗೆ ರೂಪದಲ್ಲಿ ೪ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಈ ಫ್ಯಾಕ್ಟರಿಯು ಲಾಭದಲ್ಲಿ ನಡೆಯುತ್ತಿದೆ. ಇದು ನಷ್ಟದಲ್ಲಿ ಇದೆಯೆಂದು ಪ್ರೈವೇಟ್‌ನವರಿಗೆ ಕೊಡುತ್ತಿದ್ದೀರಿ. ಇದರಿಂದ ಲಾಭ ಬರುವುದು ಪ್ರೈವೇಟ್ ಮ್ಯಾನೇಜ್‌ಮೆಂಟಿನವರಿಗೆ, ನಷ್ಟವಾಗುವುದು ಸರ್ಕಾರಕ್ಕೆ. ಇದರಲ್ಲಿ ಸುಮಾರು ೪ ಕೋಟಿ ರೂಪಾಯಿಗಳು ಲಾಸ್ ಆಗಿದೆಯೆಂದು ಹೇಳಿದ್ದಾರೆ. ತಾವು ಒಂದು ವಿಷಯವನ್ನು ಕೇಳಬೇಕು. ಇದರಿಂದ ೧೨೦೦ ಮಂದಿ ಕಾರ್ಮಿಕರ ಸಮಸ್ಯೆಯಲ್ಲ ೭೮೦೦ ಜನ ಅಗ್ರಿಕಲ್ಚರಿಸ್ಟ್ ಇದ್ದಾರೆ ಅವರ ಗತಿ ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ಈ ಫ್ಯಾಕ್ಟರಿಗೆ ೩ ತಿಂಗಳಿಗೆ ಒಬ್ಬೊಬ್ಬ ಐ.ಎ.ಎಸ್. ಆಫೀಸರುಗಳು ಬರುತ್ತಾರೆ ಹೋಗುತ್ತಾರೆ. ಐ.ಎ.ಎಸ್. ಆಫೀಸರ್‌ಗಳು ಬರುವುದು, ಹೋಗುವುದೇ ಆಗಿದೆ. ಈ ಕಂಪನಿಯು ೧೯೭೮ ರಲ್ಲಿ ನಷ್ಟವಾಗುವುದಕ್ಕೆ ಶುರುವಾಯಿತು. ಅದನ್ನು ಕಂಟ್ರೋಲ್ ಮಾಡುವ ಜವಾಬ್ದಾರಿಯನ್ನು ತಾವು ತೆಗೆದುಕೊಂಡಿಲ್ಲ. ಯಾರಾದರು ಒಬ್ಬ ಒಳ್ಳೆಯ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಆಫೀಸರನ್ನು ಇಲ್ಲಿಗೆ ಅಪಾಯಿಂಟ್ ಮಾಡಿ ಕಂಟ್ರೋಲ್ ಇಟ್ಟುಕೊಳ್ಳಬಹುದು. ಚೀಫ್ ಮಿನಿಸ್ಟರ್‌ರವರು ಇದು ಲೀಸ್ ಪಿರಿಯಡ್‌ನಲ್ಲಿ ಇದೆ ಎಂದು ಹೇಳಿಕೊಂಡು ಸುಮ್ಮನೆ ಇದ್ದಾರೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುವ ಈ ಇಂಡಸ್ಟ್ರೀಕಡೆ ಗಮನ ಕೊಡಬೇಕು. ಯಾರೋ ಒಬ್ಬ ಸರ್ಕಾರಿ ವಕೀಲ ಇದರ ಮೇಲೆ ಅಪೀಲ್ ಹೋಗುವುದು ಬೇಡವೆಂದು ಸಲಹೆ ಕೊಟ್ಟರು. ಆ ಸಲಹೆ ಕೊಟ್ಟರೂಕೂಡ ಅದನ್ನು ಸರ್ಕಾರ ಒಪ್ಪಿಕೊಳ್ಳಬೇಕೆಂದೇನು ಇಲ್ಲ. ಅಪೀಲ್ ಹೋಗದೆ ಇದ್ದರೆ ಕಾರ್ಖಾನೆಗೆ ನಷ್ಟವಾಗುತ್ತದೆ. ಇದನ್ನು ನಾವು ಒಂದೊಂದಾಗಿ ಯೋಚನೆ ಮಾಡಬೇಕು. ಇದನ್ನು ಯೋಚನೆ ಮಾಡದೇ ಇದ್ದುದು ನಮ್ಮ ಮೂಲಭೂತವಾದ ತಪ್ಪು ಇದೆ. ಬೃಹತ್ತಾದ ಇಂತಹ ಇಂಡಸ್ಟ್ರಿಯನ್ನು ಕಂಟ್ರೋಲ್ ಮಾಡುವುದಕ್ಕೆ ಬಹಳ ಸ್ಟ್ರಿಕ್ಟ್ ಆಗಿ ನಾರಮ್ಸ್‌ನ್ನು ಇಂಟರ್‌ಡ್ಯೂಸ್ ಮಾಡಬೇಕು. ನಷ್ಟ ಬರುವುದಕ್ಕೆ ಮುಂಚಿತವಾಗಿಯೇ ಏನಾದರೂ ವ್ಯವಸ್ಥೆ ಮಾಡಿದ್ದರೆ ನಷ್ಟವಾಗುವುದನ್ನು ತಪ್ಪಿಸಬಹುದಿತ್ತು. ಆಗಲೇ ನಮ್ಮ ಸ್ನೇಹಿತರೊಬ್ಬರು ಹೇಳಿದರು, ಮೈಸೂರು ಸೋಪ್ಸ್ ಅಂಡ್ ಡಿಟರ್‌ಜೆಂಟ್ ಮತ್ತು ಎಂ.ಎಸ್.ಐ.ಎಲ್ ಗಳಲ್ಲಿರುವ ಮಹಾನುಭಾವರ ಜಗಳದಿಂದ ಸುಮಾರು ೬-೮ ಕೋಟಿ ರೂಪಾಯಿಗಳ ಮಾಲು ಮಾರಾಟವಾಗದೆ ಹಾಗೆಯೇ ಇದೆ ಎಂದು ಗೊತ್ತಾಗಿದೆ. ೯ ಕೋಟಿ ರೂಪಾಯಿಗಳ ಮಾಲು ಎಂದು ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಹೇಳಿದ್ದಾರೆ. ಇದನ್ನು ತಡೆಗಟ್ಟಬೇಕು ಇಲ್ಲದಿದ್ದರೆ ಇಂತಹ ಜಗಳ ದಿನವಿಡೀ ಇದ್ದೇ ಇರುತ್ತದೆ. ಇದನ್ನು ಹೀಗೆಯೇ ಬಿಟ್ಟರೆ ನಾವು ದೇಶಕ್ಕೆ ದ್ರೋಹ ಮಾಡಿದಂತಾಗುತ್ತದೆ. ಇದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡು ಕಂಪನಿಗಳು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಇವರು ಕೊಟ್ಟಿರುವ ಎಕನಾಮಿಕ್ ರಿಪೋರ್ಟ್ ನೋಡಿದರೆ, ಅದರಲ್ಲಿ ಜನತಾ ಪಾರ್ಟಿ ಅಧಿಕಾರಕ್ಕೆ ಬಂದರೆ ದಿನಕ್ಕೆ ಒಂದೊಂದು ಇಂಡಸ್ಟ್ರೀ ಮಾಡುತ್ತೇವೆಂದು ಹೇಳಿದರು. ಪೇಜ್ ೫೪ ರಲ್ಲಿ ಟೇಬಲ್‌೮ನ್ನು ಓದಿದರೆ ೮೩-೮೪, ೧೯೮೪-೮೫ರಲ್ಲಿ ಇಂಡಸ್ಟ್ರೀಗಳಬಗ್ಗೆ ಮೈನಸ್ ಕಡೆ ಹೋಗುತ್ತಿದ್ದೇವೆ. ಶೇಕಡಾ ೬.೪ ಪಾಯಿಂಟ್ ಮೈನಸ್ ಆಗಿದೆ. ೧೯೮೩-೮೪ರಲ್ಲಿ ೧೩-೮ ಮೈನಸ್ ಆಗಿದೆ. ಇಂಡಸ್ಟ್ರೀಗಳನ್ನು ಮಾಡುವಲ್ಲಿ ನಾವು ಮುಂದಕ್ಕೆ ಹೋಗುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಇವರು ಹಿಂದಕ್ಕೆ ಹೋಗುತ್ತಿದ್ದಾರೆ ಇದು ಬಹಳ ದುರಾದೃಷ್ಟಕರ. ಟೇಬಲ್ ೮ರಲ್ಲಿ ತೆಗೆದುಕೊಂಡರೆ ಅದರಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಸೆಕ್ಟಾರಿನಲ್ಲಿ ೩೮-೩೫ ಮೈನಸ್ ಆಗಿದೆ. ಎಲ್ಲರಿಗೂ ಕೆಲಸ ಕೊಡುತ್ತೇವೆಂದು ಇವರು ಹೇಳಿದ್ದರು. ಆದರೆ ಇವರು ಕೆಲಸ ಕೊಡುವುದಕ್ಕೆ ಆಗಲಿಲ್ಲ ಬದಲಿಗೆ ಇರುವ ಕೆಲಸಗಳನ್ನೇ ಕಿತ್ತುಹಾಕುವ ಪರಿಸ್ಥಿತಿ ಈಗ ಬಂದಿದೆ. ಆದ್ದರಿಂದ ಈ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ನಾವು ಕಂಟ್ರೋಲ್ ಮಾಡಬೇಕಾಗುತ್ತದೆ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೋಲಾರ

ಜಿಲ್ಲೆಯ ಬಗ್ಗೆ ಸ್ವಲ್ಪ ಮಾತ್ರ ಹೇಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ನೀವು ಹಿಂದೆ ಹೇಳಿದಾಗ ಪ್ರತಿಯೊಂದು ಕಡೆಗೂ ಇಂಡಸ್ಟ್ರೀ ಪಾಲಿಸಿ ಪ್ರಕಾರ ೫೦–೬೦ ಎಕರೆ ಜಮೀನುಗಳನ್ನ ಆಕ್ವೈರ್ ಮಾಡಿಕೊಂಡು ಪ್ರತಿಯೊಂದು ಕಡೆಗೂ ಇಂಡಸ್ಟ್ರೀಯಲ್ ಎಸ್ಟೇಟ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಅದನ್ನು ನೀವು ಮಾಡಿಲ್ಲ. ದಯಿವಿಟ್ಟು ಇದನ್ನು ಮಾಡಬೇಕು. ೨–೩ ತಾಲ್ಲೂಕುಗಳಲ್ಲೂ ಈ ರೀತಿ ಇಂಡಸ್ಟ್ರೀಯಲ್ ಎಸ್ಟೇಟ್‌ಗಳನ್ನು ಮಾಡಿದ್ದೀರಿ. ಇದೇ ರೀತಿ ಎಲ್ಲಾ ತಾಲ್ಲೂಕುಗಳಲ್ಲೂ ಮಾಡಬೇಕು. ಬಹಳ ಹಿಂದುಳಿದಿರುವ ನಮ್ಮ ಕೋಲಾರ ಜಿಲ್ಲೆಗೆ ಆದ್ಯತೆ ಕೊಡಬೇಕು. ಕೋಲಾರ ಜಿಲ್ಲೆಯಲ್ಲಿರುವ ಮುಳಬಾಗಿಲು ಮತ್ತು ಶ್ರೀನಿವಾಸಪುರಗಳಲ್ಲಿ ಫ್ರಾರ್ತಿ ಇಂಡಸ್ಟ್ರೀಯಲ್ ಎಸ್ಟೇಟುಗಳನ್ನು ಮಾಡುವುದಕ್ಕೆ ಎಲ್ಲಾ ಲ್ಯಾಂಡ್‌ನ್ನು ಅಕ್ವಿಸಿಷನ್ ಆಗಿದೆ. ಇದರ ಬಗ್ಗೆ ತುರ್ತು ಗಮನವನ್ನು ಕೊಟ್ಟು ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಜಾಸ್ತಿ ಹೊತ್ತು ತೆಗೆದುಕೊಳ್ಳುವುದಿಲ್ಲ. ಮುಖ್ಯವಾಗಿ ಈವತ್ತಿನ ದಿವಸ ನಮಗೆ ಈ ಸಿರಿಕಲ್ಚರ್ ಬಗ್ಗೆ ಡಿಸ್‌ಕಷನ್ ಇದೆ ಅದರ ಬಗ್ಗೆ ಐದು ನಿಮಿಷ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಅದೃಷ್ಟವಶಾತ್ ನಮಗೆ ಒಳ್ಳೆಯ ಮಂತ್ರಿಗಳು ಈ ಖಾತೆಗೆ ಸಿಕ್ಕಿದ್ದಾರೆ ರೇಶ್ಮೆ ಕಾರ್ಯಕ್ರಮಗಳಲ್ಲಿ ಬಹಳ ತಿಳಿದಿರುವಂತಹ ಮಾನ್ಯ ರಾಮಯ್ಯನವರು ಮಂತ್ರಿಗಳಾಗಿದ್ದಾರೆ. ನಮ್ಮ ದೇಶದಲ್ಲಿ ಒಟ್ಟು ಉತ್ಪಾದನೆಯ ಶೇಕಡಾ ೫೦ ರಷ್ಟು ನಮ್ಮ ಕರ್ನಾಟಕದಲ್ಲೇ ಉತ್ಪಾದನೆಯಾಗುತ್ತದೆ. ಕೋಲಾರದಲ್ಲಿ ಶೇಕಡಾ ೭೦ ರಷ್ಟು ಉತ್ಪಾದನೆಯಾಗುತ್ತದೆ. ಆದರೆ ಈ ವೇಳೆಯಲ್ಲಿ ೪–೫ ತರಹ ರೋಗಗಳು ಈ ರೇಶ್ಮೆ ಹುಳುಗಳಿಗೆ ಬಿದ್ದಿವೆ. ಹೂಜಿ ನೊಣ, ಸುಣ್ಣಕಟ್ಟು ರೋಗ, ಸಣಕಲು ರೋಗ ಇದೆ ರೋಗ ಬಂದರೆ ರೇಶ್ಮೆ ಹುಳವನ್ನು ಸಾಕಿದ ರೈತನು ಸಾಯುವಂತಾಗುತ್ತಾನೆ ಹುಳಗಳು ಸಾಯುತ್ತವೆ. ಇಷ್ಟು ದಿನವಾದರೂ ಸಹ ಡಿಪಾರ್ಟ್‌ಮೆಂಟಿನವರು ಸರಿಯಾಗಿ ರೀಸರ್ಚ್ ಮಾಡಿ ಪರಿಹಾರವನ್ನು ಕಂಡುಹಿಡಿಯಲಿಲ್ಲ. ಇದರಿಂದ ನಿಜವಾಗಲು ನಾವು ಸಂಕಟ ಪಡುತ್ತಿದ್ದೇವೆ. ಇನ್ನು ಎಂ. ೫ ತಳಿಯ ರೇಶ್ಮೆ ಗಿಡಗಳನ್ನು ಬೆಳಸಬೇಕು ಆದರಿಂದ ಬೈ ವೋಲ್ಟೀನ್ ರೇಶ್ಮೆ ಹುಳುಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತಾರೆ ಆದರೆ ಇದುವರೆಗೆ ಎಂ. ೫ ತಳಿಯ ರೇಶ್ಮೆ ಗಿಡಗಳು ಇನ್ನು ೫ ಪರ್‌ಸೆಂಟ್‌ನಷ್ಟು ಬೆಳೆಸಿಲ್ಲ. ಇನ್ನು ೯೫ ಪರ್‌ಸೆಂಟ್ ಮುಟ್ಟುವುದು ಯಾವಾಗ ? ಈಗಲೂ ರೈತರು ಟಿಪ್ಪು ಸುಲ್ತಾನ್ ಕಾಲದ ಮಾದರಿಯಲ್ಲೇ ಹುಳಗಳನ್ನು ಸಾಕುತ್ತಿದ್ದಾರೆ. ಸರ್ಕಾರದ ಯೋಜನೆಯ ಪ್ರಕಾರ ಒಂದು ಸಾವಿರ ಮೆಟ್ರಿಕ್ ಟನ್ ಅಷ್ಟು ರೇಶ್ಮೆಯನ್ನು ಬೆಳೆಯಬೇಕಾಗಿತ್ತು ಆದರೆ ೧೯೮೩–೮೪ರಲ್ಲಿ ಕೇವಲ ೨ ನೂರು ಮೆಟ್ರಿಕ್ ಟನ್ ಬೆಳೆದರು. ಆ ಮೇಲೆ ಈಗ ೨೧೮ ಮೆಟ್ರಿಕ್ ಟನ್ ಬೆಳೆದಿದ್ದಾರೆ. ಇದರಿಂದ ನಮಗೆ ಅರ್ಥವಾಗುತ್ತದೆ. ನಿಜವಾಗಲು ಹೇಳಿಕೊಳ್ಳುವಂತಹ ಪ್ರೋಗ್ರೆಸ್ ಆಗಿಲ್ಲ. ಇನ್ನೊಂದು ವಿಷಯವನ್ನು ನಾವು ಗಮನಿಸಬೇಕಾದ ವಿಚಾರ ಎಂದರೆ, ಅದನ್ನು ಶ್ರೀಮಾನ್ ರಾಜೂಗೌಡರು ಹೇಳಿದ್ದಾರೆ. ಈಗ ನಮಗೆ ಆಧುನಿಕ ಬಿತ್ತನೆ ಕೋಠಿ ಇಲ್ಲ ಈ ವೇಳೆಗೆ ಆಧುನಿಕ ಬಿತ್ತನೆ ಕೋಠಿ ಇಲ್ಲವೆಂದರೆ ನಿಜವಾಗಿಯೂ ತಲೆ ತಗ್ಗಿಸಬೇಕಾಗುತ್ತದೆ ಮಾನ್ಯ ಪ್ರಧಾನಿಯವರಾದ ಶ್ರೀ ರಾಜೀವ್ ಗಾಂಧಿಯವರು ನಾವು ೨೧ ನೇ ಶತಮಾನಕ್ಕೆ ಹೋಗುತ್ತಿದ್ದೇವೆಂದು ಹೇಳಿದ್ದಾರೆ. ಆದರೆ ನಾವು ಇನ್ನು ೧೮ನೇ ಶತಮಾನದಲ್ಲೇ ಇದ್ದೇವೆ. ಟಿಪ್ಪೂ ಸುಲ್ತಾನ್‌ನ ಕಾಲದಲ್ಲಿ ಏನೇನು ವಾಡಿಕೆ ಇತ್ತೋ ಅದನ್ನೇ ಈಗಲೂ ಅನುಸರಿಸುತ್ತಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಒಂದು ಸಿಲ್ಕ್ ಫಿಲೇಚರ್ ಇಲ್ಲ. ಒಂದು ರೀಸರ್ಚ್ ಸೆಂಟರ್ ಇಲ್ಲ. ಆಧುನಿಕ ಮೊಟ್ಟೆ ತಳಿಗಳನ್ನು ಬೆಳೆಸುವ ಯೋಜನೆಯನ್ನು ಮಾಡಿಲ್ಲ. ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು ಮಾತ್ರ ಹೇಳಿದ್ದಾರೆ. ಇನ್ನು ಇದರ ಬಗ್ಗೆ ಅನುಸೂಚಿತ ಜಾತಿ ಮತ್ತು ವರ್ಗದ ಜನರಿಗೆ ಹೆಚ್ಚಿನ ಬೆನಿಫಿಟ್ ಕೊಡಬೇಕೆಂದು ನಾನು ಹೇಳುತ್ತೇನೆ. ಬೆನಿಫಿಟ್ ಕೊಡುವಲ್ಲಿ ತುಂಬಾ ಭ್ರಷ್ಟಾಚಾರ ತುಂಬಿದೆ. ಈ ಭ್ರಷ್ಟಾಚಾರ ತೊಲಗಬೇಕೆಂದು ಹೇಳುತ್ತಿದ್ದೇನೆ. ಆದರೆ ಅದು ಕಡಿಮೆಯಾಗುತ್ತಿಲ್ಲ. ರೇಶ್ಮೆ ಬೆಳೆಯುವ ಅನುಸೂಚಿತ ಜಾತಿ ಮತ್ತು ವರ್ಗದ ಜನರಿಗೆ ಕಡಿಮೆ ಬೆಲೆಯಲ್ಲಿ ಚಂದ್ರಿಕೆ ಮತ್ತು ತಟ್ಟೆಯನ್ನು ಕೊಡುತ್ತಾರೆ. ಆದರೆ ಅವು ಬಹಳ ಕೆಳಮಟ್ಟದವುಗಳಾಗಿರುತ್ತವೆ. ಇನ್ನೊಂದು ದುರಾದೃಷ್ಟ ಸಂಗತಿ ಎಂದರೆ ನಮ್ಮ ಜಿಲ್ಲೆಯಲ್ಲಿ ಮಳೆಯೇ ಇಲ್ಲ. ಬಾವಿಗಳಲ್ಲಿ ನೀರು ಇಲ್ಲ, ಇಂತಹ ಪರಿಸ್ಥಿತಿಯಲ್ಲಿ ಈ ಬೆಳೆಯನ್ನು ಅತಿ ಕಷ್ಟದಿಂದ ತೆಗೆಯುತ್ತಾರೆ. ಆದುದರಿಂದ ಸರ್ಕಾರದವರು ಕೊಳವೆ ಬಾವಿಗಳನ್ನು ತೋಡಿಸಿ ರೇಶ್ಮೆ ಬೆಳೆಯನ್ನು ತೆಗೆಯುವುದಕ್ಕೆ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎಂ. ೫ ತಳಿಯ ರೇಶ್ಮೆ ಗಿಡಗಳನ್ನು ಬೆಳೆಸಿ ಬೈ–ವೋಲ್ಟಿನ್ ತಳಿಯ ರೇಶ್ಮೆ ಹುಳಗಳನ್ನು ಸಾಕುವುದಕ್ಕೆ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು.

ಬೆಳೆಯನ್ನು ಬೆಳೆಯುತ್ತಾ ಇಲ್ಲ. ಬೆಳೆದರೂ ಕೂಡಾ ಇಳುವರಿ ಕಡಿಮೆಯಾಗುತ್ತಾ ಇದೆ. ಒಳ್ಳೆಯ ಬಿತ್ತನೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು. ರಾಮನಗರ, ಕುಣಿಗಲ್‌ನಿಂದ ಸೆಲೆಕ್ಟ್ ಮಾಡುತ್ತಾರೆ. ರೋಗ ಬಂದಿರುವಂತಹ ಬಿತ್ತನೆಯನ್ನು ಕೊಟ್ಟು ಬಿಡುತ್ತಾರೆ. ಅಂತೆಯೇ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಚಾಕಿ ಕೇಂದ್ರಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಇಂತಹವುಗಳಲ್ಲಿ ಸರಕಾರದವರದ್ದು ೮೨ ಇದ್ದರೆ, ಪ್ರೈವೇಟ್‌ನವರದ್ದು ೬೫೭ ಕೇಂದ್ರಗಳು ಇವೆ. ದಯವಿಟ್ಟು ಇದನ್ನು ಪೂರ್ತಿಯಾಗಿ ಸರಕಾರದವರು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತರಿಗೆ ಮೋಸ ಮಾಡಿದ ಹಾಗೆ ಆಗುತ್ತದೆಂದು ಹೇಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗಾಗಲೇ ಎಲ್ಲಾ ಪಕ್ಷದವರಿಗೂ ನಿಗದಿ ಪಡಿಸಿದ ಸಮಯ ಮತ್ತು ಅವರು ಮಾತನಾಡಿದ ಸಮಯಗಳು ಹೀಗಿವೆ.

ಕಾಂಗ್ರೆಸ್ ಐ—೧೦೫—೧೭೪

ಸ್ವತಂತ್ರರು — ೨೦— ೨೫

ಸಿ.ಪಿ.ಐ. — ೨೦— ೨೫

ಸಿ.ಪಿ.ಐ.ಎಂ— ೧೫— ೧೮

ಬಿ.ಜೆ.ಪಿ. — ೧೫— ೧೭

ಹೆಚ್ಚಿಗೆ ಕೊಟ್ಟರೂ ಕೇವಲ ಐದು ನಿಮಿಷಗಳು ಮಾತ್ರ.

ಶ್ರೀ ಜಿ. ನಾರಾಯಣ ಕುಮಾರ್.—ಸ್ವಾಮೀ ಅಧ್ಯಕ್ಷರೇ, ನನಗೆ ಸ್ವಲ್ಪ ಜಾಸ್ತಿ ಸಮಯ ಕೊಡಬೇಕು.

† ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ).—ಮಾನ್ಯ ಅಧ್ಯಕ್ಷರೇ, ದೊಡ್ಡ ಕೈಗಾರಿಕೆ, ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ, ಅದರಲ್ಲಿಯೂ ಅತೀ ಸಣ್ಣ ಕೈಗಾರಿಕೆ, ಮತ್ತು ರೇಷ್ಮೆ ಇಲಾಖೆಯ ಬೇಡಿಕೆಗಳ ಬಗ್ಗೆ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕಲಿಸಿಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ವಂದನೆಗಳು. ನಿಜವಾಗಿಯೂ ದೊಡ್ಡ ಕೈಗಾರಿಕಾ ಮಂತ್ರಿಗಳಾದ ಶ್ರೀಮಾನ್ ಜೆ. ಎಚ್. ಪಟೇಲ್‌ರವರು ಬಹಳ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಅವರಿಗೆ ಯಾವುದೇ ಒಂದು ಇಲಾಖೆಯನ್ನೂ ಕೊಟ್ಟರೂ ಕೂಡಾ ದಕ್ಷತೆಯಿಂದ ಅವರು ನೋಡಿಕೊಂಡು ಹೋಗುತ್ತಾರೆ. ಅಲ್ಲದೇ ಮಾನ್ಯ ಜೆ. ಎಚ್. ಪಟೇಲ್‌ರವರು ಲೋಕಸಭಾ ಸದಸ್ಯರಾಗಿ ಮೊಟ್ಟಮೊದಲನೇ ಸಾರಿಗೆ ಲೋಕಸಭೆಯಲ್ಲಿ ಏರಿದ ಧ್ವನಿಯಲ್ಲಿ ಕನ್ನಡವನ್ನು ಮಾತನಾಡಿದಂತಹವರೂ ಆಗಿದ್ದಾರೆ. ಅವರಿಗೆ ಕನ್ನಡದ ಬಗ್ಗೆ ತುಂಬಾ ಅಭಿಮಾನ ಇದೆ. ಅಂತೆಯೇ ಇವೊತ್ತು ಸಹ ಅದೇ ಅಭಿಮಾನವನ್ನು ಹೊಂದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ಇವೊತ್ತು ಕನ್ನಡಿಗರಿಗೆ ಉದ್ಯೋಗವನ್ನು ನೀಡುವಲ್ಲಿಯೂ ಕೂಡಾ ಅವರು ತಮ್ಮ ಪ್ರಯತ್ನವನ್ನು ಮಾಡಿಯೇ ಮಾಡುತ್ತಾರೆ ಎಂಬ ಒಂದು ನಂಬಿಕೆಯಿಂದ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ.

ಇವೊತ್ತು ದೊಡ್ಡ ಕೈಗಾರಿಕೆಗಳು, ಕಾರ್ಖಾನೆಗಳು ಏನಿವೆ, ಅವುಗಳು ನಮ್ಮ ರಾಜ್ಯ ಸರಕಾರದವುಗಳಾಗಿರಲಿ, ಅಥವಾ ಕೇಂದ್ರ ಸರಕಾರದವುಗಳಾಗಿರಲಿ, ಅಲ್ಲಿರುವ ಉದ್ಯೋಗಿಗಳು ಹೆಚ್ಚಾಗಿ ಹೊರಗಿನವರೇ ಆಗಿದ್ದಾರೆ. ಅದರಲ್ಲಿಯೂ ಕೇಂದ್ರ ಸರಕಾರದ ಕೈಗಾರಿಕೆಗಳಲ್ಲಿ ಸುಮಾರು ೬೦-೮೦ರಷ್ಟು ಜನರು ಹೊರಗಿನವರೇ ತುಂಬಿಕೊಂಡಿರುತ್ತಾರೆ. ಎಲ್ಲೋ ಒಂದೆರಡು ಕಡೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ಕನ್ನಡದವರು ಇರಬಹುದು. ಇವೊತ್ತು ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚು ಹೆಚ್ಚಾಗಿ ತಲೆದೋರಿದೆ. ಲಕ್ಷಾಂತರ ಜನ ವಿದ್ಯಾವಂತರು, ಅತೀ ವಿದ್ಯಾವಂತರುಗಳನ್ನು ಕೇಳುವವರಿಲ್ಲದೇ ಅವರುಗಳು ಬೀದಿ ಬೀದಿಗಳಲ್ಲಿ ಕೆಲಸ ಇಲ್ಲದೇ ಅಲೆಯುತ್ತಾ ಇದ್ದಾರೆ. ಕರ್ನಾಟಕರಾಜ್ಯದಲ್ಲಿ ಕೇವಲ ಬೆಂಗಳೂರು ಮಾತ್ರವಲ್ಲ. ರಾಜ್ಯದ ಎಲ್ಲೆಡೆಗಳಲ್ಲಿಯೂ ದೊಡ್ಡ ದೊಡ್ಡ ಕಾರ್ಖಾನೆಗಳು ಸ್ಥಾಪಿತವಾಗಿವೆ. ಆದರೆ ಕನ್ನಡಿಗರಿಗೆ ಎಲ್ಲಿಯೂ ಉತ್ತಮ ಹುದ್ದೆಗಳು ಕೊಡುವುದಿಲ್ಲ, ಎಲ್ಲಾದರೂ ಜವಾನರಾಗಿ ಕನ್ನಡಿಗರನ್ನು ತೆಗೆದುಕೊಳ್ಳುತ್ತಿದ್ದಾರೆ ಅಷ್ಟೆ. ದೊಡ್ಡ ದೊಡ್ಡ ಅಧಿಕಾರಿಗಳು ಎಲ್ಲರೂ ಹೊರಗಿನವರೇ. ಯಾಕೆ ನಮ್ಮ ಕನ್ನಡದವರು ಯೋಗ್ಯ ವಿದ್ಯಾರ್ಹತೆಯನ್ನು ಪಡೆದವರು ಇಲ್ಲವೇ ಎಂದು

ನಾನು ಕೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ನೀರಿನ ಸೌಲಭ್ಯ ಚೆನ್ನಾಗಿದೆ, ವಿದ್ಯುಚ್ಛಕ್ತಿ ಸೌಕರ್ಯವೂ ಚೆನ್ನಾಗಿದೆ, ಜನರೂ ಧಾರಾಳ ಮನೋಭಾವವುಳ್ಳವರು, ಎಲ್ಲಾ ಅನುಕೂಲಗಳೂ ಇದೆಯೆಂದು ಹೊರಗಿನವರು ಇಲ್ಲಿ ಬಂದು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆ. ರಾಜ್ಯದ ಸಂಪೂರ್ಣ ಸೌಲಭ್ಯಗಳನ್ನು ಬಳಕೆ ಮಾಡಿಕೊಂಡು ತಮ್ಮ ಕಾರುಬಾರುಗಳನ್ನು ನಡೆಸುತ್ತಾರೆ. ನಡೆಸಲಿ, ಆದರೆ ತಮ್ಮ ಕೈಗಾರಿಕೆ, ಕಾರ್ಖಾನೆಗಳಲ್ಲಿ ನಮ್ಮ ಕನ್ನಡಿಗರನ್ನು ನೇಮಿಸುವಲ್ಲಿ ಕನ್ನಡಿಗರಿಗೆ ನೌಕರಿಗಳನ್ನು ಕೊಡುವುದರಲ್ಲಿ ಮಾತ್ರ ಹಿಂದುಳಿಯುತ್ತಾರೆ. ಅಧ್ಯಕ್ಷರೇ, ಇವೊತ್ತು ಎಚ್.ಎಎಲ್. ಕಾರ್ಖಾನೆಯನ್ನು ತೆಗೆದುಕೊಂಡಲ್ಲಿ ಶೇಕಡಾ ೯೦ರಷ್ಟು ಭಾಗ ಅಲ್ಲಿ ತಮಿಳು ಜನರು ಇದ್ದಾರೆ. ನಾನು ಯಾರನ್ನೂ ಯಾವ ಜನರನ್ನು ವಿರೋಧಿಸುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ನಮ್ಮ ಜನರಿಗೆ ಮೊದಲು ಉದ್ಯೋಗಬೇಕು. ಹೀಗಾಗದಿದ್ದರೆ ನಮ್ಮ ಜನರು ಎಲ್ಲಿಗೆ ಹೋಗಬೇಕು ಎಂಬುದು ನನ್ನ ಪ್ರಶ್ನೆ. ಇವೊತ್ತು ಈ ದೇಶದಲ್ಲಿ ನಮ್ಮ ಕರ್ನಾಟಕ ರಾಜ್ಯವೆಂಬುದಿದೆ. ಇಲ್ಲಿ ನಮ್ಮ ಜನರು ಇದ್ದಾರೆ. ಅವರೂ ಕೂಡಾ ಬದುಕ ಬೇಕು, ಬಾಳ ಬೇಕು. ಆ ದೃಷ್ಟಿಯಿಂದ ನಮ್ಮ ಜನರಿಗೆ ಆದ್ಯ ಪ್ರಾಶಸ್ತ್ಯವನ್ನು ನೀಡ ಬೇಕು ಎಂದು ನಾನು ಕೇಳುತ್ತಿರುವುದು. ಉದಾಹರಣೆಗೆ ಹೇಳುವುದಾದರೆ, ನಮಗೆ ಹತ್ತಿರದ ತಮಿಳು ನಾಡು ಗಡಿ ಭಾಗದಲ್ಲಿ ಇಲ್ಲಿಂದ ಕೇವಲ ೩೫ ಕಿ.ಮೀ. ಅಂತರದಲ್ಲಿ ಹೊಸೂರು ಇದೆ. ತಮಿಳುನಾಡಿಗೆ ಸೇರಿದ ಊರು ಅದು. ಅಲ್ಲಿಯೂ ತಮಿಳುನಾಡು ಸರಕಾರದವರು ೭—೮ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಅವುಗಳಲ್ಲಿ ದುಡಿಯುವ ಜನರೆಲ್ಲಾ ತಮಿಳು ಜನರೆ. ಯಾಕೆ ಅಲ್ಲಿ ಕನ್ನಡ ಜನರು ಇಲ್ಲವೇ ? ಎಂದು ನೀವು ಕೇಳಬಹುದು. ಇದ್ದಾರೆ, ಸಾಕಷ್ಟು ಜನರು ಅಲ್ಲಿದ್ದಾರೆ. ಆದರೆ ತಮಿಳುನಾಡಿನ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುವಂತಿಲ್ಲವಲ್ಲಾ ? ಅಲ್ಲಿ ತಮಿಳರಿಗೆ ಪ್ರಾಶಸ್ತ್ಯ ಕೊಡುತ್ತಾರೆ. ಅಲ್ಲಿ ಸಾಕಷ್ಟು ಜನ ಕನ್ನಡದವರು ಇದ್ದರೂ ಕೂಡಾ ಒಬ್ಬರಿಗೂ ಉದ್ಯೋಗವನ್ನು ಕೊಟ್ಟಿಲ್ಲ. ಆದುದರಿಂದ ಇವೊತ್ತು ನಮ್ಮಲ್ಲಿ ನಮ್ಮ ಜನರಿಗೆ ಉದ್ಯೋಗ ಕೇಳುವುದು ತಪ್ಪಾಗುತ್ತದೆಯೇ ? ನಮ್ಮ ರಾಜ್ಯ ಸರಕಾರದ ಕಾರ್ಖಾನೆ: ಕೈಗಾರಿಕೆಗಳೂ ಇವೆ. ಅವುಗಳಲ್ಲಿಯೂ ಇದೇ ಪರಿಸ್ಥಿತಿ. ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ನನ್ನ ಕ್ಷೇತ್ರದಲ್ಲಿ ಕಿಂಕೋ ಕಾರ್ಖಾನೆ ಇದೆ, ಕವಿಕಾ ಇದೆ. ಇವುಗಳು ಲಕ್ಷಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಾ ಇವೆ. ಕಿಂಕೋ ಕೂಡಾ ಲಕ್ಷಾಂತರ ರೂಪಾಯಿಗಳನ್ನು ಕಾರ್ಮಿಕರಿಗೆ ಕೊಡುವುದಕ್ಕೋಸ್ಕರ ಸುರಿಯುತ್ತಾ ಇದ್ದಾರೆ. ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ. ಇಂತಹ ಕಾರ್ಖಾನೆಗಳಲ್ಲಿ ಅಧಿಕಾರಿಗಳ ಕೈಚಳಕ, ದುರುಪಯೋಗ, ಎಲ್ಲಾ ಇಲ್ಲಿ ಇದೆ. ಆದರಿಂದ ನಷ್ಟ ಆಗುತ್ತಿದೆ. ಆದರೆ ಬಡವರ ಕಂದಾಯದ ಹಣವನ್ನು ಈ ರೀತಿಯಲ್ಲಿ ನಾವು ಹಾಳು ಮಾಡುವುದಲ್ಲ. ಅವರ ಹಿತಾಸಕ್ತಿಯನ್ನು ಕಾಪಾಡಬೇಕು. ಆದುದರಿಂದ ಇಂತಹ ಕಡೆ ಲಕ್ಷವಿಟ್ಟು, ಈ ರೀತಿಯ ನಷ್ಟವಾಗುವುದನ್ನು ದುರುಪಯೋಗ ಆಗುವುದನ್ನು ನಮ್ಮ ಜನತಾ ಸರಕಾರವಾದರೂ ತಪ್ಪಿಸಬೇಕೆಂದು ಅರಿಕೆ ಮಾಡುತ್ತೇನೆ. ಈಗ ನಮ್ಮ ಸರಕಾರ. ಜನತಾ ಸರಕಾರ ಆಡಳಿತದಲ್ಲಿರುವುದರಿಂದ ಅದು ಒಳ್ಳೆಯ ಸರಕಾರ ಎಂದು ಜನತೆಯಿಂದ ಮಾನ್ಯತೆಯನ್ನು ಹೊಂದಿದೆ. ಒಳ್ಳೆಯ ಹೆಸರನ್ನು ಪಡೆದಿದೆ. ಅದನ್ನು ಉಳಿಸಿಕೊಳ್ಳಬೇಕು. ಅಂತೆಯೇ ಜನತಾ ಸರ್ಕಾರದವರು ಪ್ರತಿಯೊಂದು ಕುಟುಂಬಕ್ಕೂ ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದ್ದಾರೆ ಅದಕ್ಕೆ ನಮ್ಮ ಮೂಲವಾದ ಉದ್ದೇಶ, ಗುರಿಯ ಸಾಧನೆ ಎಲ್ಲವೂ ಬೇಕು. ಈ ಮನೆಯಲ್ಲಿ ಬರಿ ಘೋಷಣೆ ಮಾಡುವುದರಿಂದ ಆಗುವುದಿಲ್ಲ. ಅದನ್ನು ಸಾಧನೆ ಮಾಡಿ ತೋರಿಸುತ್ತೇವೆಂದು ನಂಬಿದ್ದೇವೆ. ಇಲ್ಲದಿದ್ದರೆ, ನಮ್ಮ ವಿರೋಧಪಕ್ಷದ ಸದಸ್ಯರೂ ಕೂಡಾ ಜನತಾ ಸರಕಾರದವರು ಹೇಳಿದ್ದನ್ನು ಮಾಡಲಿಲ್ಲ ಎಂದು ಟೀಕೆ ಮಾಡುತ್ತಾರೆ. ಹಾಗೆ ಆಗಬಾರದು.

ಇವೊತ್ತು ನಮ್ಮ ಸರಕಾರದ ಕಾರ್ಖಾನೆಗಳಲ್ಲಾಗಲೀ, ಕೇಂದ್ರ ಸರ್ಕಾರ ಕಾರ್ಖಾನೆಗಳಲ್ಲಾಗಲೀ ನಮ್ಮ ಕನ್ನಡದ ಅಧಿಕಾರಿಗಳು ಇಲ್ಲ. ಎಲ್ಲರೂ ನೆರೆ ರಾಜ್ಯಗಳವರು. ಅವರು ತಮ್ಮ ಜನರನ್ನೇ ನೇಮಿಸಿಕೊಳ್ಳುತ್ತಾರೆ. ಅವರು ಕನ್ನಡದ ಜನರ ಬಗ್ಗೆ ಬೇಧಭಾವವನ್ನು ತಾಳಿದ್ದಾರೆ. ಕನ್ನಡದ ಬಗೆಗಾಗಲೀ, ಕನ್ನಡದ ಜನರ ಬಗೆಗಾಗಲೀ ಅವರಿಗೆ ಅಭಿಮಾನ ಎನ್ನುವುದೇ ಇಲ್ಲ. ಈ ಸಂದರ್ಭದಲ್ಲಿ ಇದನ್ನು ಬಹಳ ವಿಷಾದದಿಂದ ಹೇಳುತ್ತಾ ಇದ್ದೇನೆ. ಮಾನ್ಯ ಮಂತ್ರಿಗಳವರು ಇದರ ಬಗ್ಗೆ ಗಮನ ಹರಿಸಬೇಕು. ಕೈಗಾರಿಕೆಗಳಲ್ಲಿಯಾಗಲೀ ಅಥವಾ ಕಾರ್ಖಾನೆಗಳಲ್ಲಿಯಾಗಲೀ ಮುಖ್ಯವಾಗಿ ಕನ್ನಡದ ಅಧಿಕಾರಿಯವರುಗಳನ್ನು ಹಾಕಬೇಕು. ಕನ್ನಡದ ಜನರು ಯಾವ ವಿಷಯದಲ್ಲಿಯೂ ಕಡಿಮೆಯವರಲ್ಲ. ಅವರಲ್ಲಿ ಯಾವ ವಿಷಯದಲ್ಲಿಯೂ ಕೊರತೆ ಎಂಬುದು ಇಲ್ಲ ಎಂದು ಹೇಳ ಬಯಸುತ್ತೇನೆ. ಸ್ವಾಮಿ,

ಇಲ್ಲಿಯ ಕೈಗಾರಿಕೆಗಳಲ್ಲಿ ನಮ್ಮ ಕನ್ನಡಿಗರಿಗೆ ಉದ್ಯೋಗ ಸಿಕ್ಕುತ್ತಿಲ್ಲವೆಂದು ಹೇಳುತ್ತೇನೆ. ಕಾರಣ ಮೂಲಭೂತವಾಗಿ ಅದರಲ್ಲಿನ ದೊಡ್ಡ ದೊಡ್ಡ ಅಧಿಕಾರಿಗಳು ನೆರೆ ರಾಜ್ಯದವರು ಆಗಿರುವುದರಿಂದ ಅವರು ತಮ್ಮ ಜನರನ್ನೇ ನೇಮಿಸಿಕೊಳ್ಳುತ್ತಾರೆ. ಮದ್ರಾಸು, ಕಲ್ಕತ್ತಾ, ಪಂಜಾಬ್, ಅಲ್ಲಿನ ಅಧಿಕಾರಿಗಳು ತಮ್ಮಲ್ಲಿನ ಜನರನ್ನು ಇಲ್ಲಿಗೆ ಉದ್ಯೋಗಕ್ಕಾಗಿ ಕರೆಸಿಕೊಳ್ಳುತ್ತಾರೆಯೇ ವಿನಹ ನಮ್ಮ ಜನರನ್ನು ತೆಗೆದು ಕೊಳ್ಳುತ್ತಿಲ್ಲ. ನಮ್ಮಲ್ಲಿಗೆ ಬಂದು ಅವರ ಅಧಿಕಾರದ ಒಂದು ಅಮಲಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳಾಗಿ ನಮ್ಮ ಕನ್ನಡಿಗರ ವಿರುದ್ಧ ವರ್ತಿಸುತ್ತಾ ಇದ್ದಾರೆ. ಇಂತಹವರ ಬಗ್ಗೆ ಮಾನ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ರ. ಪಿ.ಎಂ.

ಇನ್ನು ತಾವು ಕೈಗಾರಿಕಾ ಅಭಿವೃದ್ಧಿ ನಿಗಮವೆಂದು ಮಾಡಿದ್ದೀರಿ. ಈ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ. ಸ್ವಾಮಿ ಇವರು ಹಂಚಿಕೆ ಮಾಡಿರುವ ನಿವೇಶನ ಗಳಲ್ಲಿ ಕರ್ನಾಟಕ ರಾಜ್ಯದ ಕನ್ನಡಿಗರಿಗೆ ಒಂದೇ ಒಂದು ಸೈಟ್ ಸಹ ಕೊಟ್ಟಿಲ್ಲ. ಇವರು ನಿವೇಶನಗಳನ್ನು ಬೇರೆ ರಾಜ್ಯದವರಿಗೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಣಕಾಸಿನ ಸಂಸ್ಥೆ ಒಂದು ಇದೆ. ಅವರು ಕೂಡ ಎಷ್ಟು ಜನ ಕನ್ನಡಿಗರಿಗೆ ಹಣಕಾಸಿನ ನೆರವು ನೀಡಿದ್ದಾರೆ? ಸಾಮಾನ್ಯವಾಗಿ ಇವರು ಹೊರಗಿನ ಜನರಿಗೆ ಹಣಕಾಸಿನ ನೆರವು ನೀಡಿ ಹೊರಗಿನವರು ಕೈಗಾರಿಕೆಗಳನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಕೈಗಾರಿಕೆಗಳಲ್ಲಿ ಕನ್ನಡದ ಜನ ಒಬ್ಬರೂ ಕೂಡ ಇಲ್ಲ. ಅವರು ಯಾವ ಪ್ರದೇಶದಿಂದ ಬಂದಿರುತ್ತಾರೋ ಅಲ್ಲಿಂದಲೇ ಎಲ್ಲಾ ಅಧಿಕಾರಿಗಳನ್ನು ಕರೆಸಿಕೊಳ್ಳುತ್ತಾರೆ. ಏನೋ ಕನ್ನಡದವರಿಗೆ ಕೆಲಸ ಕೊಡಬೇಕಲ್ಲ ಎಂದು ಹೇಳಿ ಗೇಟು ಕಾಯುವ ಕೆಲಸವೋ ಅಥವಾ ಜವಾನರ ಕೆಲಸವೋ ಕೊಡುತ್ತಾರೆ. ಸ್ವಾಮಿ ಅವರು ಮಾಡುತ್ತಿರುವ ಕೆಲಸವನ್ನು ನೋಡಿದರೆ ನಮಗೆ ಕಣ್ಣಿನಲ್ಲಿ ನೀರು ಬರುವ ಬದಲು ರಕ್ತ ಬರುತ್ತದೆ. ನಾನು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಮ್ಮ ಸರ್ಕಾರದವರು ಗ್ರಾಮಾಭಿವೃದ್ಧಿಯನ್ನು ಮಾಡುವ ಸಲುವಾಗಿ ಗುಡಿ ಕೈಗಾರಿಕೆಗಳನ್ನು ಮತ್ತು ಸಣ್ಣ ಸಣ್ಣ ಕೈಗಾರಿಕೆ ಗಳನ್ನು ಸ್ಥಾಪನೆ ಮಾಡುವ ಸಲುವಾಗಿ ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಸಣ್ಣ ಸಣ್ಣ ಕೈಗಾರಿಕೆಗಳ ಮಾಲೀಕರು ಇವತ್ತು ಹಣದ ಅಮಲಿನಲ್ಲಿ ಜೀವನ ಮಾಡುತ್ತಿದ್ದಾರೆ. ಅವರು ಯಾವುದೇ ಕಾನೂನು ಕೂಡ ಲೆಕ್ಕಿಸುತ್ತಿಲ್ಲ. ಸ್ವಾಮಿ ಗಂಧದ ಕಡ್ಡಿಯನ್ನು ತಯಾರು ಮಾಡುವ ಕೈಗಾರಿಕೆಗಳು ಮತ್ತು ಊದಬತ್ತಿಯನ್ನು ತಯಾರು ಮಾಡುವ ಕಾರ್ಖಾನೆಗಳಿಗೆ ನಮ್ಮ ಹಣಕಾಸಿನ ಸಂಸ್ಥೆಯಿಂದ ಬಡವರಿಗೆ ಯಾರಿಗೂ ನೆರವು ಸಿಗುತ್ತಿಲ್ಲ. ಅಲ್ಲಿ ಹಣಕಾಸಿನ ನೆರವು ಸಿಗುವುದು ಕೇವಲ ದೊಡ್ಡ ದೊಡ್ಡ ಶ್ರೀಮಂತ ವರ್ಗದವರಿಗೆ ಮಾತ್ರ. ಅವರು ಇವತ್ತು ಈ ಹಣಕಾಸಿನ ಸಂಸ್ಥೆಯಿಂದ ನೆರವು ಪಡೆದು ಅಲ್ಲಿ ಕೆಲಸ ಮಾಡುತ್ತಿರುವ ಬಡ ಹೆಣ್ಣು ಮಗಳಿಗೆ ಸರಿಯಾದ ಕೂಲಿ ಕೊಡುತ್ತಿಲ್ಲ. ಅವಳಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಡುತ್ತಿಲ್ಲ. ಅಲ್ಲಿ ಕೂಡ ಒಂದು ರೀತಿಯಲ್ಲಿ ಲಂಚಗುಳಿತನ ನಡೆಯುತ್ತಿದೆ. ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸ್ವಾಮಿ ಅದೇ ರೀತಿಯಲ್ಲಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನೊಂದು ಕಾರ್ಖಾನೆ ಬರುತ್ತದೆ. ಅದು ಯಾವುದೆಂದರೆ ಬ್ಯಾಟರಾಯನಪುರದಲ್ಲಿರುವ ಚರ್ಮವನ್ನು ಹದ ಮಾಡುವ ಕಾರ್ಖಾನೆ. ಸ್ವಾಮಿ ಈ ಕಾರ್ಖಾನೆಯಲ್ಲಿ ಚರ್ಮವನ್ನು ಹದ ಮಾಡಿ ರಷ್ಯಾ ದೇಶಕ್ಕೆ ಕಳುಹಿಸಿ ಕೊಡುತ್ತಾರೆ. ಈ ಕಾರ್ಖಾನೆಯ ಮಾಲೀಕರು ಕಲ್ಕತ್ತಾ ನಗರದವರು. ಇವರಿಗೆ ನಮ್ಮ ಕರ್ನಾಟಕ ರಾಜ್ಯದ ಹಣಕಾಸಿನ ಸಂಸ್ಥೆಯಿಂದ ಧನಸಹಾಯವನ್ನು ಮಾಡಿದ್ದಾರೆ. ಅವರು ಯಾವುದೇ ರೀತಿಯ ಪರವಾನಿಗೆಯನ್ನು ಸಹ ಪಡೆಯದೆ ಕಟ್ಟಡವನ್ನು ಕಟ್ಟಿದ್ದಾರೆ. ಈ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕು ಸ್ವಾಮಿ ಇಲ್ಲಿ ನಮ್ಮ ಕನ್ನಡಿಗರಿಗೆ ಯಾವುದೇ ಕೆಲಸವನ್ನು ಕೊಟ್ಟಿಲ್ಲ ಇವರು ಎಲ್ಲಾ ಅಧಿಕಾರಿಗಳನ್ನು ಕಲ್ಕತ್ತಾ ನಗರದ ಜನರನ್ನೇ ನೇಮಕ ಮಾಡಿಕೊಂಡಿದ್ದಾರೆ. ಅದೇ ನಾನು ಮೊದಲೇ ಹೇಳಿದ ಹಾಗೆ ನಮ್ಮ ಕನ್ನಡಿಗರಿಗೆ ಗುಲಾಮಗಿರಿಯ ಕೆಲಸವೋ ಅಥವಾ ಜವಾನನ ಕೆಲಸವೋ ಕೊಡುತ್ತಿದ್ದಾರೆ. ನಮ್ಮ ಸರ್ಕಾರದಿಂದ ನೆರವು ಪಡೆದು ಬೇರೆಯವರಿಗೆ ಕೆಲಸ ಕೊಡುವುದು ಇದು ಯಾವ ನ್ಯಾಯ? ತಮಿಳುನಾಡಿನವರು ಕೈಗಾರಿಕೆಯನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಿದರೆ ತಮಿಳು ನಾಡಿನ ಜನರಿಗೆ ಮಾತ್ರ ಅವರು ಕೆಲಸ ಕೊಡುವುದು ಕನ್ನಡಿಗರಿಗೆ ಕೆಲಸ ಕೊಡುವುದಿಲ್ಲ. ತಮಿಳು

ನಾಡಿನಲ್ಲಿ ಯಾರೂ ಸಿಗಲಿಲ್ಲವೆಂದರೆ ಉತ್ತರ ಪ್ರದೇಶದಿಂದಲೂ ಕಲ್ಕತ್ತಾ ನಗರದಿಂದಲೂ ದೆಹಲಿಯಿಂದಲೂ ಅಥವಾ ಆಂಧ್ರಪ್ರದೇಶದಿಂದಲೂ ಇಲ್ಲಾ ಕೇರಳದಿಂದ ಬಂದವರಿಗೂ ಕೆಲಸವನ್ನು ಕೊಡುತ್ತಾರೆ? ಅದೇ ನಮ್ಮ ಕರ್ನಾಟಕದ ಕನ್ನಡಿಗರು ಉತ್ತಮ ಪದವೀಧರರಾಗಿದ್ದರೂ ಕೂಡ ಅವರಿಗೆ ಯಾವುದೇ ಕೆಲಸವನ್ನು ಕೊಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು ಸಣ್ಣ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಮೋಸ ನಡೆಯುತ್ತಿದೆ. ಸಣ್ಣ ಕೈಗಾರಿಕೆಗಳಲ್ಲಿ ಹರಿಜನರಿಗೆ ಮೋಸ ನಡೆಯುತ್ತಿದೆ. ಸ್ವಾಮಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ತಮಿಳುನಾಡಿನಿಂದ ಹರಿಜನರನ್ನು ಕರೆದುಕೊಂಡು ಬಂದು ಕೆಲಸ ಕೊಡುತ್ತಿದ್ದಾರೆ. ಅದೇ ನಮ್ಮ ಕರ್ನಾಟಕದ ಹರಿಜನರಿಗೆ ಕೆಲಸ ಕೊಡುತ್ತಿಲ್ಲ. ಆದಿದ್ರಾವಿಡ ಎನ್ನುವ ಒಂದು ಜಾತಿಯ ಸರ್ಟಿಫಿಕೇಟನ್ನು ಪಡೆದುಕೊಂಡು ಬಂದು ಕರ್ನಾಟಕ ರಾಜ್ಯದಲ್ಲಿ ಉದ್ಯೋಗವನ್ನು ಪಡೆಯುತ್ತಿದ್ದಾರೆ. ಅವರೆಲ್ಲರೂ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಕೊಟ್ಟು ಕೆಲಸವನ್ನು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಉತ್ತಮ ಮಟ್ಟದ ಹರಿಜನ ಪದವೀಧರರು ಇದ್ದರೂ ಕೂಡ ಅವರು ಇವತ್ತು ನಿರುದ್ಯೋಗಿಗಳಾಗಿದ್ದಾರೆ ಈ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಸ್ವಾಮಿ ಮೈಸೂರು ರಸ್ತೆಯಲ್ಲಿ ಕ.ವಿ.ಕಾ. ಕಾರ್ಖಾನೆ ಇದೆ. ಈ ಕ.ವಿ.ಕಾ. ಕಾರ್ಖಾನೆಗೆ ಕೆ.ಜಿ.ಎಫ್. ನಿಂದ ಹರಿಜನರನ್ನು ಕರೆದುಕೊಂಡು ಬಂದು ಕೆಲಸವನ್ನು ಕೊಟ್ಟಿದ್ದಾರೆ. ಅವರೆಲ್ಲರೂ ತಮಿಳುನಾಡಿನಿಂದ ಬಂದವರು. ಅವರು ಒಂದು ವೇಳೆ ಮಂಡ್ಯದಿಂದಲೂ, ಅಥವಾ ಚಾಮರಾಜನಗರದಿಂದಲೂ, ಮೈಸೂರಿನಿಂದಲೂ ಬಂದಿದ್ದರೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಅವರು ಕೆ.ಜಿ.ಎಫ್. ಗೆ ಬಂದು ಅಲ್ಲಿಂದ ಇಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಕೊಟ್ಟು ಕೆಲಸವನ್ನು ಸಂಪಾದನೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಯಾರೂ ಹರಿಜನರು ಇಲ್ಲವೋ? ಈ ಬಗ್ಗೆ ಸರ್ಕಾರದವರು ಒಂದು ದಿಟ್ಟ ನಿಲುವನ್ನು ತಾಳಬೇಕು. ಕನ್ನಡದ ಜನರಿಗೆ ರಕ್ಷಣೆ ಕೊಡಬೇಕು. ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ಮನೆಗೊಬ್ಬರಿಗೆ ಕೆಲಸ ಕೊಡುತ್ತೇವೆಂದು ಹೇಳಿದ್ದಾರೆ ಅದೇ ರೀತಿಯಲ್ಲಿ ಜನ ನಮಗೆ ಮತವನ್ನು ನೀಡಿ ಕಳುಹಿಸಿಕೊಟ್ಟಿದ್ದಾರೆ. ನಾವು ಕೊಟ್ಟಂತಹ ವಾಗ್ದಾನವನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ನನ್ನ ಕ್ಷೇತ್ರದಲ್ಲಿ ಇನ್ನೊಂದು ಅಮ್ಕೊ ಬ್ಯಾಟರಿ ಕೈಗಾರಿಕೆ ಇದೆ. ಇವರು ತಮಿಳುನಾಡಿನಿಂದ ಬಂದವರು ಇವರು ಇವತ್ತು ಬೆಂಗಳೂರು ನಗರದಲ್ಲಿ ಎರಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಒಂದು ಮೈಸೂರು ರಸ್ತೆಯಲ್ಲಿ ಎರಡನೆಯದು ಬಳ್ಳಾರಿ ರಸ್ತೆಯಲ್ಲಿ. ಸ್ವಾಮಿ ಮೈಸೂರು ರಸ್ತೆಯಲ್ಲಿರುವ ಕೈಗಾರಿಕೆಯ ಪಕ್ಕದಲ್ಲಿ ಒಂದು ಗಾಳಿ ಆಂಜನೇಯಸ್ವಾಮಿ ದೇವಸ್ಥಾನವಿದೆ. ಅಲ್ಲಿಗೆ ಪ್ರತಿದಿವಸ ನೂರಾರು ಭಕ್ತರು ಬಂದು ಹೋಗುತ್ತಾರೆ. ಸ್ವಾಮಿ ಈ ಕೈಗಾರಿಕೆಯಿಂದ ವಿಪರೀತವಾದ ವಾಸನೆ ಬರುತ್ತದೆ. ನೂರಾರು ಜನ ಭಕ್ತಾದಿಗಳು ನನ್ನ ಮನೆಗೆ ಬಂದು ಹೇಳಿದರು. ಆಮೇಲೆ ನಾನು ಆ ಕಾರ್ಖಾನೆಯ ಮಾಲೀಕರಿಗೆ ನಾಲ್ಕೈದು ಪತ್ರಗಳನ್ನು ಬರೆದಿದ್ದೇನೆ ಇದುವರೆವಿಗೂ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲ. ಸ್ವಾಮಿ ಅವರು ಕೋಟ್ಯಾಂತರ ರೂಪಾಯಿಗಳ ದುಡ್ಡಿನ ಅಮಲಿನಲ್ಲಿ ಮುಳುಗಿದ್ದಾರೆ. ಅವರು ಸರ್ಕಾರಕ್ಕೆ ಆಗಲಿ, ಅಥವಾ ನಮ್ಮಂತಹ ನಿಮ್ಮಂತಹವರಿಗೇ ಆಗಲಿ ಬೆಲೆ ಕೊಡುತ್ತಿಲ್ಲ. ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ ಇವತ್ತು ನಮ್ಮ ರಾಜ್ಯದಲ್ಲಿ ಸಣ್ಣ ಸಣ್ಣ ಗುಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸಹಕಾರ ಸಂಘಗಳಿಂದ ಕೂಡ ಹಣಸಹಾಯ ಮಾಡುತ್ತಿದ್ದಾರೆ. ಆ ರೀತಿ ಸುಮಾರು ೬೨೦ ಸಣ್ಣ ಸಣ್ಣ ಕೈಗಾರಿಕೆಗಳು ಇವೆ. ಆ ಕೈಗಾರಿಕೆಗಳಲ್ಲಿ ಕಡ್ಡಾಯವಾಗಿ ಕನ್ನಡಿಗರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕು. ಹೊರಗಿನಿಂದ ಬಂದವರಿಗೆ ಉದ್ಯೋಗವನ್ನು ಕೊಡುವುದು ತಪ್ಪಿಸಬೇಕೆಂದು ಹೇಳುತ್ತೇನೆ. ಸ್ವಾಮಿ ನಾವೇನಾದರೂ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಇರದಿದ್ದರೆ ಅಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳಿಗೆ ಚಡಿ ಏಟು ಕೊಟ್ಟಿದ್ದರೂ ಏನೂ ಪಾಪ ಬರುತ್ತಿರಲಿಲ್ಲವೇನೋ ಎಂದು ನನಗೆನಿಸುತ್ತದೆ. ಅಲ್ಲಿರತಕ್ಕಂಥ ಅಧಿಕಾರಿಗಳು ಕನ್ನಡಿಗರನ್ನು ಶೋಷಣೆ ಮಾಡುತ್ತಿದ್ದಾರೆ. ಕನ್ನಡದ ಜನರನ್ನು ರಕ್ಷಣೆ ಮಾಡುತ್ತಿಲ್ಲ. ಕನ್ನಡದ ಜನರ ರಕ್ತವನ್ನು ಹೀರುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ತಪ್ಪಿಸಬೇಕು ಉತ್ತಮವಾದ ಪದವೀಧರರಿಗೆ ಕರ್ನಾಟಕದಲ್ಲಿ ಕಡ್ಡಾಯವಾಗಿ ಉದ್ಯೋಗಾವಕಾಶ ಕೊಡಬೇಕು. ಲೋಕಸಭೆಯಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರು ಯಾವ ರೀತಿಯಲ್ಲಿ ಏರಿದ ಧ್ವನಿಯಲ್ಲಿ ಕನ್ನಡದಲ್ಲಿ ಮಾತನಾಡಿದರೂ ಅದೇ ಒಂದು

ದಿಟ್ಟ ನಿಲುವನ್ನು ಸಹ ತೆಗೆದುಕೊಳ್ಳಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್.ಜಿ. ನಂಜಯ್ಯನಮಠ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳ ಮೇಲೆ ಇದುವರೆವಿಗೂ ಮಾನ್ಯ ಮಿತ್ರರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರವನ್ನು ಬಿಟ್ಟು ನನಗೆ ಕೊಟ್ಟಿರತಕ್ಕಂಥ ಅಲ್ಪ ಸಮಯದಲ್ಲಿ ನಾನು ಹೇಳಬೇಕಾದಂಥ ಎಲ್ಲಾ ವಿಚಾರಗಳನ್ನು ಹೇಳಲು ಸಾಧ್ಯವಾಗದಿದ್ದರೂ ಕೂಡ ವಿಚಾರಗಳನ್ನು ಸ್ವಲ್ಪ ಜಗ್ಗಿ ಹಿಡಿದು ಕಟ್ಟಿ ಅದಕ್ಕನುಸಾರವಾಗಿ ಹೇಳುತ್ತೇನೆ ಈ ಒಂದು ಕೈಗಾರಿಕಾ ಇಲಾಖೆಯ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಹಿಂದೆ ಮಾತನಾಡಿದಂತಹ ನಮ್ಮ ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮತ್ತು ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು ಅನೇಕ ಅಂಕಿಅಂಶಗಳನ್ನು ಕೊಟ್ಟು ಪ್ರಸ್ತಾಪ ಮಾಡಿದ್ದಾರೆ. ಅದೇ ಒಂದು ಧಾಟಿಯಲ್ಲಿ ನಾನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ೧೯೮೨ನೇ ಇಸವಿಯಲ್ಲಿ ೬೦೯೬ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಸುಮಾರು ೪೬,೪೨೦ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುತ್ತೇವೆಂದೂ ಮತ್ತು ಅದಕ್ಕೆ ಸುಮಾರು ೬೦೨೫ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕುತ್ತೇವೆಂದು ಹೇಳಿ ಒಂದು ಸ್ಪಷ್ಟ ಚಿತ್ರವನ್ನು ನಮ್ಮ ಮುಂದೆ ಇಟ್ಟಿದ್ದೀರಿ. ಅದೇ ರೀತಿಯಲ್ಲಿ ೧೯೮೪ನೇ ಇಸವಿಯಲ್ಲಿ ೧೧,೬೦೬ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಸುಮಾರು ೫೫ ೮೪೯ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡುವುದಾಗಿ ಹೇಳಿದ್ದೀರಿ. ಇದಕ್ಕೆ ಬಂಡವಾಳ ಸುಮಾರು ೫೨೨೪.೩೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಲಾಗುವುದೆಂದು ಹೇಳಿದ್ದೀರಿ. ಈ ಅಂಕಿಅಂಶಗಳನ್ನು ನೋಡಿದಾಗ ಪ್ರಾಮಾಣಿಕವಾದಂತಹ ಅಂಕಿಅಂಶಗಳನ್ನು ಕೊಟ್ಟಿಲ್ಲವೆಂದು ನನಗನಿಸುತ್ತದೆ. ಮಾನ್ಯ ಮಂತ್ರಿಗಳಿಗೆ ಇಲಾಖೆಯವರು ಕೊಟ್ಟಿರುವ ಅಂಕಿಅಂಶಗಳನ್ನು ಸರಿಯಿಲ್ಲವೆಂದು ನನಗನಿಸುತ್ತದೆ. ಈ ಅಂಕಿಅಂಶಗಳನ್ನು ನೋಡಿದಾಗ ನನಗೆ ಒಂದು ರೀತಿಯಲ್ಲಿ ಸಂಶಯಾಸ್ಪದವಾಗಿದೆ. ಈ ಅಂಕಿಅಂಶಗಳಲ್ಲಿ ಕೊನೆಯ ಅಂಕಿಸಂಖ್ಯೆಗಳು ಸುಳ್ಳಿರಬಹುದು. ಇಲ್ಲವೇ ಮೊದಲನೆಯ ಅಂಕಿಸಂಖ್ಯೆಗಳು ಸುಳ್ಳಿರಬಹುದು ಎಂದು ಅನಿಸುತ್ತದೆ. ಇವರು ಒದಗಿಸಿಕೊಟ್ಟಿರುವ ಬಂಡವಾಳ ಮತ್ತು ಒದಗಿಸಿಕೊಡುವ ಉದ್ಯೋಗಾವಕಾಶ ಇವೆಲ್ಲವನ್ನು ನೋಡಿದಾಗ ನಿಜವಾಗಿಯೂ ಇದು ಸಾಧ್ಯವಿಲ್ಲವೆಂದು ನನಗೆನಿಸುತ್ತದೆ. ಇವರು ಹಿಂದಿನ ಎರಡು ವರ್ಷಗಳ ಅಂಕಿಅಂಶಗಳನ್ನು ಸೇರಿಸಿ ಏನಾದರೂ ಕೊಟ್ಟಿದ್ದಾರೋ ಏನೋ ಎಂದು ನನಗೆ ಸಂಶಯವಾಗಿದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು. ಪ್ರತಿ ಸಾಲಿನಲ್ಲಿ ೫೦ ಕಾರ್ಖಾನೆಗಳನ್ನು ಸಣ್ಣ ಪ್ರಮಾಣದ ಉದ್ದಿಮೆಗಳನ್ನು ಬೆಳವಣಿಗೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಎರಡು ವರ್ಷಗಳ ಹಿಂದೆ ತಾವು ಘೋಷಿಸಿದ್ದೀರಿ. ಈ ಒಂದು ದಿಸೆಯಲ್ಲಿ ಇವತ್ತು ಪ್ರಾಮಾಣಿಕವಾದ ಒಂದು ಹೆಜ್ಜೆಯನ್ನು ಸರಕಾರ ಇಟ್ಟಿಲ್ಲ ಎನ್ನತಕ್ಕಂಥಾದ್ದನ್ನು ತಮ್ಮ ಮುಖಾಂತರ ತಿಳಿಸಲು ಇಷ್ಟಪಡುತ್ತೇನೆ. ಇನ್ನು ಮುಂದೆ ಹೇಳುತ್ತಾ, ಇವತ್ತು ಇಲ್ಲಿ ಕೈಮಗ್ಗದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನಮ್ಮ ರಾಜ್ಯದಲ್ಲಿ ಸುಮಾರು ೧.೦೩ ಲಕ್ಷ ಕೈಮಗ್ಗಗಳು ಕೆಲಸ ಮಾಡುತ್ತಿದ್ದು ಅದರಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ಮಂಡಲಿಯವರು ೧೫ ಸಾವಿರ ಕೈಮಗ್ಗಗಳನ್ನು ನೋಂದಾಯಿಸಿಕೊಂಡಿದ್ದಾರೆಂದು ಪ್ರಕಟ ಮಾಡಿದ್ದೀರಿ. ಇಷ್ಟೊಂದು ಕೈಮಗ್ಗಗಳು ನಮ್ಮಲ್ಲಿದ್ದರೂ ಕೂಡಾ, ಮುಖ್ಯವಾಗಿ ಒಂದು ಸೇಲಮ್ ಮಾದರಿಯ ತರಬೇತಿ ಸಂಸ್ಥೆ ಇಲ್ಲದಿರುವುದು ವಿಷಾದಕರವಾದುದು. ನಾನು ಇವತ್ತು ಸರಕಾರಕ್ಕೆ ತಮ್ಮ ಮುಖಾಂತರ ಕೇಳಿಕೊಳ್ಳುವುದು ಇಷ್ಟೆ, ನಮ್ಮ ರಾಜ್ಯದಲ್ಲೂ ಸಹ ಒಂದು ಸೇಲಮ್ ಮಾದರಿ ತರಬೇತಿ ಕೇಂದ್ರವನ್ನು ಸ್ಥಾಪಿಸಬೇಕು. ಇದನ್ನು ಸ್ಥಾಪಿಸಿದರೆ ಹೊಸದಾದ ತಾಂತ್ರಿಕ ಸೆಲ್‌ನ್ನು ಪ್ರಾರಂಭ ಮಾಡಿ, ಹೊಸ ತರಬೇತಿಯನ್ನು ನೀಡಿ, ಈ ಉದ್ದಿಮೆಯನ್ನು ಹೆಚ್ಚು ಬೆಳೆಸುವುದಕ್ಕೆ ಸಾಧ್ಯ ಎಂಬುದನ್ನು ಸರಕಾರದ ಗಮನಕ್ಕೆ ತಮ್ಮ ಮುಖಾಂತರ ತರಬಯಸುತ್ತೇನೆ. ಇನ್ನೊಂದು ವಿಶೇಷ ಎಂದರೆ, ನಮ್ಮ ವಿಜಾಪುರ ಜಿಲ್ಲೆಯಲ್ಲಿ ೩೫ ಸಾವಿರ ಕೈಮಗ್ಗಗಳು ಕೆಲಸ ಮಾಡುತ್ತಿವೆ. ಇಷ್ಟೊಂದು ಕೈಮಗ್ಗಗಳು ಕೆಲಸ ಮಾಡುತ್ತಿರುವ ವಿಜಾಪುರ ಜಿಲ್ಲೆಯಲ್ಲಿ ಈ ಸೇಲಮ್ ಮಾದರಿ ತರಬೇತಿ ಕೇಂದ್ರವನ್ನು ತೆರೆದರೆ ಹೆಚ್ಚು ಉಪಯುಕ್ತವಾಗುತ್ತದೆ. ನೂಲಿನ ಬೆಲೆ ದಿನೇ ದಿನೇ ಹೆಚ್ಚಾಗುತ್ತಿದೆ. ೧೪೦ ರೂಪಾಯಿ ಇದದ್ದು ೧೬೦ ರೂಪಾಯಿನವರೆಗೆ ಏರಿದೆ. ಆದರೆ ನೇಕಾರರು ತಯಾರು ಮಾಡಿ ಮಾರತಕ್ಕ ಮಾಲಿನ ಬೆಲೆ ಮಾತ್ರ ಏರುತ್ತಿಲ್ಲ. ಈ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಕೈಮಗ್ಗದ ಉದ್ದಿಮೆ ಬೆಳವಣಿಗೆಗೆ ರಿಬೇಟ್ ಮುಖಾಂತರ ನೂಲನ್ನು

ವಿತರಣೆ ಮಾಡಿದರೆ ಮಾತ್ರ ಬಡ ನೇಕಾರರ ಹೊಟ್ಟೆ ತುಂಬಲು ಸಹಾಯವಾಗುತ್ತದೆ ಎಂದು ಹೇಳಿ, ಈ ಬಜೆಟ್‌ನಲ್ಲೇ ಇದನ್ನು ಮಂಡಿಸಿದ್ದರೆ ಅನುಕೂಲವಾಗುತ್ತಿತ್ತು ಎಂಬ ವಿಚಾರವನ್ನು ಸರಕಾರದ ಗಮನಕ್ಕೆ ತಂದು ರಿಬೇಟ್ ಮುಖಾಂತರ ನೂಲಿನ ವಿತರಣೆಯ ವ್ಯವಸ್ಥೆ ಮಾಡಿದರೆ ಅನುಕೂಲ ಆದೀತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೇಕಾರರಿಗೆ ಉಳಿತಾಯ ಯೋಜನೆ ಜಾರಿಗೆ ತರಲು ಸರಕಾರ ತ್ರಿಫ್ಟ್ ಸ್ಕೀಮ್ ಜಾರಿಗೆ ತಂದಿದ್ದಾರೆ. ಇವತ್ತು ನಾನು ಇದರ ಬಗ್ಗೆ ಮೆಚ್ಚುಗೆಪಡುತ್ತೇನೆ. ಇದರಲ್ಲಿ ೬ ಪರ್ಸೆಂಟ್ ಸರಕಾರದವರು ನೀಡಿ, ಉಳಿದ ೬ ಪರ್ಸೆಂಟ್ ನೇಕಾರರ ಮೇಲೆ ಹಾಕತಕ್ಕ ಸಂದರ್ಭದಲ್ಲಿ, ನೂಲಿನ ಬೆಲೆಯಲ್ಲಿ ಏರಿಕೆ ಹಾಗೂ ಹಲವಾರು ಬೆಲೆಗಳ ಏರಿಕೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವ ನೇಕಾರರಿಗೆ ಸಹಾಯ ಮಾಡಲು ಸರಕಾರ ಏನು ೬ ಪರ್ಸೆಂಟ್ ತ್ರಿಫ್ಟ್‌ಗೆ ತೊಡಗಿಸಿದ್ದೀರಿ ಅದನ್ನು ೧೨ ಪರ್ಸೆಂಟ್‌ಗೆ ಏರಿಸಿದರೆ ನೇಕಾರರಿಗೆ ಅನುಕೂಲವಾಗುತ್ತದೆ. ಆದಕಾರಣ ಇದಕ್ಕೆ ತಿದ್ದುಪಡಿ ತಂದು ೬ ಪರ್ಸೆಂಟ್‌ನಿಂದ ೧೨ ಪರ್ಸೆಂಟ್ ಮಾಡಿದರೆ, ಈ ಒಂದು ಉದ್ಯಮಕ್ಕೆ ಹೆಚ್ಚಿನ ಅವಕಾಶ ಸಿಕ್ಕಿ, ಹೆಚ್ಚಿನ ಬೆಳವಣಿಗೆಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ, ಈ ಕೈಮಗ್ಗದ ಉದ್ದಿಮೆಗಾಗಿ ಸಾಲದ ಯೋಜನೆಗಳು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದಿಂದ ಇದೆ. ಬ್ಯಾಂಕುಗಳಿಂದ ಕೂಡಾ ಈ ಯೋಜನೆಗಾಗಿ ಸಾಲದ ವಿತರಣೆಯಾಗುತ್ತದೆ. ಬ್ಯಾಂಕುಗಳಲ್ಲಿ ಸಾಲ ಕೊಡುವಾಗ ರಿಸರ್ವ್ ಬ್ಯಾಂಕ್‌ನವರು ಸರಕಾರಕ್ಕೆ ಈಗಾಗಲೇ ತಿಳಿಸಿರುವಂತೆ, ಬ್ಯಾಂಕುಗಳಲ್ಲಿ ತಾಂತ್ರಿಕ ಸೆಲ್‌ಗಳನ್ನು ಸ್ಥಾಪಿಸಿದರೆ, ಅವರು ಯಾವ ಒಂದು ಉದ್ದಿಮೆಗೆ ಸಾಲ ಪಡೆಯುತ್ತಿದ್ದಾರೆ, ಎಷ್ಟು ಸಾಲ ಕೇಳುತ್ತಿದ್ದಾರೆ, ಇದನ್ನೆಲ್ಲಾ ನೋಡಿ, ಅವರಿಗೆ ತಾಂತ್ರಿಕ ಸಲಹೆಗಳನ್ನು ನೀಡಿ, ಅವರು ಇದರಲ್ಲಿ ಅಭಿವೃದ್ಧಿ ಹೊಂದಿ, ಪಡೆದುಕೊಂಡ ಸಾಲವನ್ನು ಮರಳಿ ಕೊಡಲು ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ, ನನಗೆ ತಿಳಿದಹಾಗೆ ರಿಸರ್ವ ಬ್ಯಾಂಕ್‌ನವರು ಬ್ಯಾಂಕುಗಳಲ್ಲಿ ಈ ಒಂದು ತಾಂತ್ರಿಕ ಸೆಲ್‌ನ್ನು ಇಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಇನ್ನು ಮುಂದಾದರೂ ಸರಕಾರ ಬ್ಯಾಂಕುಗಳಲ್ಲಿ ಈ ಒಂದು ತಾಂತ್ರಿಕ ಸೆಲ್‌ನ್ನು ಪ್ರಾರಂಭಿಸಿದರೆ, ಬಹಳ ಉತ್ತಮವಾಗುತ್ತದೆ, ಹಾಗೂ ಈ ಉದ್ಯಮದ ಅಭಿವೃದ್ಧಿ ಆಗುತ್ತದೆ ಎಂದು ತಮ್ಮ ಮುಖಾಂತರ ಸರಕಾರದ ಗಮನಕ್ಕೆ ತಂದು ಈ ೨೦ ಅಂಶಗಳ ಕಾರ್ಯಕ್ರಮಕ್ಕಿಂತ ಮುಂಚೆ ನೇಕಾರರು ಬಹಳ ಹೀನಾಯಮಾನವಾದ ಸ್ಥಿತಿಯಲ್ಲಿದ್ದರು, ಈ ಕೈಮಗ್ಗದ ಬಗ್ಗೆ ಮಾತನಾಡುವಾಗ ದಿವಂಗತರಾಗಿರುವ ಶ್ರೀಮತಿ ಇಂದಿರಾಗಾಂಧಿಯವರ ೨೦ ಅಂಶಗಳ ಕಾರ್ಯಕ್ರಮವನ್ನು ನೆನೆಯಲೇ ಬೇಕು, ಈ ೨೦ ಅಂಶಗಳ ಕಾರ್ಯಕ್ರಮದಲ್ಲಿ ರಿಬೇಟ್ ವ್ಯವಸ್ಥೆಯನ್ನು ತರದೇ ಹೋಗಿದ್ದರೆ ಇವತ್ತು ಎಷ್ಟೋ ಸಹಕಾರ ಸಂಘಗಳು ದಿವಾಳಿ ಎದ್ದು, ಹರಾಜು ಮಾಡುವ ಪರಿಸ್ಥಿತಿಯಲ್ಲಿ ಇರುತ್ತಿದ್ದವು. ಇದು ಈ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವವರಿಗೆ, ಜೀವನ ನಡೆಸುತ್ತಿರುವವರಿಗೆ ತಿಳಿದೇ ಇದೆ. ಸರಕಾರ ಈ ಕೈಮಗ್ಗದ ಉದ್ದಿಮೆಗೆ ಸಹಾಯ ಮಾಡಬೇಕು. ರಾಜ್ಯದಲ್ಲಿ ರೈತರಿಗೆ ೩೫ ಕೋಟಿ ರೂಪಾಯಿಗಳಷ್ಟು ಸಾಲದ ಮೇಲಿನ ಬಡ್ಡಿಯನ್ನು ಸರಕಾರ ಮನ್ನಾ ಮಾಡಿದೆ. ಇದು ಕ್ರಾಂತಿಕಾರಕವಾದ ಹೆಜ್ಜೆ. ಇದಕ್ಕಾಗಿ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಎಲ್ಲ ರೈತ ಸಮುದಾಯದ ಪರವಾಗಿ ನಾನು ಸರಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅದೇ ರೀತಿಯಾಗಿ ೫೦ ಲಕ್ಷ ರೂಪಾಯಿಗಳು ಈ ಪವರ್ ಲೂಮ್‌ಗಳ ಮೇಲಿನ ಬಡ್ಡಿ ಏನಿದೆ ಅದನ್ನೂ ಮನ್ನಾ ಮಾಡಬೇಕೆಂದು ಹೇಳುತ್ತೇನೆ. ಪವರ್‌ಲೂಮ್‌ಗಳನ್ನು ಶ್ರೀಮಂತರು ಹೆಚ್ಚಾಗಿ ಹೊಂದಿರಬಹುದು. ಆದರೆ ಈ ೨–೩–೫ ಪವರ್ ಲೂಮ್‌ಗಳನ್ನು ಹೊಂದಿರತಕ್ಕಂಥವರು ಜಾಸ್ತಿ ಇದ್ದು, ಇವರ ಸಾಲದ ಮೇಲಿನ ಬಡ್ಡಿ ೫೦ ಲಕ್ಷ ರೂಪಾಯಿಗಳಾಗಿದೆ ೩೫ ಕೋಟಿ ರೂಪಾಯಿಗಳ ಸಾಲದ ಮೇಲಿನ ಬಡ್ಡಿಯನ್ನು ಸೂಟು ಮಾಡಿ ರೈತರಿಗೆ ವರದಾನವಾಗಿರುವ ಕಾರ್ಯಕ್ರಮ ಏನು ಹಾಕಿಕೊಂಡಿರಿ, ಅವರ ಪ್ರೀತಿಪಾತ್ರರಾಗಿ ಯಾವ ರೀತಿ ನಡೆದುಕೊಂಡಿರಿ, ಅದೇ ರೀತಿ ಕೇವಲ ೫೦ ಲಕ್ಷ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡಿದರೆ, ಈ ಒಂದು ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ, ನೇಕಾರರಿಗೆ ಅನುಕೂಲವಾಗಿ ಅವರೂ ಕೂಡಾ ತಮ್ಮನ್ನು ನೆನೆಸಿಕೊಳ್ಳಬಹುದು ಎಂದು ಹೇಳುತ್ತೇನೆ. ಸಾರ್ವಜನಿಕ ಆರೋಗ್ಯಕರವಾದ ಹಿತದೃಷ್ಟಿಯಿಂದ ಇದು ಇರುವುದರಿಂದ, ಇದನ್ನು ಸರಕಾರ ಗಮನಕ್ಕೆ ತರಬಯಸುತ್ತೇನೆ. ಇನ್ನು ತಾವು ಲೀವಿಂಗ್ ಕಮ್ ವರ್ಕ್‌ಷೆಡ್ ಕಟ್ಟುತ್ತಿದ್ದೀರಿ. ಈ ದಿಸೆಯಲ್ಲಿ ಸಾಕಷ್ಟು ನೆರವನ್ನು ಸಹಕಾರ ಸಂಘಗಳ ಮುಖಾಂತರ ಮಂಜೂರು ಮಾಡಬೇಕೆಂದು ಕೇಳಿಕೊಂಡು, ಕೆಲವುಕಡೆ, ಡಚ್ ಸ್ಕೀಮ್ ಪ್ರಕಾರ ಕಾರ್ಪೊರೇಷನ್ ಮೂಲಕ ಕೆಲವೊಂದು ಮನೆಗಳನ್ನು, ಅಂದರೆ ಲೀವಿಂಗ್ ಕಮ್ ವರ್ಕ್‌ಷೆಡ್‌ಗಳನ್ನು ಕಾರ್ಮಿಕರಿಗಾಗಿ ಕಟ್ಟುತ್ತಿ

ದ್ದೀರಿ. ಈ ರೀತಿಯ ಮನೆಗಳನ್ನು ನಾನು ಕೆಲವುಕಡೆ ಪರಿಶೀಲಿಸಿ ನೋಡಿದಾಗ, ವಿಜಾಪುರ ಜಿಲ್ಲೆಯಲ್ಲಿ ಇರತಕ್ಕಂಥ, ಕುಣಿ ಮಗ್ಗಗಳು ಅಂದರೆ ಪಿಟ್ ಲೂಮ್ಸ್‌ಗಳನ್ನು ಅಳವಡಿಸಲು ಅನುಕೂಲಕರವಾದಂಥ ನಕ್ಷೆಗಳು ಇಲ್ಲ. ನಾನು ಹಿಂದೆ ಇದಕ್ಕೆ ಸಂಬಂಧಿಸಿದಂಥ ಅಧ್ಯಕ್ಷರಿಗೆ ಹಾಗೂ ಡೈರೆಕ್ಟರ್‌ರವರಿಗೆ ಹೋಗಿ ಹೇಳಿದ್ದೆ, ಇನ್ನು ಮುಂದಾದರೂ ಸಹ ಈ ಮನೆಗಳ ನಕ್ಷೆಯನ್ನು ಬದಲಾವಣೆ ಮಾಡಬೇಕು. ಎಷ್ಟೋ ಮನೆಗಳು ಈಗ ತಯಾರಾಗಿದ್ದರೂ ಕೂಡಾ ನೇಕಾರರು ಅಲ್ಲಿ ಹೋಗಿ ಇರಲಿಕ್ಕೆ ತಯಾರಾಗಿಲ್ಲ. ಏಕೆಂದರೆ ನೇಕಾರ ಮೊದಲಿನಿಂದ ತಾನು ಏನು ಒಂದು ತಾಂತ್ರಿಕ ನೀತಿಯನ್ನು ಸಾಂಪ್ರದಾಯಿಕ ಆಧಾರದ ಮೇಲೆ ಮಾಡಿಕೊಂಡು ಬಂದಿದ್ದಾನೆ. ಅವನು ಈ ಮನೆಗಳಿಗೆ ಹೋಗಿ ಅಲ್ಲಿ ಅವನ ಮಗ್ಗಗಳನ್ನು ಹಾಕಿಕೊಂಡಿರಲು ಸಾಧ್ಯವಿಲ್ಲ, ಆದುದರಿಂದ ತಾಂತ್ರಿಕವಾಗಿ ಎಲ್ಲಿ ದೋಷ ಇದೆ ಎಂಬುದನ್ನು ನೋಡಿ, ದಯವಿಟ್ಟು ಆ ನಕ್ಷೆಯನ್ನು ಸ್ವಲ್ಪ ಬದಲಾವಣೆ ಮಾಡಿ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ನೇಕಾರರು ತಮ್ಮ ಪಿಟ್ ಲೂಮ್‌ಗಳನ್ನು ಅಂದರೆ ಕುಣಿ ಮಗ್ಗಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುವಂತೆ, ನಕ್ಷೆಯನ್ನು ಎರಡು ಫೂಟ್ ಬದಲಾಯಿಸಿ ಬಿಟ್ಟರೆ ಈ ಒಂದು ಯೋಜನೆ ಏನಿದೆ ಇದು ಉಪಯುಕ್ತ ಆಗಬಹುದು ಎಂಬುದನ್ನು ತಮ್ಮ ಮುಂದೆ ಇಡುತ್ತೇನೆ. ಇನ್ನು ೧೯೮೬-೮೭ರ ಹೊತ್ತಿಗೆ ಈ ಡಚ್ ಮಾದರಿ ಮನೆಗಳನ್ನು ಪೂರ್ತಿ ಮುಗಿಸುವುದಾಗಿ ಪ್ರಕಟಣೆ ಮಾಡಿದ್ದೀರಿ. ಆದರೆ ಕೆಲವು ಕಡೆಗಳಲ್ಲಿ ಜಮೀನನ್ನು ಪಡೆಯುವ ಕಾರ್ಯ ಕೂಡಾ ಮುಗಿದಿಲ್ಲ. ಈ ಜಮೀನನ್ನು ಪಡೆಯುವ ಕಾರ್ಯ ಕೂಡಾ ಮುಗಿಯದಿರುವುದರಿಂದ ೧೯೮೬-೮೭ರ ಹೊತ್ತಿಗೆ ಈ ಸ್ಕೀಮನ್ನು ಮುಗಿಸುವುದಾದರೂ ಹೇಗೆ ಎಂಬುದನ್ನು ದಯವಿಟ್ಟು ಯೋಚನೆ ಮಾಡಿ. ನನ್ನ ಕ್ಷೇತ್ರದಲ್ಲೇ ಬರತಕ್ಕಂಥ ಅಮೀನಗಡ ಗ್ರಾಮದಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ೪ (೧), ೬ (೧) ನೋಟಿಫಿಕೇಷನ್‌ಗಳು ಆದರೂ ಕೂಡಾ ಲ್ಯಾಂಡ್ ಅಕ್ವೈರ್ ಆಗುತ್ತಿಲ್ಲ. ಇದರಲ್ಲಿ ನನಗೆ ಬಂದಿರತಕ್ಕಂಥ ಸಂಶಯ ಎಂದರೆ, ನಾನು ಯಾರ ಮೇಲೂ ಆಪಾದನೆ ಮಾಡುತ್ತಿಲ್ಲ, ಪ್ರಾಮಾಣಿಕವಾಗಿ ನಾನು ಗಮನಕ್ಕೆ ತರುವುದು ಏನೆಂದರೆ, ಈ ಹಣವನ್ನು ಸಹಕಾರ ಸಂಘಗಳವರು, ಸಂಸ್ಥೆಯವರು ಏನಾದರೂ ಕಬಳಿಸುತ್ತಿದ್ದಾರೆಯೋ ಎಂಬುದನ್ನು ಜನತಾಪ್ರತಿನಿಧಿಯಾಗಿ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಮೀನಗಡ ಪಟ್ಟಣಕ್ಕೆ ಇಂತಹ ೫೦ ಮನೆಗಳನ್ನು ಡಚ್ ನೆರವಿನಿಂದ ಮಂಜೂರಾಗಿದ್ದರೂ ಕೂಡಾ ಜಾಗದ ಸಲುವಾಗಿ ಇನ್ನೂ ಆಗಿಲ್ಲ. ಇದರಲ್ಲಿ ಯಾವುದೇ ಒಂದು ಪ್ರಭಾವ ಇದೆ ಎಂಬ ಸಂಶಯವನ್ನು ವ್ಯಕ್ತಪಡಿಸುತ್ತೇನೆ. ೪(೧) ನೋಟಿಫಿಕೇಷನ್ ಮಾಡುವಾಗ ೪ ಎಕರೆ, ೬ ಎಕರೆ ಅಕ್ವೈರ್ ಮಾಡುವ ಯೋಜನೆ ಹಾಕುತ್ತಾರೆ. ಶ್ರೀಮಂತ ವರ್ಗದಜನರು ಆ ಜಮೀನನ್ನು ಹೊಡೆದುಕೊಳ್ಳುವ ಪ್ರಯತ್ನ ಮಾಡುವ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ಕೆಲವೊಂದು ಅಧಿಕಾರಿಗಳು ಶಾಮೀಲಾಗಿರಬಹುದು ಎಂದು ಸಂಶಯಪಡುತ್ತಿದ್ದೇನೆಯೇ, ಹೊರತು ಆರೋಪ ಮಾಡುವ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ಕೆಲವೊಂದು ಅಧಿಕಾರಿಗಳು ಶಾಮೀಲಾಗಿರಬಹುದು ಎಂದು ಸಂಶಯಪಡುತ್ತಿದ್ದೇನೆಯೇ ಹೊರತು ಆರೋಪ ಮಾಡುತ್ತಿಲ್ಲ. ಅಲ್ಲಿ ಮಂಜೂರಾಗಿರತಕ್ಕಂಥ ನೂರಾರು ಮನೆಗಳಿಗೆ ಜಮೀನನ್ನು ವಶಪಡಿಸಿಕೊಂಡು ನೇಕಾರರ ನೂರಾರು ಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾಮಾಣಿಕವಾದ ಸಲಹೆಯನ್ನು ಕೊಡುತ್ತೇನೆ. ಇನ್ನೊಂದು ಮುಖ್ಯವಾದ ಅಂಶ ಎಂದರೆ ಇವತ್ತು ಕೈಮಗ್ಗದ ಅಭಿವೃದ್ಧಿಯನ್ನು ಇಂಡಸ್ಟ್ರೀಸ್ ಖಾತೆಯ ಜೊತೆ ಹೊಂದಿಸಿಕೊಂಡು ಹೋಗುವುದರಿಂದ ಪ್ರಾಮಾಣಿಕವಾಗಿ ಈ ಉದ್ದಿಮೆ ಅಭಿವೃದ್ಧಿ ಆಗುತ್ತದೆಯೋ ಎಂದು ನನ್ನ ಅನಿಸಿಕೆ. ಹಾಗಾದರೆ ಇದಕ್ಕೆ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ಮಾಡಿದರೆ ಬಹಳ ಹೆಚ್ಚಿನ ಬೆಳವಣಿಗೆಗೆ ಅನುಕೂಲವಾಗಬಹುದು ಎಂಬುದು ಒಂದು ಸಲಹೆ ಇಷ್ಟು ಮಾಡಿದರೆ ಈ ಉದ್ಯಮ ಇನ್ನೂ ಬೆಳೆದು ಬರುತ್ತದೆ ಎಂದು ಹೇಳುತ್ತೇನೆ,

ಸ್ವಾಮಿ ಇವತ್ತು ನಮ್ಮ ಕೈಗಾರಿಕೆಗಳು ನಷ್ಟದಲ್ಲಿ ನಡೆಯುತ್ತಿವೆ. ಸರ್ಕಾರದವರು ಈ ಕೈಗಾರಿಕೆಗಳಿಗೆ ಒಬ್ಬ ಡೈರೆಕ್ಟರ್‌ನ್ನು ನೇಮಕ ಮಾಡಿದ್ದಾರೆ. ಅವರು ಈ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ನೋಡಿಕೊಳ್ಳಬೇಕಾಗುತ್ತದೆ. ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಇನ್ನು ಅದೇ ರೀತಿಯಲ್ಲಿ ಹ್ಯಾಂಡ್‌ಲ್ಯೂಮ್ ಡೆವಲಪ್ಮೆಂಟ್ ಬಗ್ಗೆ ಪ್ರಸ್ತಾಪ ಮಾಡುವುದಾದರೆ ತಾವು ಒಬ್ಬ ಡೈರೆಕ್ಟರನ್ನು ನೇಮಿಸಿ, ಆ ಒಂದು ಸ್ಥಾನಕ್ಕೆ ತಮ್ಮ ಐ.ಎ.ಎಸ್. ಅಧಿಕಾರಿಗಳನ್ನು ಹಾಕದೆ ಯಾರು ಈ ನೇಕಾರ

ಕೆಲಸದಲ್ಲಿ ಹೆಚ್ಚಿನ ಪರಿಣತೆಯನ್ನು ಹೊಂದಿರುತ್ತಾರೋ ಸಾಕಷ್ಟು ನೇಕಾರರ ಕಷ್ಟಸುಖಗಳನ್ನು ತಿಳಿದು ಕೊಂಡಿರುತ್ತಾರೋ ಅಂತಹವರನ್ನು ತಾವು ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್‌ಗೆ ಡೈರೆಕ್ಟರ್ ಆಗಿ ನೇಮಕ ಮಾಡಿದರೆ ಒಳ್ಳೆಯದು. ತಮಗೆ ಅಂತಹ ವ್ಯಕ್ತಿಗಳು ಸಿಗುತ್ತಾರೆ. ಆ ಒಂದು ಕೆಲಸವನ್ನು ಕೂಡ ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೊನೆಯದಾಗಿ ಖಾದಿ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ, ಈ ದೇಶದಲ್ಲಿ ಖಾದಿ ಬಹಳ ಮುಖ್ಯವಾದುದು. ಅದೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ಸಾಕಷ್ಟು ಖಾದಿ ಬೋರ್ಡುಗಳಿವೆ ಈ ಖಾದಿ ಬೋರ್ಡ್‌ಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಇದುವರೆವಿಗೂ ಯಾವ ಸರ್ಕಾರದವರೂ ಕೂಡ ಮಾಡಿಕೊಟ್ಟಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಖಾದಿ ಉತ್ಪಾದನೆಯಾಗುತ್ತದೆ. ಆದರೆ ಉತ್ಪಾದನೆಯಾದಂತಹ ಖಾದಿಯನ್ನು ಮಾರಾಟ ಮಾಡುವಂತಹ ಸೌಲಭ್ಯಗಳು ಇಲ್ಲ. ಇದರಿಂದ ನಮ್ಮ ರಾಜ್ಯದಲ್ಲಿ ಖಾದಿ ನಶಿಸಿ ಹೋಗುವಂತಹ ಸಂದರ್ಭ ಇದೆ. ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಖಾದಿ ಕೈಗಾರಿಕೆಗಳನ್ನು ಬೆಳೆಸಬೇಕು. ತಾವು ಕರ್ನಾಟಕ ರಾಜ್ಯದಲ್ಲಿ ಖಾದಿಗೆ ಹೆಚ್ಚು ಮಹತ್ವವನ್ನು ಕೊಡದಿದ್ದರೆ ತಮಿಳುನಾಡಿನಲ್ಲಿ ಆದಂತಹ ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಆಗುತ್ತದೆ ಎನ್ನುವ ಒಂದು ಎಚ್ಚರಿಕೆಯ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಸ್ವಾಮಿ ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಸರ್ಕಾರಿ ಸಂಸ್ಥೆಗಳು ಇವೆ. ಆ ಎಲ್ಲಾ ಸಂಸ್ಥೆಗಳಿಗೆ ಬೇಕಾಗುವಂತಹ ಬಟ್ಟೆಗಳನ್ನು ೫೦ ಪರ್ಸೆಂಟ್ ಖಾದಿ ಬಟ್ಟೆ ಯನ್ನು ಸರ್ಕಾರದವರು ಕೊಂಡುಕೊಳ್ಳಬೇಕು. ಸರ್ಕಾರೀ ಆಸ್ಪತ್ರೆಗಳಿಗೆ ಬೇಕಾಗುವಂತಹ ಟವಲ್ ಬೆಡಶೀಟ್ಸ್ ಇತ್ಯಾದಿಗಳನ್ನು ಕೂಡ ಸರ್ಕಾರದವರು ಖಾದಿ ಬಟ್ಟೆಯನ್ನು ಕೊಂಡುಕೊಂಡರೆ ಖಾದಿ ಬೋರ್ಡ್‌ಗೆ ಕೋಟ್ಯಾಂತರ ರೂಪಾಯಿಗಳ ವರಮಾನ ಬರುತ್ತದೆ. ಸುಮಾರು ೮೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ತಾವು ಸ್ಪಿನ್ನಿಂಗ್ ಮಿಲ್‌ನಲ್ಲಿ ಕೇವಲ ೨೦೦ ಜನರಿಗೆ ಮಾತ್ರ ಉದ್ಯೋಗವನ್ನು ಒದಗಿಸಿಕೊಟ್ಟಿದ್ದೀರಿ. ಆದರೂ ಕೂಡ ಆ ಸ್ಪಿನ್ನಿಂಗ್ ಮಿಲ್ ಇವತ್ತು ನಷ್ಟದಲ್ಲಿ ನಡೆಯುತ್ತಿದೆ. ಆದ್ದರಿಂದ ಇವತ್ತು ತಾವು ಖಾದಿಯನ್ನು ಕರ್ನಾಟಕ ರಾಜ್ಯದಲ್ಲಿ ಉಳಿಸಬೇಕಾದರೆ ಪ್ರತಿಯೊಂದು ಸರ್ಕಾರಿ ಆಸ್ಪತ್ರೆಗಳಿಗೆ ಖಾದಿ ಬಟ್ಟೆಯನ್ನು ಕೊಂಡುಕೊಳ್ಳಬೇಕಾಗುತ್ತದೆ. ಗ್ರಾಮ ಕೈಗಾರಿಕೆಗಳಲ್ಲಿ ಸ್ವರಾಜ್ಯವನ್ನು ಕಾಣಬಹುದೆಂದು ಮಹಾತ್ಮಾಗಾಂಧೀಜಿಯವರು ಏನು ಒಂದು ಕನಸು ಕಾಣುತ್ತಿದ್ದರು ಅದನ್ನು ಇವತ್ತು ತಾವು ನನಸು ಮಾಡಬೇಕಾಗಿದೆ. ಸರ್ಕಾರದವರು ಖಾದಿ ಬಟ್ಟೆಗೆ ವಿಶೇಷವಾಗಿ ೪೦ ಪರ್ಸೆಂಟ್ ರಿಬೇಟ್ ಕೊಟ್ಟಿದ್ದಾರೆ ಇದಕ್ಕೆ ನಾನು ತಮಗೆ ನನ್ನ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತೇನೆ. ತಾವು ರಿಬೇಟ್ ಘೋಷಣೆ ಮಾಡಿದ ಮೇಲೆ ಸಾಕಷ್ಟು ಖಾದಿ ಬಟ್ಟೆ ಖರ್ಚಾಗಿ ಹೋಗಿದೆ. ಆ ರಿಬೇಟ್ ಹಣ ಸುಮಾರು ೫೪ ಲಕ್ಷ ರೂಪಾಯಿಗಳಾಗಿದೆ. ಆ ಹಣವನ್ನು ತಾವು ಕೂಡಲೆ ಖಾದಿ ಬೋರ್ಡಿಗೆ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಈ ಖಾದಿ ಮಂಡಲಿಯಿಂದ ಕೊಟ್ಟಂತಹ ಸಾಲದ ಮರುಪಾವತಿಯನ್ನು ಮಾಡಲು ತಾವು ತಾಲ್ಲೂಕಿನ ತಹಶೀಲ್ದಾರ್‌ರವರಿಗೆ ಒಪ್ಪಿಸಿದ್ದೀರಿ. ಇವತ್ತು ಒಂದು ತಾಲ್ಲೂಕಿನಲ್ಲಿ ಸುಮಾರು ೧೦೦-೧೨೦ ಹಳ್ಳಿಗಳು ಬರುತ್ತವೆ. ಆ ತಾಲ್ಲೂಕಿನ ತಹಶೀಲ್ದಾರ್ ದಿನದ ೨೪ ಗಂಟೆಗಳ ಕಾಲ ಕೆಲಸ ಮಾಡಿದರೂ ಕೂಡ ಕೆಲಸವಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ತಹಶೀಲ್ದಾರ್‌ರವರು ಯಾವ ರೀತಿಯಲ್ಲಿ ಖಾದಿ ಮಂಡಲಿಯ ಸಾಲ ವಸೂಲು ಮಾಡಲು ಸಾಧ್ಯವಾಗುತ್ತದೆ? ತಹಶೀಲ್ದಾರ್‌ರವರು ಯಾವ ರೀತಿ ಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ? ಸುಮಾರು ಎರಡು ಮೂರು ವರ್ಷ ಗಳಿಂದ ಖಾದಿ ಬೋರ್ಡಿಗೆ ಬರಬೇಕಾಗಿರುವಂತಹ ಸಾಲದ ಮರುಪಾವತಿಗಾಗಿ ಜನರ ಜಮೀನುಗಳನ್ನು, ಜನರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಈಗಿನ ಖಾದಿ ಮಂಡಲಿಯ ಅಧ್ಯಕ್ಷರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಖಾದಿ ಮಂಡಲಿಗೆ ಜಿಲ್ಲಾ ಅಧ್ಯಕ್ಷರನ್ನು ನೇಮಕ ಮಾಡುವಾಗ ಖಾದಿ ಬಗ್ಗೆ ಯಾರಿಗೆ ಹೆಚ್ಚು ಅನುಭವ ಇರುತ್ತದೆಯೋ, ಖಾದಿ ಬಗ್ಗೆ ಯಾರಿಗೆ ಅನುಭವ ಇದ್ದು ಉತ್ಸಾಹ ವಿರುತ್ತದೆಯೋ ಅಂತಹವರನ್ನು ಖಾದಿ ಮಂಡಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಅದು ಬಿಟ್ಟು ಯಾವುದೇ ರಾಜಕೀಯ ಒತ್ತಡಗಳಿಗೆ ಮಣಿಯಬಾರದೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸಣ್ಣ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಬೇಕು. ಇದರ ಜೊತೆಗೆ ಮಾನ್ಯ ಸದಸ್ಯರಾದ ಶ್ರೀಮಾನ್ ನಾರಾಯಣಕುಮಾರ್‌ರವರು

ಹೇಳಿದಂತೆ ಪ್ರತಿಯೊಂದು ಸಣ್ಣ ಕೈಗಾರಿಕೆಯಲ್ಲಿ ಕನ್ನಡಗರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಬೇಕು. ಅವರು ಮಾಡಿದಂತಹ ಪ್ರತಿಪಾದನೆಗೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ. ತಾವು ಯಾವುದೇ ಕೆಲಸವನ್ನು ಮಾಡಿದರೂ ಕೂಡ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಬುರೆಡ್ಡಿ ತುಂಗಾಳ್ (ಬಿಳಗಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ಈ ಸದನದಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನನಗೆ ತಿಳಿದ ಕೆಲವಾರು ವಿಷಯಗಳನ್ನು ಕೇವಲ ೨–೫ ನಿಮಿಷಗಳಲ್ಲಿ ಹೇಳಿ ಮುಕ್ತಾಯ ಮಾಡಲು ಪ್ರಾರಂಭ ಮಾಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೫೬ ಸಾವಿರ ಸಣ್ಣ ಕೈಗಾರಿಕೆಗಳು ಇವೆ ಎಂದು ಮಾನ್ಯಮಂತ್ರಿಗಳು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈ ಕೈಗಾರಿಕೆಗಳಿಂದ ಸುಮಾರು ೫ ಲಕ್ಷ ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆಂದು ಕೂಡ ಅವರ ವರದಿಯಲ್ಲಿ ಇದೆ. ಮತ್ತು ೧೯೮೪ನೇ ಇಸವಿಯಲ್ಲಿ ಸುಮಾರು ೧೧,೬೦೬ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಸುಮಾರು ೫೫,೦೪೯ ಜನರಿಗೆ ಉದ್ಯೋಗವನ್ನು ಒದಗಿಸಿಕೊಡಲಾಗಿದೆ ಎಂದು ಸಹ ತಿಳಿಸಿದ್ದಾರೆ. ನಿಜವಾಗಿಯೂ ಕೂಡ ಇದು ಒಂದು ದಾಖಲೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಸರ್ಕಾರದವರು ಈ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಒಂದು ಸಿಂಗಲ್ ವಿಂಡೋ ಸ್ಕೀಮನ್ನು ಜಾರಿಗೆ ತರುತ್ತಿದ್ದಾರೆ. ಇದು ಕೂಡ ಒಂದು ಒಳ್ಳೆಯ ಕೆಲಸವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

೮–೩೦ ಪಿ. ಎಂ.

ಇವತ್ತು ಜಿಲ್ಲಾ ಕೈಗಾರಿಕಾ ಕೇಂದ್ರಗಳು ಮುಖ ನೋಡಿ ಮಣೆ ಹಾಕುವಂತಹ ಕೆಟ್ಟ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿವೆ ಈ ಪ್ರವೃತ್ತಿಯನ್ನು ಕೂಡಲೇ ನಿಲ್ಲಿಸಬೇಕು. ಇಲ್ಲದಿದ್ದರೆ ಇವುಗಳು ನಿಜವಾಗಿ ಬೆಳೆಯುವುದಿಲ್ಲ. ಯಾರೋ ದುಡ್ಡಿದ್ದವರ, ಸರ್ಟಿಫಿಕೇಟ್ ತಂದವರ ಅಥವಾ ಬಂಡವಾಳ ಶಾಹಿಗಳ ಮಕ್ಕಳಿಗಾಗಿ ಈ ಜಿಲ್ಲಾ ಕೇಂದ್ರಗಳಿರುವಂತೆ ಕಾಣುತ್ತದೆ. ಇದು ಹೋಗಬೇಕು. ಇದನ್ನು ಮಾನ್ಯ ಕೈಗಾರಿಕಾ ಮಂತ್ರಿಗಳು ಗಮನಕ್ಕೆ ತಂದುಕೊಳ್ಳಬೇಕು. ಇದರ ಬಗ್ಗೆ ವರದಿಯಲ್ಲಿ ಏನು ಹೇಳಲಾಗಿದೆ ಎಂದರೆ ಸುಮಾರು ಬಹಳಷ್ಟು ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು ನಷ್ಟವನ್ನು ಹೊಂದಿವೆ. ಇದು ಕಳವಳಕಾರಿಯಾದ ಅಂಶ. ಕೆಲವು ಪತ್ರಿಕಾ ವರದಿಗಳ ಪ್ರಕಾರ ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಏನು ದುರ್ವ್ಯವಹಾರ ನಡೆದಿದೆ ಹಾಗೂ ಕೋಟಿಗಟ್ಟಲೆ ಲುಕ್ಸಾನಾಗಿದೆ ಎಂಬುದರ ಬಗ್ಗೆ ಸರಿಯಾದ ವಾಸ್ತವಾಂಶವನ್ನು ಜನರಿಗೆ ತಿಳಿಸುವುದು ಅವಶ್ಯಕ.

ಇನ್ನು ಕಿಂಕೋ ಬಗ್ಗೆ ಒಂದು ಸುದ್ದಿ ಬಂದಿದೆ. ಅದರ ಬಗ್ಗೆ ನಾನು ಮಾತನಾಡುತ್ತೇನೆ. ಅಲ್ಲಿಯ ಸಾವಿರಾರು ಜನ ಕಾರ್ಮಿಕರು ಸಾಮೂಹಿಕವಾಗಿ ಬಹಿಷ್ಕರ ಮಾಡಿ ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದಾರೆ. ಇದನ್ನು ಸರ್ಕಾರಿ ಸ್ವಾಮ್ಯದ ಕೆ ಎಸ್ ಆರ್ ಟಿ ಸಿ ಯಲ್ಲಿ ವಿಲೀನ ಮಾಡಬೇಕೆಂಬ ಬಗ್ಗೆ ವಿಚಾರ ಇದೆ. ಇದನ್ನು ಕೆ ಎಸ್ ಆರ್ ಟಿ ಸಿ ಯಲ್ಲಿ ವಿಲೀನ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಮಾನ್ಯ ಜೆ. ಹೆಚ್. ಪಟೇಲರು ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಈ ಕಿಂಕೋದಲ್ಲಿ ಏನು ನಷ್ಟವಾಗಿದೆ ಇದಕ್ಕೆ ಕಾರಣರು ಯಾರು ಹಾಗೂ ಉದ್ದೇಶಪೂರ್ವಕವಾಗಿ ನಷ್ಟವನ್ನು ಉಂಟು ಮಾಡಿರುವ ಆಡಳಿತ ವರ್ಗದವರು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು.

ಇನ್ನು ಪತ್ರಿಕಾ ವರದಿ ಪ್ರಕಾರ ಲಿಡ್ಕರ್‌ನಲ್ಲಿ ಲಕ್ಷಾಂತರ ರೂಪಾಯಿಗಳ ಚರ್ಮವನ್ನು ಸುಟ್ಟುಹಾಕಲಾಗಿದೆ ಎಂದು ಹೇಳಲಾಗಿದೆ. ಆದರೆ ಇಷ್ಟು ಬೆಲೆಬಾಳುವಂಥ ಚರ್ಮ ಸುಡುತ್ತಿದ್ದರೂ ವಾಸನೆ ಬರಲಿಲ್ಲ ಎಂದರೆ ಇದರಲ್ಲಿ ಏನೋ ಮೋಸ ಇರಬಹುದು. ಲಿಡ್ಕರ್ ಸಂಸ್ಥೆಯಲ್ಲಿ ಕೋಟಿಗಟ್ಟಲೆ ರೂ. ಗಳ ದುರುಪಯೋಗವಾಗಿರಬೇಕು ಹಾಗೇ ಅವರಲ್ಲಿ ಏನೋ ಮೋಸ ನಡೆದಿರಬೇಕು. ಇದು ಬಯಲಿಗೆ ಬರಕೂಡದೆಂದು ಈ ರೀತಿ ಮಾಡಿದ್ದಾರೆ.

ಇವತ್ತು ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಕಾರ್ಖಾನೆಗೆ ಒಂದು ಐತಿಹಾಸಿಕ ಇತಿಹಾಸ ಇದೆ. ಇದು ತಯಾರಿಸಿದ ಸ್ಯಾಂಡಲ್ ಸೋಪ್ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತು. ಇದನ್ನು ಉಪಯೋಗಿಸಿದರೇ ಒಂದು ರೀತಿಯ ಸಂತೋಷವಾಗುತ್ತಿತ್ತು. ಆದರೆ ಅಲ್ಲಿ ಏನು ದುರಂತ ನಡೆದಿದೆ ಎಂದರೆ ಕೋಟಿಗಟ್ಟಲೆ ರೂ. ನಷ್ಟವಾಗಿದೆ. ಇದಕ್ಕೆ ಕಾರಣರು ಯಾರು ? ಹಿಂದೆ ಹೆಚ್. ಎಂ. ಟಿ. ಯಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಎಸ್. ಎಂ. ಪಾಟೀಲರನ್ನು ಈಗ ಈ ಕಾರ್ಖಾನೆಗೆ ಹಾಕಲಾಗಿದೆ ಎಂದು ಸುದ್ದಿ ನನಗೆ ಬಂದಿದೆ. ಇದು ನಿಜವಾಗಿದ್ದರೆ ನಾನು ಬಹಳ ಸಂತೋಷಪಡುತ್ತೇನೆ ಹಾಗೂ ಪಾಟೀಲರನ್ನು ಅಭಿನಂದಿಸುತ್ತೇನೆ. ಏಕೆಂದರೆ ಎಸ್. ಎಂ. ಪಾಟೀಲರು ಒಬ್ಬ ದಕ್ಷ ಹಾಗೂ ನಿಪುಣ ಅಧಿಕಾರಿ. ಅವರು ಬಂದ ವೇಲೆ ಈ ಸೋಪ್ ಫ್ಯಾಕ್ಟರಿಯ ಒಂದು ಕಳಂಕ ತೊಳೆದು ಹೋಗುತ್ತದೆ ಎಂಬ ವಿಚಾರವನ್ನು ವಿಶ್ವಾಸದಿಂದ ವ್ಯಕ್ತಪಡಿಸುತ್ತೇನೆ.

ಇನ್ನು ಭದ್ರಾವತಿ ಸರ್ಕಾರಿ ಸ್ವಾಮ್ಯದ ಉಕ್ಕಿನ ಕಾರ್ಖಾನೆಯನ್ನು ಟಾಟಾ ಬಾಟಕ್ಕೆ ಕೊಡ ತಕ್ಕಂಥ ವದಂತಿ ಬಂದಿದೆ. ಯಾವುದೇ ಸಂದರ್ಭದಲ್ಲಿ ನಮ್ಮ ಸರ್ಕಾರದ ಸಾರ್ವಜನಿಕ ಉದ್ದಿಮೆಗಳನ್ನು ಕಾರ್ಮಿಕರಿಗೆ ಶೋಷಣೆ ಮಾಡುವಂಥ ಜನರಿಗೆ ಕೊಡಕೂಡದು. ಇವರೆಲ್ಲರೂ ಒಂದು ಕಡೆ ಸರ್ಕಾರಕ್ಕೆ ಟೋಪಿ ಹಾಕುವಂಥ ಕೆಲಸವನ್ನು ಮಾಡುತ್ತಾರೆ. ಇದನ್ನು ಸರ್ಕಾರ ಗಮನಿಸಬೇಕು. ಯಾವುದೇ ಪ್ರಸಂಗದಲ್ಲೂ ಕೂಡ ಖಾಸಗಿಯವರಿಗೆ ಈ ಉದ್ದಿಮೆಗಳನ್ನು ಒಪ್ಪಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು.

ಖಾದಿ ಗ್ರಾಮೋದ್ಯೋಗದ ಬಗ್ಗೆ ಮಹಾತ್ಮ ಗಾಂಧಿಯವರು ಏನು ಹಿಂದಿಯಲ್ಲಿ ಹೇಳಿದರು ಅದರ ಸಾರಾಂಶವನ್ನು ನಿಮ್ಮ ಜ್ಞಾಪಕಕ್ಕೆ ತರುತ್ತೇನೆ. ಅಂದರೆ ಖಾದಿ ಸ್ವರ್ಗಕ್ಕೆ ಹಾದಿ ಎಂದು ಹರ್ಡೇಕರ್ ಮಂಜಪ್ಪನವರೇ ಹೇಳಿದರು. ಇವತ್ತು ಯಾರಿಗೆ ಬೇಕಾಗಿದೆ ಹೇಳಿ ? ಅಲ್ಲಿರತಕ್ಕಂಥ ನೌಕರರು ಸತ್ಯಾಗ್ರಹ ನಡೆಸಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಗೊತ್ತಿರಬೇಕು. ಇನ್ನು ೫೯ ಲಕ್ಷ ರೂ. ರಿಬೇಟ್ ಹಣ ಸರ್ಕಾರದಿಂದ ಖಾದಿ ಮಂಡಲಿಗೆ ಬಾಕಿ ಇದೆಯೆಂದು ಶ್ರೀ ನಂಜಯ್ಯನಮಠ್ ಹೇಳಿದರು. ಅದನ್ನು ನಾನು ಸಮರ್ಥಿಸುತ್ತೇನೆ. ಆದರೂ ಕೂಡ ಕೋಟ್ಯಾಂತರ ರೂ. ಗಳೂ ಅಲ್ಲಿಯ ಖಾದಿ ಮಂಡಲಿಯ ನೌಕರರಿಗೆ ಹೋಗಬೇಕು, ಅಲ್ಲಿರತಕ್ಕಂತಹ ಹೆಗ್ಗಣಗಳಿಗಲ್ಲ. ಖಾದಿ ಗ್ರಾಮೋದ್ಯೋಗ ದಿಂದ ವರದಿಯನ್ನು ತರಿಸಿನೋಡಿ. ಅಲ್ಲಿಯ ಅಧ್ಯಕ್ಷರು ಗಾಂಧೀವಾದವನ್ನು ಮಾತನಾಡುತ್ತಾರೆ. ಆದರೆ ಹೊರಗಡೆ ತಮ್ಮ ಪ್ರವಾಸಕ್ಕಾಗಿ ಎಷ್ಟು ಲಕ್ಷ ಹಣವನ್ನು ಖರ್ಚು ಮಾಡಿದ್ದಾರೆಂಬುದನ್ನು ತಾವು ಗಮನಿಸಬೇಕು. ಖಾದಿಯ ಒಬ್ಬ ಅಧ್ಯಕ್ಷರೇ ಕೋಟಿಗಟ್ಟಲೆ ರೂ ಗಳನ್ನು ಪ್ರವಾಸಕ್ಕಾಗಿ ಖರ್ಚು ಮಾಡಿದರೆ ಎಂಥ ವಿಪರ್ಯಾಸ ? ಅಲ್ಲಿನ ನೌಕರರ ಬಗ್ಗೆ ಅವರಿಗೆ ಕನಿಕರವಿಲ್ಲ. ನೌಕರರನ್ನು ಬೆಂಗಳೂರಿನಿಂದ ತಾಲ್ಲೂಕು ಸ್ಥಳಗಳಿಗೆ ವರ್ಗ ಮಾಡುತ್ತಾರೆ. ಎಷ್ಟು ದಿವಸ ಇಂತಹ ಸಂಸ್ಥೆಗಳು ತಮ್ಮ ಕಾಲಮೇಲೆ ತಾವು ನಿಲ್ಲುವುದಿಲ್ಲವೋ ಅಲ್ಲಿಯವರೆಗೂ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಸ್ನೇಹಿತರಾದ ಶ್ರೀ ನಂಜಯ್ಯನಮಠ್ ಅವರು ಒಂದು ಸಂಸ್ಥೆಯನ್ನು ಕಟ್ಟಿದ್ದಾರೆ. ಅದನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ನಾನು ಜನತಾ ಪಕ್ಷದಲ್ಲಿದ್ದರೂ ಕೂಡ ಅವರು ಕಟ್ಟಿದಂತಹ ಸಂಸ್ಥೆಯನ್ನು ಮೇಲಿಂದಮೇಲೆ ಹೋಗಿ ನೋಡಿಕೊಂಡು ಬರುತ್ತೇನೆ. ಈ ಸಂಸ್ಥೆಗಳು ತಮ್ಮ ಕಾಲ ಮೇಲೆ ತಾವು ನಿಲ್ಲಬೇಕು. ಎಷ್ಟು ದಿವಸ ಈ ರಿಬೇಟ್ ಎಂಬ ಗ್ಲೂಕೋಸ್ ಕೊಟ್ಟು ಬದುಕಿಸಲು ಸಾಧ್ಯವಾಗುತ್ತದೆ ? ಇವತ್ತು ಚುನಾವಣೆ ಬಂದಾಗ ಕಾಂಗ್ರೆಸ್‌ನವರಾಗಲೀ, ಜನತಾದವರಾಗಲೀ ಖಾದಿ ಆಫೀಸ್‌ಗಳಲ್ಲಿ ತಮ್ಮ ಪಕ್ಷಗಳ ಚುನಾವಣಾ ಪ್ರಚಾರ ಆಫೀಸ್‌ಗಳನ್ನು ತೆರೆಯಲು ಹಾಗೂ ಪ್ರಚಾರ ಕಾರ್ಯ ಮಾಡಲು ಖಾದಿ ಆಫೀಸ್‌ಗಳನ್ನು ಉಪಯೋಗ ಮಾಡುವ ಪರಿಪಾಠವಾಗಿದೆ. ಇದರ ಬಗ್ಗೆ ಸಚಿವ ಮಹಾಶಯರು ಆಸಕ್ತಿ ವಹಿಸಿ ಮುಂದಿನ ಕ್ರಮ ತೆಗೆದುಕೊಳ್ಳಬೇಕು. ಈ ಖಾದಿ ಗ್ರಾಮೋದ್ಯೋಗ ಮಂಡಲಿ ಎನ್ನುವ ಬಿಳಿಯಾನೆಯನ್ನು ನೀವು ಸಾಕುವುದಾದರೆ ಸರಿಯಾದ ಅಂಕುಶ ಹಾಕಿ ಸಾಕಿ ಇಲ್ಲದಿದ್ದರೆ ಬಿಳಿಯಾನೆಯನ್ನು ಯಾವ ಖೆಡ್ಡಾದಲ್ಲಿ ಕೆಡಬೇಕೋ ಅಲ್ಲಿ ಕೆಡವಿ. ನಾನೊಬ್ಬ ಖಾದಿ ಕಾರ್ಯಕರ್ತನ ಮಗ. ನನ್ನ ಬನಿಯನ್ ಜುಬ್ಬಗಳನ್ನೂ ಖಾದಿಯಲ್ಲೇ ಬಳಸುತ್ತೇನೆ. ಆದರೆ ಏನಾಗಿದೆ ಎಂದರೆ ಖಾದಿ ಮೀಟಿಂಗ್‌ಗೆ ಬರುವಾಗ ಖಾದಿ ಜುಬ್ಬ ಹಾಕಿಕೊಂಡು ಬಂದು ಮನೆಗೆ ಹೋದ ಮೇಲೆ ಮಿಲ್ಲಿನ ಬಟ್ಟೆಯನ್ನು ಹಾಕ್ಕೊಂಡು ಓಡಾಡುವಂತಹ ಜನ ಈ ಖಾದಿ ಮಂಡಲಿಯಲ್ಲಿ ಸೇರಿ ಕೊಂಡಿದ್ದಾರೆ. ಖಾದಿ ಚಳುವಳಿಯಲ್ಲಿ ಯಾರು ದುಡಿದರೋ ಅವರಿಗೆ ನಿಜವಾಗಿ ಎಲ್ಲ ರೀತಿಯ ಪ್ರೋತ್ಸಾಹವನ್ನೂ ಸರ್ಕಾರ ನೀಡಬೇಕು. ಖಾದಿ ಬಗ್ಗೆ ಅಪಾರ ಪ್ರೇಮವಿರುವ ಜನರನ್ನು ಮಾತ್ರ

ಅಲ್ಲಿ ಅಧಿಕಾರಿಗಳನ್ನಾಗಿ ನೇಮಿಸಬೇಕು. ಬಿಜಾಪುರದಲ್ಲಿ ೧೫ ವರ್ಷಗಳ ಹಿಂದೆ ಗ್ರಾಮೋದ್ಯೋಗ ಅಧಿಕಾರಿಯಾಗಿ ಬರಿಗಾಲಲ್ಲಿ ಲೋಟ ಹಿಡಿದುಕೊಂಡು ಬಂದ ಒಬ್ಬ ಈಗ ಬೆಂಗಳೂರಿನಲ್ಲಿ ಮೂರು ಭವ್ಯ ಸೌಧವನ್ನು ನಿರ್ಮಾಣ ಮಾಡಿದ್ದಾನೆ. ಖಾದಿ ಹೆಸರಿನಲ್ಲಿ ಯಾವ ರೀತಿ ಸುಲಿಗೆಯಾಗುತ್ತಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಗಾಂಧೀಜಿಯವರು ಏನು ಹೇಳಿದ್ದಾರೆ ಎಂದರೆ ಖಾದಿಯಿಂದ ನಮ್ಮ ಬಡ ಜನರಿಗೆ ರೋಟಿ ಕೊಡುವ ಉದ್ದೇಶ ಇರಬೇಕು. ಸರ್ಕಾರದ ಕಚೇರಿಗಳಲ್ಲಿ ಸಮವಸ್ತ್ರವನ್ನು ಖರೀದಿ ಮಾಡುವಾಗ ಬೆಡ್‌ಶೀಟ್ ಪರದೆಗಳಿಗೆ ಬಾಂಬೆ ಡೈಯಿಂಗ್ ಮುಂತಾದ ಕಂಪನಿಗಳಿಂದ ಕೊಂಡುಕೊಳ್ಳುತ್ತಾರೆ. ಹಾಗೂ ನಮ್ಮ ಶಾಸಕರ ಭವನದಲ್ಲಿ ಬೆಡ್‌ಶೀಟ್ ಹಾಗೂ ಸರ್ಕಾರಿ ಅತಿಥಿ ಗೃಹಗಳಲ್ಲಿ ಉಪಯೋಗಿಸುವಂಥ ಬಟ್ಟೆಗಳನ್ನು ಬಾಂಬೆ ಡೈಯಿಂಗ್ ಕಂಪನಿಗಳಿಂದ ತೆಗೆದುಕೊಳ್ಳುವುದನ್ನು ನಿಲ್ಲಿಸಿ ಖಾದಿ ಮಂಡಲಿಗಳಿಂದ ಖರೀದಿಸಿಕೊಂಡರೆ ಸಾಕು ಎಲ್ಲರಿಗೂ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ನಮ್ಮ ಸರ್ಕಾರಿ ನೌಕರರ ಸಮವಸ್ತ್ರಗಳ ಮೇಲೆ ಕೋಟ್ಯಂತರ ಖರ್ಚು ಮಾಡುವುದನ್ನು ಕೈಬಿಟ್ಟು ಅದಕ್ಕಾಗುತ್ತಿರುವ ಶೇಕಡ ೨೫ ರಷ್ಟು ಹಣದಲ್ಲೇ ಖಾದಿ ವಸ್ತ್ರಗಳನ್ನು ನೌಕರರಿಗೆ ಕೊಡಬಹುದು. ಇದರಿಂದ ಕರ್ನಾಟಕದಲ್ಲಿ ಲಕ್ಷಾಂತರ ಬಡವರು ಸಂತೋಷಪಡುತ್ತಾರೆ. ಹಾಗೂ ಬದುಕಿಕೊಳ್ಳುತ್ತಾರೆ.

ನಮ್ಮ ಸರ್ಕಾರಿ ಕಾಯಿದೆ ಪ್ರಕಾರ ಕಾರ್ಮಿಕನಿಗೆ ದಿನಕ್ಕೆ ರೂ. ೭.೮೦ ಪೈಸೆ ಸಿಗಬೇಕು. ಆದರೆ ಅಂಬರ್ ಚರಕ ನೂಲುವವನಿಗೆ ಮೂರರಿಂದ ೪ರ ವರೆಗೆ ಸಿಗುತ್ತಿದೆ. ಖಾದಿ ಗ್ರಾಮೋದ್ಯೋಗಕ್ಕೆ ಎಲ್ಲ ರೀತಿಯ ಉತ್ತೇಜನ ಕೊಡಬೇಕು. ಅಲ್ಲಿರತಕ್ಕಂಥ ನ್ಯೂನತೆಗಳನ್ನು ಹೊರಕ್ಕೆ ತೆಗೆಯಬೇಕು. ಅಲ್ಲಿ ಕೆಲಸ ಮಾಡುವ ನಿಜವಾದ ಕಾರ್ಮಿಕರಿಗೆ ದುಡ್ಡು ಸಿಗುವಂತ ವ್ಯವಸ್ಥೆ ಆಗಬೇಕು.

ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಕೆಲವಾರು ಸಮಸ್ಯೆಗಳಬಗ್ಗೆ ಬೆಳಕನ್ನು ಚೆಲ್ಲಿದ್ದೇನೆ. ಇದರ ಬಗ್ಗೆ ವಿಶೇಷ ನಿಗಾವಹಿಸಿ ಅಲ್ಲಿರತಕ್ಕಂಥ ಎಲ್ಲ ನ್ಯೂನತೆಗಳನ್ನು ಕೂಡಲೇ ಸರಿಪಡಿಸಬೇಕು. ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಲಸಗಳನ್ನು ಮಾಡುತ್ತಾರೆಂದು ನಂಬಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ್ (ಬಹಾದ್ದೂರ).—ಮಾನ್ಯ ಅಧ್ಯಕ್ಷರೇ. ಕೈಗಾರಿಕಾ ಸಚಿವರು ಹಾಗೂ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ತಮ್ಮ ಇಲಾಖೆಯ ವೆಚ್ಚಕ್ಕಾಗಿ ಏನು ಬೇಡಿಕೆಯನ್ನು ಮಂಡಿಸಿದ್ದಾರೆ ಅದನ್ನು ಕೆಲವೊಂದು ಕಾರಣಕ್ಕಾಗಿ ನಾನು ವಿರೋಧಿಸುತ್ತೇನೆ. ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ ಗ್ರಾಮಾಂತರ ಪ್ರದೇಶದಲ್ಲಿ ಯಾರು ಉದ್ಯಮಗಳನ್ನು ಸ್ಥಾಪಿಸಬೇಕೆಂದಿರುತ್ತಾರೋ ಅವರು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಮೊದಲು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಮೊದಲು ಒಂದು ಸಲ ಹೊಸ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾಗುತ್ತದೆ, ಅನಂತರ ಆ ಕೈಗಾರಿಕೆಯಲ್ಲಿ ಉತ್ಪಾದನೆ ಮಾಡುವ ಕಾಲದಲ್ಲಿ ಪರ್ಮನೆಂಟ್ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾಗುತ್ತದೆ. ಹೊಸ ಉದ್ದಿಮೆಗಳಿಗೆ ಸರ್ಕಾರ ಕೆಲವು ಸವಲತ್ತುಗಳನ್ನು, ಕೆಲವು ರಿಯಾಯಿತಿಗಳನ್ನು ಕೊಟ್ಟಿದೆ. ಈ ವಿನಾಯಿತಿ ಪಡೆಯಲು ಉದ್ದಿಮೆದಾರರು ಮೊದಲು ಹೊಸ ನೋಂದಣಿ ಸರ್ಟಿಫಿಕೇಟ್‌ನ್ನು ಪಡೆಯಲು ಮತ್ತೊಮ್ಮೆ ಅಪ್ಲಿಕೇಷನ್ ಕೊಡಬೇಕು. ಆದುದರಿಂದ ನಾನು ಇದರ ಬಗ್ಗೆ ಹೇಳುವುದೇನೆಂದರೆ ಹೀಗೆ ಅವರು ಮತ್ತೊಮ್ಮೆ ಅಪ್ಲಿಕೇಷನ್ ಕೊಡುವ ಬದಲು ಒಂದೇ ಸಾರಿ ಪರ್ಮನೆಂಟ್ ಆಗಿ ಹೊಸ ನೋಂದಣಿ ಸರ್ಟಿಫಿಕೇಟ್ ಕೊಟ್ಟುಬಿಟ್ಟರೆ ಉದ್ದಿಮೆಗಾರರಿಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಇನ್ನೊಂದು ವಿಷಯ ಏನೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಉದ್ಯಮಗಳನ್ನು ಪ್ರಾರಂಭಿಸಿದರೆ, ಅವರು ಏನೋ ಒಂದು ದೊಡ್ಡ ಅದ್ಭುತ ಸಾಧನೆ ಮಾಡುತ್ತೇವೆಂದು ಹೊರಟಾಗ ವಿದ್ಯುತ್ ಕೊರತೆಯಿಂದಾಗಿ ಬಹಳ ಕಷ್ಟಪಡುತ್ತಿದ್ದಾರೆ. ಅವರ ಗೋಳು ಹೇಳುವುದಕ್ಕಾಗುವುದಿಲ್ಲ, ಅದು ಅನುಭವ ಇರುವವರಿಗೆ ಗೊತ್ತಿದೆ. ಉದಾಹರಣೆಗೆ ಕರಾವಳಿ ಪ್ರದೇಶದಲ್ಲಿ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐಸ್ ಪ್ಲಾಂಟ್ ಸುಮಾರು ೯೦ಕ್ಕೂ ಜಾಸ್ತಿ ಇದೆ. ೮೦ ಪರ್ಸೆಂಟ್‌ನಷ್ಟು ಗ್ರಾಮಾಂತರ ಪ್ರದೇಶದಲ್ಲೂ ಇದೆ. ಗ್ರಾಮಾಂತರ ಪ್ರದೇಶದಲ್ಲೇ ವಿದ್ಯುತ್ ಕೊರತೆ ಬಹಳ ಇದೆ. ಅಲ್ಲಿ ಲೋ ಷೆಡ್ಡಿಂಗ್ ೬ ಗಂಟೆ ಕಾಲ ಇರುವುದರಿಂದ ಈ ಐಸ್ ತಯಾರಿಕಾ ಘಟಕದವರು ಬಹಳ ತೀವ್ರ ಕಷ್ಟವನ್ನು ಎದುರಿಸುತ್ತಿದ್ದಾರೆ. ಮತ್ಸ್ಯೋದ್ಯಮದವರು ಈ ಉದ್ದಿಮೆಯನ್ನೇ ಅವಲಂಭಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಐಸ್ ಇಲ್ಲದೇ ಹೋದರೆ ಅದು ಕೊಳೆತಹೋಗುವ

ಸಂದರ್ಭ ಉಂಟು. ಈ ಉದ್ದಿಮೆದಾರರಿಗೆ ಇದರಿಂದ ಬಹಳ ನಷ್ಟವಾಗುತ್ತದೆ. ಅಲ್ಲದೆ ಅವರ ಪ್ರೊಡಕ್ಷನ್ ಕೂಡ ಕಡಿಮೆಯಾಗಿ ವಿದ್ಯುತ್ ದಂಡವನ್ನೂ ಸಹ ತೆರಬೇಕಾಗುತ್ತದೆ. ಈ ಒಂದು ತೊಂದರೆ ಬೇರೆ ಇನ್ನಾವ ಉದ್ಯಮದಲ್ಲೂ ಇಲ್ಲ. ಆದುದರಿಂದ ನಾನು ಮಾನ್ಯ ಕೈಗಾರಿಕಾ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಇಲ್ಲಿ ವಿದ್ಯುತ್ ಸಚಿವರೂ ಇದ್ದಾರೆ ಅವರು ಸ್ವಲ್ಪ ಕಡಿಮೆ ದರದಲ್ಲಿ ವಿದ್ಯುತ್ ಅನ್ನು ಕೊಡಿಸುವ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ೯೦ಕ್ಕಿಂತಲೂ ಹೆಚ್ಚಿಗೆ ಇರುವ ಈ ಐಸ್ ತಯಾರಿಕಾ ಘಟಕದವರಲ್ಲಿ ೮೦ ಪರ್ಸೆಂಟಿಗಿಂತಲೂ ಜಾಸ್ತಿ ಈ ಉದ್ದಿಮೆಗಳು ರೋಗಗ್ರಸ್ಥವಾಗಿ ಈ ಉದ್ದಿಮೆಗಳವರು ಸಾಲವನ್ನೂ ಮಾಡಿಕೊಂಡಿರುತ್ತಾರೆ. ಅವರು ಈ ಉದ್ಯಮವನ್ನು ಸ್ಥಾಪನೆ ಮಾಡಿದಂದಿನಿಂದ ಆರ್ಥಿಕ ಸಂಕಷ್ಟದಲ್ಲಿ ತೊಳಲಾಡುತ್ತಿದ್ದಾರೆ. ೧೯೭೫ರಿಂದ ೧೯೮೦ರವರೆಗೆ ಯಾರ್ಯಾರು ಐಸ್‌ಪ್ಲಾಂಟ್ ಅನ್ನು ಸ್ಥಾಪನೆ ಮಾಡಿದರೋ ಅವರಿಗೆ ಸಬ್ಸಿಡಿಯೂ ಸಿಕ್ಕಿಲ್ಲ. ೧೯೭೫ಕ್ಕಿಂತ ಮೊದಲು, ೧೯೮೦ರ ನಂತರ ಸ್ಥಾಪನೆ ಮಾಡಿದವರಿಗೆ ಸಬ್ಸಿಡಿ ಸಿಕ್ಕಿದೆ. ಆ ಸಂದರ್ಭದಲ್ಲಿ ೧೦-೧೫ ಜನರು ಈ ಐಸ್ ಪ್ಲಾಂಟ್‌ನ್ನು ಏನು ಸ್ಥಾಪನೆ ಮಾಡಿದರೋ ಅವರಿಗೆ ಸಬ್ಸಿಡಿ ಸಿಕ್ಕಿಲ್ಲ. ಈ ಬಗ್ಗೆ ಸರ್ಕಾರ ಅವರ ಬಗ್ಗೆ ಒಂದು ನಿರ್ಧಾರ ತೆಗೆದುಕೊಂಡು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ, ಗ್ರಾಮಾಂತರ ಪ್ರದೇಶದಲ್ಲಿ ೬ ಗಂಟೆಗಳ ಕಾಲ ಲೋಡ್‌ಷೆಡ್ಡಿಂಗ್ ಆಗುವುದರಿಂದ ಅಲ್ಲಿ ಯಾರು ಈ ಐಸ್ ಪ್ಲಾಂಟ್ ಸ್ಥಾಪಿಸಿದ್ದಾರೋ ಅವರಿಗೆ ತುಂಬಲಾರದ ನಷ್ಟ ಉಂಟಾಗಿದೆ. ಇದರಲ್ಲಿ ಅನುಭವದ ಕೆಲಸಗಾರರ ಕೊರತೆ ಇದೆ, ಕೆಲವರು ಇದರಿಂದ ಬಹಳ ದೂರ ಸರಿದಿದ್ದಾರೆ. ಹೊಸದಾಗಿ ಕೆಲಸಕ್ಕೆ ಸೇರಿಸಿಕೊಂಡರೆ ಅವರಿಗೆ ಸರಿಯಾಗಿ ಕೆಲಸ ಗೊತ್ತಿರುವುದಿಲ್ಲ. ಅವರಿಗೆ ಒಂದು ವಿದ್ಯುತ್ ಕೊರತೆ ಇನ್ನೊಂದು ಕೆಲಸಗಾರರ ಕೊರತೆ ಈ ಎರಡು ತರಹ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಈ ಕಷ್ಟಗಳು ಬರೇ ಗ್ರಾಮಾಂತರ ಪ್ರದೇಶದ ಜನರಿಗೆ ಸಂಬಂಧಪಟ್ಟದ್ದು ಅಂತಲ್ಲ ಪಟ್ಟಣದಲ್ಲಿರುವ ಐಸ್ ಪ್ಲಾಂಟ್‌ನವರಿಗೂ ಕೂಡ ವಿದ್ಯುತ್ ಕಡಿತ ಮಾಡಿರುವುದರಿಂದ ಅವರಿಗೂ ಬಹಳ ಕಷ್ಟವಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮಾನ್ಯ ಅಧ್ಯಕ್ಷರೇ, ಇನ್ನು ಹೊಸ ಉದ್ಯಮಗಳನ್ನು ಸ್ಥಾಪನೆ ಮಾಡುವಾಗ ಅವರಿಗೆ ಮೂರು ವಿವಿಧ ಮೂಲಗಳಿಂದ ಹಣವನ್ನು ತೊಡಗಿಸುತ್ತಾರೆ. ಒಂದೇ ಪ್ರದೇಶದ ಎಲ್ಲ ಯೂನಿಟ್ಸ್‌ಗಳು ಇದ್ದರೆ ಅಲ್ಲಿಯ ಕೆಲಸಗಾರರಿಗೆ ಆರೋಗ್ಯ ಸರಿಯಾಗಿರದೆ ಎಲ್ಲ ರೋಗಗಳೂ ಬರುತ್ತದೆ. ಈ ಹಂಜಿ ಉದ್ಯಮದವರಿಗೆ ಒಂದು ಕಡೆ ಖಾದೀ ಗ್ರಾಮೋದ್ಯೋಗದವರು ಹಣ ಕೊಡುತ್ತಾರೆ ಇನ್ನೊಂದು ಕಡೆ ಕೆ.ಎಫ್.ಸಿ.ಯವರು ಹಣ ಕೊಡುತ್ತಾರೆ, ಮತ್ತೊಂದು ಕಡೆ ರಾಷ್ಟ್ರೀಕೃತ ಬ್ಯಾಂಕ್‌ನವರೂ ಹಣ ಕೊಡುತ್ತಾರೆ. ಇವರಿಗೆ ವಿವಿಧ ಮೂಲಗಳಿಂದ ಹಣ ದೊರೆಯುತ್ತದೆ. ಒಂದೇ ಪ್ರದೇಶದಲ್ಲೇ ಒಂದೇ ಯೂನಿಟ್‌ಗೆ, ಒಂದೇ ಉದ್ಯಮಕ್ಕೆ ಈ ರೀತಿಯಾಗಿ ಹಣ ಕೊಟ್ಟರೆ ಅವರು ಯಾವ ರೀತಿಯಾಗಿ ಸಾಲ ತೀರಿಸಬೇಕು ಎನ್ನುವುದನ್ನು ತಾವು ಯೋಚನೆ ಮಾಡಬೇಕು ಮಾನ್ಯ ಅಧ್ಯಕ್ಷರೇ, ಇನ್ನು ದಲಿತ ವರ್ಗದವರಲ್ಲಿ ಹಾಗೂ ಹಿಂದುಳಿದ ವರ್ಗದವರಲ್ಲಿ ಎಷ್ಟು ಜನರು ತಮ್ಮ ಪದವಿಯನ್ನು ಮುಗಿಸಿಕೊಂಡಿರುತ್ತಾರೆ ಆ ಬಡ ವರ್ಗದವರಿಗೆ ಆರ್ಥಿಕ ಬಂಡವಾಳ ಕೊಟ್ಟು ಅಥವಾ ಬಾಡಿಗೆ ದರದಲ್ಲಾದರೂ ಯೂನಿಟ್ಸ್‌ಗಳನ್ನು ಕೊಟ್ಟು ಸಣ್ಣಪುಟ್ಟ ಉದ್ದಿಮೆಗಳನ್ನು ಸ್ಥಾಪನೆ ಮಾಡುವ ಹಾಗೆ ಅವಕಾಶವನ್ನು ಮಾಡಿಕೊಟ್ಟರೆ ನಿಜವಾಗಿಯೂ ಅವರೆಲ್ಲರೂ ಮುಂದುವರೆಯುತ್ತಾರೆ, ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶ್ಚಿಮ ಘಟ್ಟದ ಬಗ್ಗೆ ಹೇಳುವುದಾದರೆ ಅಲ್ಲಿ ಬೆತ್ತ ವಿಪರೀತವಾಗಿ ಸಿಕ್ಕುತ್ತದೆ. ಅದರಿಂದ ಪೀಠೋಪಕರಣಗಳನ್ನು ಮಾಡಬಹುದು, ಈ ಉದ್ದಿಮೆಯನ್ನು ಮಾಡುವುದಕ್ಕೆ ಆ ಜನಾಂಗದವರೇ ಇದ್ದಾರೆ, ಇದಲ್ಲದೆ ಗಂಧದ ಮರದಲ್ಲಿ ಕರಕುಶಲ ವಸ್ತುಗಳನ್ನು ತಯಾರು ಮಾಡುವುದು, ಕಂಚು ಹಿತ್ತಾಳೆಯಲ್ಲಿ ಕರಕುಶಲ ವಸ್ತುಗಳನ್ನು ತಯಾರು ಮಾಡುವುದು ಹೀಗೆ ಹಲವಾರು ಸಣ್ಣಸಣ್ಣ ಉದ್ದಿಮೆಗಳು ಇವೆ. ಅದನ್ನು ಪ್ರಾರಂಭಿಸಿದರೆ ಹೊರಗಡೆಯಲ್ಲಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಳ್ಳಬಹುದು. ಹಾಗೆಯೇ ಕರ್ನಾಟಕದಲ್ಲಿ ಹೆಸರಾಂತ ಶಿಲ್ಪಿಗಳು ಇದ್ದಾರೆ. ಈ ಗುಡಿ ಕೈಗಾರಿಕಾ ವ್ಯಾಪ್ತಿಯಲ್ಲಿಯಾಗಲಿ ಅಥವಾ ವ್ಯಕ್ತಿಗತವಾಗಲಿ ಅಥವಾ ಸಾಮೂಹಿಕವಾಗಿ ಆಗಲಿ ಇವನ್ನೆಲ್ಲಾ ಸಣ್ಣ ಕೈಗಾರಿಕಾ ರಂಗಕ್ಕೆ ಬರುವ ಹಾಗೆ ಮಾಡಿದರೆ ಅದರಿಂದ ಬೇಕಾದ ಹಾಗೆ ವಸ್ತುಗಳನ್ನು

ಉತ್ಪಾದಿಸಬಹುದು. ಅಲ್ಲದೆ ಅದಕ್ಕೆ ಹೊರಗಡೆ ಅಪಾರವಾದ ಬೇಡಿಕೆ ಇರುವುದರಿಂದ ವಿದೇಶ ವಿನಿಮಯವೂ ಸಹ ಚೆನ್ನಾಗಿ ಸಿಕ್ಕುತ್ತದೆ. ಈಗ ಇಂತಹ ಕೈಗಾರಿಕೆಗಳಲ್ಲಿ ತೊಡಗಿರುವ ಜನರು ಇತ್ತ ಸಾಯುವುದೂ ಇಲ್ಲ, ಅತ್ತ ಬದುಕುವುದೂ ಇಲ್ಲ. ಅಂಥಾ ಸ್ಥಿತಿಯಲ್ಲಿ ಇರಿಸಿದ್ದೇವೆ. ಇನ್ನೊಂದು ಕಡೆ, ವ್ಯಾಪಾರಿ ಜನರು ಇವರನ್ನು ಶೋಷಣೆ ಮಾಡುತ್ತಿರುವಾಗ ಸಣ್ಣ ಕೈಗಾರಿಕಾರಂಗದಲ್ಲಿ ಯಾವುದೇ ರೀತಿಯಲ್ಲಿ ಆಕರ್ಷಕ ಕಾರ್ಯಕ್ರಮದಿಂದ ಇವರನ್ನು ಮೇಲೆತ್ತುವ ಕೆಲಸ ಆಗಿಲ್ಲ, ಇದಕ್ಕಾಗಿ ನಾನು ವಿಷಾದಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ದೊಡ್ಡ ಉದ್ಯಮಗಳಿಗೆ ಬೇಕಾಗುವ ಹಲವಾರು ವಸ್ತುಗಳನ್ನು ಸ್ಥಳೀಯವಾಗಿರತಕ್ಕ ಸಣ್ಣ ಉದ್ಯಮಗಳ ವ್ಯಾಪ್ತಿಯಲ್ಲಿ ಉತ್ಪಾದನೆ ಮಾಡಬೇಕು, ಮಂಗಳೂರಿನ ರಸಗೊಬ್ಬರ ಕಾರ್ಖಾನೆಗೆ ೨೫೦ ವಸ್ತುಗಳು ಬೇಕಾಗಿತ್ತು. ಅವುಗಳಲ್ಲಿ ಹಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ ಇಂತಹವನ್ನು ಸ್ಥಳೀಯವಾಗಿ ಉತ್ಪಾದಿಸಿದರೆ ವಿದೇಶಿ ವಿನಿಮಯವನ್ನು ಉಳಿಸಬಹುದು ಮತ್ತು ಸ್ಥಳೀಯ ಜನರಿಗೆ ಉದ್ಯೋಗ ದೊರಕಿಸಬಹುದು ಎಂದು ನಾನು ಹೇಳಬಯಸುತ್ತೇನೆ. ಇನ್ನು ಕರ್ನಾಟಕ ಸಣ್ಣ ಉದ್ದಿಮೆದಾರರ ಪಾತ್ರ ಬಹಳ ಮಹತ್ತರವಾದದ್ದು. ಆದುದರಿಂದ ಸರ್ಕಾರ ಏನಾದರೂ ಈ ರಂಗಕ್ಕೆ ಸೂಕ್ತ ಗಮನಹರಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಉದ್ದಿಮೆಗಳನ್ನು ಸ್ಥಾಪಿಸಿದ ಉದ್ದಿಮೆದಾರರ ಸಂಕಷ್ಟಗಳನ್ನು ಮನಗಂಡು, ಅವರ ಕಷ್ಟಗಳನ್ನು ನಿವಾರಿಸಲಿಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ, ನನಗೆ ಈ ಒಂದು ಅವಕಾಶವನ್ನು ದಯಪಾಲಿಸಿದ್ದಕ್ಕಾಗಿ ತಮಗೆ ಅನಂತಾನಂತ ಧನ್ಯವಾದಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಈ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಇಂದಿನ ಸಭೆ ಮುಕ್ತಾಯವಾಗಿ ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಪುನ: ಸೇರುತ್ತದೆ.

(ಸಭೆಯು ೮ ಗಂಟೆ ೫೨ ನಿಮಿಷಕ್ಕೆ ಮುಕ್ತಾಯವಾಗಿ ಪುನ: ದಿನಾಂಕ ೨೨ನೇ ಆಗಸ್ಟ್ ಮಾಹೆ ೧೯೬೮ರ ಗುರುವಾರ ಬೆಳಿಗ್ಗೆ ೯-೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.)